# ಮಾನವಿಕ ಕರ್ಣಾಟಕ

ಸಂಪುಟ ೫ ಸಂಚಿಕೆ ೩

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೫

# ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು-೫೭೦೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

# ಮಾನವಿಕ ಕರ್ಣಾಟಕ

ಸಂಪುಟ ೫ ಸಂಚಿಕೆ ೩

೧೯

ನೇ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೫

*MANAVIKA KARNATAKA*, Kannada quarterly of the University of Mysore. Volume 5, Number 3, May 1975. Edited by H. S. Krishnaswamy Iyenger and Dr. A. V. Narasimha Murthy



ಪ್ರಧಾನ ಸಂಪಾದಕರು

**ಡಾ. ಹಾ. ಮಾ. ನಾಯಕ**

ಸಂಪಾದಕರು

**ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್**

**ಡಾ. ಎ. ವಿ. ನರಸಿಂಹಮೂರ್ತಿ**

ಪ್ರಕಾಶಕರು

**ಡಾ. ಪ್ರಭುಶಂಕರ**

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಶ್ರೀ ಮೀರಾ ಪ್ರಿಂಟರ್‍ಸ್, ಶಿವರಾಂ ಪೇಟೆ, ಮೈಸೂರು

# ವಿಷಯಸೂಚಿ

# ಈ ಸಂಚಿಕೆಯ ಲೇಖನಗಾರರು

ಶ್ರೀಯುತರಾದ

೧ **ಜಿ. ಎನ್. ಕುರ್ಡಿ,** ನ್ಯಾಯವಾದಿಗಳು ಮತ್ತು ವ್ಯಾಪಾರ ಚಿಹ್ನೆ ಸಲಹೆಗಾರರು, 67/ಬಿ ಪದ್ಮಾ ನಿಲಯ, ಸರಸ್ವತೀಪುರ ಹೊಸ ಬಡಾವಣೆ, ಮೈಸೂರು 570009

೨ **ಎಂ. ಹನುಮಂತರಾವ್,** ಶಾಸನ ಸಹಾಯಕರು, ಎಪಿಗ್ರಾಫಿಯ ಕರ್ನಾಟಿಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ

೩ **ಕೆ. ಮೊಹಮ್ಮದ್ ಷರೀಫ್,** ಶಾಸನ ಸಹಾಯಕರು, ಎಪಿಗ್ರಾಫಿಯ ಕರ್ನಾಟಿಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ

೪ **ಜಿ. ಟಿ. ನಾರಾಯಣರಾವ್,** ವಿಜ್ಞಾನ ಸಂಪಾದಕರು, ಕನ್ನಡ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ

೫ **ಎನ್. ಪ್ರಭುಸ್ವಾಮಿ,** ಸ್ನಾತಕೋತ್ತರ ಅರ್ಥಶಾಸ್ತ್ರ ವಿಭಾಗ, ಮಾನಸಗಂಗೋತ್ರಿ

೬ **ವಿ. ಎನ್. ಶೇಷಗಿರಿರಾವ್,** ತತ್ತ್ವಶಾಸ್ತ್ರ ಅಧ್ಯಾಪಕರು, ಮಹಾರಾಜ ಕಾಲೇಜು, ಮೈಸೂರು

೭ **ಕೆ. ಎಸ್. ದೇಶಪಾಂಡೆ,** ಗ್ರಂಥಪಾಲರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೮ **ಬಾ. ವೇ. ಶ್ರೀಧರ್,** ಸಹಾಯಕ ಸಂಪಾದಕರು, ಇಂಗ್ಲಿಷ್ - ಕನ್ನಡ ನಿಘಂಟು, ಪ್ರಸಾರಾಂಗ

೯ **ಎಚ್. ಎಂ. ರಾಜಶೇಖರ,** ಅಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಮಾನಸಗಂಗೋತ್ರಿ

೧೦ **ಎ. ವಿ. ನರಸಿಂಹಮೂರ್ತಿ (ಡಾ.),** ಮಾನವಿಕ **ಕರ್ಣಾಟಕದ** ಸಂಪಾದಕರಲ್ಲೊಬ್ಬರು ; ಪ್ರಾಧ್ಯಾಪಕರು ಮತ್ತು ಮುಖ್ಯರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಮಾನಸಗಂಗೋತ್ರಿ

ಜಿ. ಎಸ್. ಕುರ್ಡಿ

# ವ್ಯಾಪಾರ ಚಿಹ್ನೆ

ನಾವು ಮಾರುಕಟ್ಟೆಗಳಲ್ಲಿ ಕೊಂಡುಕೊಳ್ಳುವ ಸರಕುಗಳಲ್ಲಿ ಕೆಲವೊಂದನ್ನು ಬಿಟ್ಟರೆ ಉಳಿದ ವೆಲ್ಲವುಗಳಿಗೆ ಒಂದಿಲ್ಲೊಂದು ವ್ಯಾಪಾರ ಚಿಹ್ನೆ ಅಥವಾ ಛಾಪು (ಟ್ರೇಡ್ ಮಾರ್ಕ್) ಲಗತ್ತಾಗಿ ಇರುತ್ತದೆ. ಅನೇಕ ಸಲ ನಾವು ಅಂಗಡಿಕಾರರಿಗೆ ವ್ಯಾಪಾರ ಚಿಹ್ನೆಗಳನ್ನು ಹೇಳಿಯೇ ಸರಕುಗಳನ್ನು ಕೊಳ್ಳುತ್ತೇವೆ. ಆ ಸರಕುಗಳನ್ನು ತಯಾರಿಸುವ ಸಂಸ್ಥೆಗಳ ಹೆಸರುಗಳನ್ನು ಹೇಳುವ ಅಗತ್ಯ ನಮಗೆ ಬೀಳುವುದಿಲ್ಲ. ಕೆಲವು ಸಂದರ್ಭಗಳಲ್ಲಿ ದೀರ್ಘಕಾಲದ ಹಾಗೂ ಅಧಿಕ ಪ್ರಮಾಣದ ಉಪಯೋಗದ ಅನಂತರ ವ್ಯಾಪಾರ ಚಿಹ್ನೆಗಳು ಅವುಗಳೊಡನೆ ಸಂಬಂಧವಿದ್ದ ಸರಕುಗಳ ಹೆಸರುಗಳಂತೆಯೇ ಬಳಕೆಯಲ್ಲಿ ಬರುವುದುಂಟು. ಉದಾಹರಣೆಗಾಗಿ ಗ್ಯಾಸ್ ಲೈಟ್, ಗ್ರಾಮೋಫೋನ್ ಮತ್ತು ವ್ಯಾಸಲೀನ್ ಎಂಬ ಪದಗಳು. ಇವು ಒಂದು ಕಾಲದಲ್ಲಿ ವ್ಯಾಪಾರ ಚಿಹ್ನೆಗಳೇ ಆಗಿದ್ದರೂ ಈಗ ಸರಕುಗಳ ಹೆಸರುಗಳೆಂದೇ ಎಣಿಸಲ್ಪಡುತ್ತಿವೆ. ಇವನ್ನು ಟ್ರೇಡ್ ಮಾರ್ಕುಗಳೆಂದು ಯಾರೂ ತಿಳಿಯುವದಿಲ್ಲ.

ವ್ಯಾಪಾರ ಚಿಹ್ನೆಯೆಂದರೆ ಅದು ಅಂಟಿಕೊಂಡಿರುವ ಸರಕಿನ ವ್ಯಾಪಾರೀ ಮೂಲವನ್ನು ಅಥವಾ ಆ ಸರಕು ಯಾವ ಮೂಲದಿಂದ ಮಾರುಕಟ್ಟೆಗೆ ಬಂದಿದೆಯೆಂಬದನ್ನು ಸೂಚಿಸುವ ಚಿಹ್ನೆಯೆಂದು ಸ್ಥೂಲವಾಗಿ ಹೇಳಬಹುದು. ಒಂದು ಸರಕು ಮಾರುಕಟ್ಟೆಗೆ ಬರುವ ಮೊದಲು ಅದರ ತಯಾರಿಕೆಯಲ್ಲಿ ಅಥವಾ ಅದನ್ನು ಪೂರ್ಣಗೊಳಿಸುವುದರಲ್ಲಿ ಭಾಗವಹಿಸಿದವರೆಲ್ಲರೂ ಆ ಸರಕಿನ ಮೇಲೆ ತಮ್ಮದೇ ಆದ ವ್ಯಾಪಾರ ಚಿಹ್ನೆಗಳನ್ನು ಅಂಟಿಸಬಹುದಾಗಿದೆ. ವ್ಯಾಪಾರ ಚಿಹ್ನೆ ತಯಾರಿಕೆದಾರನ ನಿರ್ಮಾಪಕನದಾಗಿರಬಹುದು. ಬಣ್ಣ ಹಾಕಿದವನದಾಗಿರಬಹುದು ಆಯ್ದವನದಾಗಿರಬಹುದು ಇಲ್ಲವೇ ಆಮದು ಮಾಡಿದವನದಾಗಿರಬಹುದು ಒಂದೊಂದು ಸಲ ಒಂದೇ ಸರಕಿನ ಮೇಲೆ ನಾವು ಒಂದಕ್ಕಿಂತ ಹೆಚ್ಚು ವ್ಯಾಪಾರ ಚಿಹ್ನೆಗಳನ್ನು ಕಾಣಬಹುದು. ಉದಾಹರಣೆಗಾಗಿ ಹೊಲಿದು ಸಿದ್ಧಪಡಿಸಿದ ಶರ್ಟೊಂದರ ಮೇಲೆ ಟೆರೀನ್, ಸ್ಯಾನ್‌ಫರೈಸ್ಡ ಮತ್ತು ಲಿಬರ್ಟಿ ಎಂಬ ಮೂರು ವ್ಯಾಪಾರ ಚಿಹ್ನೆಗಳು ಇರಬಹುದು. ಇವು ಬೇರೆ ಬೇರೆ ಸಂಸ್ಥೆಗಳ ಚಿಹ್ನೆಗಳಾಗಿದ್ದು ಶರ್ಟಿನ ತಯಾರಿಕೆಯಲ್ಲಿ ಆ ಸಂಸ್ಥೆಗಳ ಪಾತ್ರ ಇರುವುದನ್ನು ಸೂಚಿಸುತ್ತವೆ. ಚಿಲ್ಲರೆ ವ್ಯಾಪಾರಿಗಳೂ ಸರಕುಗಳ ಮೇಲೆ ತಮ್ಮವೇ ಆದ ವ್ಯಾಪಾರ ಚಿಹ್ನೆಗಳನ್ನು ಅಂಟಿಸಬಹುದು. ಉದಾಹರಣೆಗೆ ಚಿಕ್ಕ ನೀಲಗಿರಿ ಎಣ್ಣೆಯ ಬಾಟಲಿಗಳ ಮೇಲೆ ಕಂಡುಬರುವ ವ್ಯಾಪಾರ ಚಿಹ್ನೆಗಳು. ಸರಕು ಒಮ್ಮೆ ಗ್ರಾಹಕನ ಕೈಸೇರಿದ ಅನಂತರ ಅದನ್ನು ದುರಸ್ತಿ ಮಾಡಿದವನು, ಒಗೆದವನು, ಸ್ವಚ್ಛಮಾಡಿದವನು, ಹಳೆ ಸರಕು ವ್ಯಾಪಾರಿ ಮೊದಲಾದವರು ಅಂಟಿಸುವ ಚಿಹ್ನೆಗಳು ವ್ಯಾಪಾರ ಚಿಹ್ನೆಗಳೆಂದು ಎಣಿಸಲ್ಪಡುವುದಿಲ್ಲ. ಅದರಂತೆಯೇ ನಾವು

ತೊಡುವ ಬಟ್ಟೆಯನ್ನು ಕತ್ತರಿಸಿ, ಹೊಲಿದುಕೊಡುವ ದರ್ಜಿಗಳು ಅಂಟಿಸುವ ಚಿಹ್ನೆಗಳೂ ವ್ಯಾಪಾರ ಚಿಹ್ನೆಗಳಲ್ಲ. ಅವು ಸೇವಾ ಚಿಹ್ನೆಗಳು. ವ್ಯಾಪಾರಕ್ಕಿರುವ ಸರಕುಗಳಿಲ್ಲದೆ ವ್ಯಾಪಾರ ಚಿಹ್ನೆಗಳು ಇರಲಾರವಾದ್ದರಿಂದ ಶಿಕ್ಷಣ ಸಂಸ್ಥೆಗಳು, ವೈದ್ಯರು ಮತ್ತು ಆಸ್ಪತ್ರೆಗಳು ಇಲ್ಲವೇ ಸಾರಿಗೆ ಸಂಸ್ಥೆಗಳು ಉಪಯೋಗಿಸುವ ಚಿಹ್ನೆಗಳೂ ವ್ಯಾಪಾರ ಚಿಹ್ನೆಗಳೆಂದೆನ್ನಿಸಿಕೊಳ್ಳುವುದಿಲ್ಲ.

ಒಂದು ವ್ಯಾಪಾರ ಚಿಹ್ನೆಯನ್ನು ಅಂಟಿಸಿರುವ ಅಥವಾ ಮುದ್ರಿಸಿರುವ ಸರಕುಗಳೆಲ್ಲವೂ ಒಂದೇ ಮೂಲದಿಂದ ಮಾರುಕಟ್ಟೆಗೆ ಬಂದಿವೆ, ಅವೆಲ್ಲವೂ ಒಂದೇ ಬಗೆಯಲ್ಲಿ, ಶಿಷ್ಟತೆಗೆ ಅನುಗುಣವಾಗಿ ತಯಾರಿಸಲ್ಪಟ್ಟಿವೆ, ಅವೆಲ್ಲವೂ ಏಕದರ್ಜೆಯವು, ಅವೆಲ್ಲವೂ ಸರಿಸಮಾನ ಗುಣಧರ್ಮಗಳುಳ್ಳವು ಎಂಬುದನ್ನು ಆ ಚಿಹ್ನೆ ಸಾರುತ್ತದೆ. ಅದರಿಂದ ಒಂದು ವ್ಯಾಪಾರ ಚಿಹ್ನೆಯನ್ನು ಅದು ಇರುವ ಸರಕುಗಳ ಗುಣದ ಬಗ್ಗೆ ಗ್ರಾಹಕರಿಗೆ ಭರವಸೆಯನ್ನೀಯುವ ಸಾಧನವೆಂದೆನ್ನಬಹುದಾಗಿದೆ.

ಒಂದು ಚಿಹ್ನೆಯ ಉಪಯೋಗ ಮಾರಾಟದ ಸರಕಿನ ಸಂಬಂಧದಲ್ಲಿ ಆಗುತ್ತಿದ್ದರೆ ಮಾತ್ರ ಅದು ಟ್ರೇಡ್ ಮಾರ್ಕ್ ಎಂದೆನ್ನಿಸಿಕೊಳ್ಳುವುದು. ಮಾರಾಟದ ಸರಕಿಲ್ಲದೆ ವ್ಯಾಪಾರ ಚಿಹ್ನೆ ಇರಲಾರದು. ವ್ಯಾಪಾರ ಚಿಹ್ನೆ ಒಂದು ತಯಾರಿಕೆಯ ಸರಕನ್ನು ಮಾರುಕಟ್ಟೆಯಲ್ಲಿ ದೊರಕುವ ಇನ್ನಿತರ ತಯಾರಿಕೆಗಳ ಅದೇ ಜಾತಿಯ ಸರಕುಗಳಿಂದ ಪ್ರತ್ಯೇಕಿಸುವುದಕ್ಕೆ ಸಹಾಯಕವಾಗುತ್ತದೆ. ವ್ಯಾಪಾರ ಚಿಹ್ನೆಗಳಿಲ್ಲವಾದಲ್ಲಿ ಎಲ್ಲ ತಯಾರಿಕೆಗಳ ಸರಕುಗಳೂ ಒಂದೇ ನಮೂನೆಯವಾಗಿ ಕಾಣಿಸಬಹುದಾಗಿದೆ. ಇದರಿಂದ ಗ್ರಾಹಕರಿಗೆ ತಾವು ಬಯಸುವ ಸಂಸ್ಥೆಯ ತಯಾರಿಕೆಯ ಸರಕನ್ನು ಗುರುತಿಸಿ ಕೊಂಡುಕೊಳ್ಳಲು ಕಷ್ಟಸಾಧ್ಯವಾಗುತ್ತದೆ. ಅಲ್ಲದೆ ಅಪ್ರಾಮಾಣಿಕ ವ್ಯಾಪಾರಿಗಳಿಗೆ ತಮ್ಮಲ್ಲಿರುವ ಸರಕನ್ನೇ ಗ್ರಾಹಕ ಬಯಸುತ್ತಿರುವ ಸರಕೆಂದು ಕೊಟ್ಟು ಮೋಸ ಮಾಡಲೂ ಸಾಧ್ಯವಾಗುತ್ತದೆ. ಓದುಬರಹ ತಿಳಿಯದವರಿಗಂತೂ ವ್ಯಾಪಾರ ಚಿಹ್ನೆಯಿಂದ, ತಾವು ಬಯಸುವ ಸರಕುಗಳನ್ನು ಗುರುತಿಸಲು ತುಂಬಾ ನೆರವಾಗುತ್ತದೆ. ಒಂದು ತಯಾರಿಕೆಯ ಸರಕನ್ನು ಕೊಂಡು ಉಪಯೋಗಿಸಿ ಸಂತುಷ್ಟಿ ಪಡೆದ ಗ್ರಾಹಕ ಅದೇ ತಯಾರಿಕೆಯ ಸರಕನ್ನು ಮುಂದಿನ ಸಲ ವ್ಯಾಪಾರ ಚಿಹ್ನೆಯ ಮೂಲಕ ಗುರುತಿಸಬಲ್ಲ. ಉದಾಹರಣೆಗೆ ಒಂದು ವ್ಯಾಪಾರ ಚಿಹ್ನೆ ಇರುವ ಸಾಬೂನನ್ನು ಒಂದು ಸಲ ಕೊಂಡು ಉಪಯೋಗಿಸಿ ತೃಪ್ತಿ ಪಡೆದ ಗ್ರಾಹಕ ಮುಂದಿನ ಸಲ ಆ ಚಿಹ್ನೆ ಹೊಂದಿರುವ ಸಾಬೂನನ್ನು ನೋಡಿದೊಡನೆ ಅದು ತಾನು ಹಿಂದೆ ಕೊಂಡು ಉಪಯೋಗಿಸಿ ತೃಪ್ತಿ ಪಡೆದ ಸಾಬೂನೆಂದು ಗುರುತಿಸುತ್ತಾನೆ. ಹೀಗೆ ಸರಕಿನ ವ್ಯಾಪಾರ ಹೆಚ್ಚಿ ಕೈಗಾರಿಕೆ ಬೆಳೆಯಲು ವ್ಯಾಪಾರ ಚಿಹ್ನೆಯಿಂದ ಬಹಳ ಸಹಾಯವಾಗುತ್ತದೆ.

ಪೂರ್ವದಲ್ಲಿ ಗ್ರಾಮಗಳು ಇಲ್ಲವೇ ಚಿಕ್ಕ ಚಿಕ್ಕ ಜನವಸತಿಗಳು ಘಟಕಗಳಾಗಿದ್ದಾಗ ಅವು ಹೆಚ್ಚುಕಡಿಮೆ ಸ್ವತಂತ್ರವಾಗಿ ಸ್ವಯಂಪೂರ್ಣವಾಗಿರುತ್ತಿದ್ದುವು. ಬೇಡಿಕೆಯ ಸರಕುಗಳು ಕಡಿಮೆಯಿರುತ್ತಿದ್ದ ಆ ಕಾಲದಲ್ಲಿ ಜನರಿಗೆ ಬೇಕಾಗುವ ಸರಕುಗಳನ್ನು ಜನವಸತಿಗೆ ಒಬ್ಬನೋ ಇಬ್ಬರೋ ತಯಾರಿಸುತ್ತಿದ್ದರು. ಹೀಗಾಗಿ ತಮಗೆ ಬೇಕಾಗುವ ಸರಕುಗಳು ಯಾರಲ್ಲಿ ದೊರಕುವುವು ಎಂಬುದು ಎಲ್ಲರಿಗೂ ತಿಳಿದಿರುತ್ತಿತ್ತು ಆ ಕಾಲದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸರಕುಗಳು ಹೆಚ್ಚಾಗಿ ರವಾನೆಯಾಗುತ್ತಿರಲಿಲ್ಲ ಕಾಲಕ್ರಮೇಣ ಜನವಸತಿ ಬೆಳೆಯತೊಡಗಿದಂತೆ, ಸರಕುಗಳಿಗೆ ಬೇಡಿಕೆ ಹೆಚ್ಚಿದಂತೆ ಸರಕುಗಳ ಉತ್ಪಾದಕರು ತಾವು ತಯಾರಿಸುತ್ತಿದ್ದ

ಹಾಗೂ ಸರಬರಾಜು ಮಾಡುತ್ತಿದ್ದ ಸರಕುಗಳ ಬಗ್ಗೆ ಇತರರಿಗೆ ಮಾಹಿತಿಯನ್ನೀಯುವುದಕ್ಕಾಗಿ ಆ ಸರಕುಗಳ ಇಲ್ಲವೇ ಅದಕ್ಕೆ ತೀರ ಸಂಬಂಧಿಸಿದ ವಸ್ತು ಇಲ್ಲವೇ ಪ್ರಾಣಿಗಳ ಚಿತ್ರಗಳನ್ನು ತಮ್ಮ ವಸತಿಗಳ ಎದುರಿಗೆ ತೂಗಹಾಕತೊಡಗಿದರು. ಉದಾಹರಣೆಗೆ ಹಾಲು ಬೆಣ್ಣೆ ತುಪ್ಪಗಳನ್ನು ಒದಗಿಸುವವನು ಆಕಳಿನ ಚಿತ್ರವನ್ನೂ ಮಾಂಸ ಉಣ್ಣೆಗಳನ್ನು ಒದಗಿಸುವವನು ಕುರಿಯ ಚಿತ್ರವನ್ನೂ ತೂಗಹಾಕುತ್ತಿದ್ದರು. ಮುಂದೆ ಒಂದೇ ತರದ ಸರಕನ್ನು ಅನೇಕರು ತಯಾರಿಸತೊಡಗಿದಂತೆ ಹಾಗೂ ವ್ಯಾಪಾರಿಗಳ ಮೂಲಕ ಸರಕುಗಳು ಜನರ ಕೈ ತಲಪುವಂತಾದಾಗ ಮತ್ತು ಹಾಗೆಯೇ ಸರಕುಗಳು ತಯಾರಿಕೆಯ ಪ್ರದೇಶದಿಂದ ಇತರ ಪ್ರದೇಶಗಳಿಗೆ ರಫ್ತಾಗತೊಡಗಿದಾಗ ನಿರ್ಮಾಪಕರಿಗೆ ತಾವು ಒದಗಿಸುವ ಸರಕುಗಳು ತಮ್ಮ ತಯಾರಿಕೆಯವೆಂದು ಗ್ರಾಹಕರಿಗೆ ಸೂಚಿಸುವುದಕ್ಕೂ, ವ್ಯಾಪಾರಿಗಳು ಸರಕುಗಳು ಮಾರಾಟವಾಗದೆ ಅವನ್ನು ಹಿಂತಿರುಗಿಸಿದಾಗ ಅವು ತಮ್ಮ ತಯಾರಿಕೆಯವು ಎಂಬುದನ್ನು ಗುರುತಿಸುವದಕ್ಕೂ ಅವುಗಳ ಮೇಲೆ ತಮ್ಮವೇ ಆದ ವಿಶಿಷ್ಟ ಚಿಹ್ನೆಗಳನ್ನು ಅಂಟಿಸುವುದು ಆವಶ್ಯಕವೆನಿಸತೊಡಗಿತು. ವ್ಯಾಪಾರ ಚಿಹ್ನದ ಮೂಲವನ್ನು ನಾವು ಇಲ್ಲಿ ಕಾಣಬಹುದು.

ಮೊತ್ತಮೊದಲಿಗೆ ನಿರ್ಮಾಪಕರು ತಮ್ಮ ಸಹಿಗಳನ್ನೇ ವ್ಯಾಪಾರ ಚಿಹ್ನೆಗಳಂತೆ ತಮ್ಮ ಸರಕುಗಳ ಮೇಲೆ ಉಪಯೋಗಿಸತೊಡಗಿದರು. ಆಗ ಪ್ರತಿಯೊಂದು ಸರಕಿನ ಮೇಲೂ ನಿರ್ಮಾಪಕರ ಸಹಿಯಿರುತ್ತಿತ್ತು. ಆದರೆ ಕೈಗಾರಿಕೆ ಬೆಳೆದು ಸರಕುಗಳಿಗೆ ಬೇಡಿಕೆ ಹೆಚ್ಚಿ ಸರಕುಗಳ ನಿರ್ಮಾಣ ವೃದ್ಧಿಯಾಗತೊಡಗಿದಂತೆ ಈ ಸಹಿ ಹಾಕುವ ಕೆಲಸ ನಿರ್ಮಾಪಕರಿಗೆ ತ್ರಾಸದಾಯಕವಾಗಹತ್ತಿತು. ಅನೇಕ ಸರಕುಗಳ ಮೇಲೆ ಸಹಿ ಹಾಕುವುದೂ ಸಾಧ್ಯವಾಗುತ್ತಿರಲಿಲ್ಲ. ಇಷ್ಟೆ ಅಲ್ಲದೆ ನಿರಕ್ಷರಸ್ಥರಿಗೆ ಈ ಸಹಿಯಿಂದ ಯಾವ ಪ್ರಯೋಜನವೂ ಆಗುತ್ತಿರಲಿಲ್ಲ. ಇವೆಲ್ಲ ಕಾರಣಗಳಿಂದಾಗಿ ನಿರ್ಮಾಪಕರಿಗೆ ಸಹಿಗಳ ಬದಲಾಗಿ ಚಿಹ್ನೆಗಳನ್ನು ಉಪಯೋಗಿಸುವುದು ಅವಶ್ಯವಾಯಿತು. ಅದರಿಂದಾಗಿ ಬೇರೆ ಬೇರೆ ಚಿತ್ರಗಳು, ಪದಗಳು ವ್ಯಾಪಾರ ಚಿಹ್ನೆಗಳಂತೆ ಬಳಕೆಯಲ್ಲಿ ಬರತೊಡಗಿದುವು.

ಬೇರೆ ಬೇರೆ ತಯಾರಿಕೆಗಳ ಸರಕುಗಳನ್ನು ಪ್ರತ್ಯೇಕಿಸುವುದಕ್ಕೆ ಅವಕ್ಕೆ ಬೇರೆ ಬೇರೆ ಬಣ್ಣಗಳನ್ನು ಹಾಕಿದರೆ, ಆಕಾರಗಳನ್ನು ಕೊಟ್ಟರೆ ಇಲ್ಲವೇ ಸರಕುಗಳ ಮೇಲೆ ನಿರ್ಮಾಪಕರ ಹೆಸರು ವಿಳಾಸಗಳುಳ್ಳ ಚೀಟಿಗಳನ್ನು ಅಂಟಿಸಿದರೆ ಸಾಧ್ಯವಾಗದೇ, ಎಂದು ಯಾರಾದರೂ ಪ್ರಶ್ನಿಸಬಹುದು. ಆದರೆ ಕೃತಿಯಲ್ಲಿ ತಂದಾಗ ಇವುಗಳಲ್ಲಿ ಯಾವುದೊಂದು ಉಪಾಯವೂ ವ್ಯಾಪಾರ ಚಿಹ್ನೆಗಳನ್ನು ಅಂಟಿಸುವಷ್ಟು ಅಥವಾ ಮುದ್ರಿಸುವಷ್ಟು ಸುಲಭವಾದ್ದೂ ಪ್ರಯೋಜನಕಾರಿಯಾದ್ದೂ ಆಗುವುದಿಲ್ಲವೆಂಬುದು ಮನವರಿಕೆಯಾಗದಿರದು. ಸರಕುಗಳ ನಿರ್ಮಾಪಕರು ಅನೇಕರಿರುವಾಗ ಅವರೆಲ್ಲರೂ ತಮ್ಮ ತಮ್ಮ ತಯಾರಿಕೆಗಳ ಸರಕುಗಳಿಗೆ ಬೇರೆ ಬೇರೆ ಬಣ್ಣ ಇಲ್ಲವೇ ಆಕಾರಗಳನ್ನು ಕೊಡಬೇಕೆಂದರೆ ಅದು ಅಸಾಧ್ಯ. ಇವನ್ನು ನೆನಪಿನಲ್ಲಿಡುವದೂ ಗ್ರಾಹಕರಿಗೆ ಕಷ್ಟ. ಇಷ್ಟೂ ಆಗಿ ಒಂದೇ ಬಣ್ಣ ಇಲ್ಲವೇ ಒಂದೇ ಆಕಾರವನ್ನು ಹಲವು ನಿರ್ಮಾಪಕರು ಅನುಸರಿಸುವುದಕ್ಕೆ ಯಾವ ಆತಂಕವೂ ಇರುವದಿಲ್ಲ. ಸರಕುಗಳ ಮೇಲೆ ನಿರ್ಮಾಪಕರ ಹೆಸರು ವಿಳಾಸಗಳಿರುವ ಚೀಟಿಗಳನ್ನು ಅಂಟಿಸುವುದು ಕೂಡ ಅಷ್ಟು ಪ್ರಯೋಜನಕಾರಿಯಾಗಲಾರದು. ಒಂದೇ ಹೆಸರಿನ ಅನೇಕ ನಿರ್ಮಾಪಕರಿರುವುದು ಸಾಧ್ಯ. ನಿರ್ಮಾಪಕರಿಗೆ ತಮ್ಮ ವಿಳಾಸಗಳನ್ನು ಬದಲಿಸ

ಬೇಕಾಗಿ ಬಂದರೂ ಬರಬಹುದು. ಇದೂ ಅಲ್ಲದೆ ಇದರಿಂದ ಓದುಬರಹ ಬಾರದವರಿಗೆ ಯಾವ ಪ್ರಯೋಜನವೂ ಆಗಲಾರದು.

ಯಾವುದೋದು ಕೈಗಾರಿಕೆಯನ್ನು ಇಲ್ಲವೇ ಉದ್ಯಮವನ್ನು ಪ್ರಾರಂಭಿಸಬೇಕಾದರೆ ಯಾವ ಸರಕಿಗೆ ಹೆಚ್ಚು ಬೇಡಿಕೆಯಿದೆಯೆಂಬುದನ್ನು ವಿಚಾರ ಮಾಡಿಕೊಂಡು ಮುಂದುವರಿಯ ಬೇಕಾಗುತ್ತದೆ. ಈ ಉದ್ಯಮ ಅಭಿವೃದ್ಧಿ ಹೊಂದಬೇಕಾಗಿದ್ದಲ್ಲಿ ಅದು ತಯಾರಿಸುವ ಸರಕು ಉತ್ತಮ ದರ್ಜೆಯಿಂದಿರಬೇಕೆಂಬುದು ನಿರ್ವಿವಾದವಾದ್ದು. ಅದರಂತೆಯೇ ಸರಕಿಗೆ ಹೊಸ ಹೊಸ ಗ್ರಾಹಕರನ್ನು ದೊರಕಿಸುವುದೂ ಒಮ್ಮೆ ಸರಕನ್ನು ಕೊಂಡುಕೊಂಡ ಗ್ರಾಹಕರು ಅದನ್ನೇ ಮತ್ತೆ ಮತ್ತೆ ಕೊಂಡುಕೊಳ್ಳುವಂತೆ ಮಾಡುವುದೂ ಅವಶ್ಯ. ಇದಕ್ಕೆ ಜಾಹೀರಾತು ಒಂದು ಉತ್ತಮ ಸಾಧನ. ಮೊದಲನೆಯದಾಗಿ ಜಾಹೀರಾತು ಜನತೆಯ ಮನಸ್ಸನ್ನು ಸೆಳೆಯುತ್ತದೆ. ಎರಡನೆಯದಾಗಿ ಬೇಡಿಕೆಯನ್ನುಂಟುಮಾಡುತ್ತದೆ. ಮೂರನೆಯದಾಗಿ ಅದು ಸರಕು ಜನರ ಮನಸ್ಸಿನಲ್ಲಿ ಬಹುಕಾಲ ಉಳಿಯುವಂತೆಯೂ ಮಾಡುತ್ತದೆ. ಜಾಹೀರಾತಿನ ಈ ಮೂರನೆಯ ಉದ್ದೇಶ ಸಫಲವಾಗಬೇಕಾದರೆ ಸರಕಿಗೆ ಒಂದು ಉತ್ತಮವಾದ ಹಾಗೂ ಜನತೆಯ ಮನಸ್ಸನ್ನು ಆಕರ್ಷಿಸುವ ವ್ಯಾಪಾರ ಚಿಹ್ನೆ ಅಂಟಿಕೊಂಡಿರುವುದು ಅತ್ಯವಶ್ಯ. ಜಾಹೀರಾತಿಲ್ಲದೆ ವ್ಯಾಪಾರ ಚಿಹ್ನೆ ಸರಕಿಗೆ ಮೊತ್ತಮೊದಲಿಗೆ ಬೇಡಿಕಯನ್ನುಂಟುಮಾಡಲಾರದು. ಆದರೆ ಒಮ್ಮೆ ಸರಕನ್ನು ಕೊಂಡು ಉಪಯೋಗಿಸಿ ತೃಪ್ತಿ ಹೊಂದಿದ ಗ್ರಾಹಕ ಮತ್ತೆ ಅದೇ ಸರಕನ್ನು ಪಡೆಯುವುದಕ್ಕೆ ವ್ಯಾಪಾರ ಚಿಹ್ನೆ ತುಂಬಾ ಸಹಕಾರಿಯಾಗುತ್ತದೆ. ಯಾಕೆಂದರೆ ಹಿಂದೆ ಹೇಳಿದಂತೆ ವ್ಯಾಪಾರ ಚಿಹ್ನೆಯನ್ನು ನೋಡಿಯೇ ಗ್ರಾಹಕ ಸರಕನ್ನು ಸುಲಭವಾಗಿ ಗುರುತಿಸಬಲ್ಲ. ಹೀಗೆ ವ್ಯಾಪಾರ ಚಿಹ್ನೆ ಮತ್ತು ಜಾಹೀರಾತು ಇವುಗಳ ನಡುವೆ ನಿಕಟ ಸಂಬಂಧ ಇರುತ್ತದೆ. ಅದರಂತೆ ಉದ್ಯಮ ಬೆಳೆಯಬೇಕಾದರೆ ಜನತೆಯ ಮನಸ್ಸನ್ನು ಆಕರ್ಷಿಸಿ ದೀರ್ಘಕಾಲದ ವರೆಗೆ ನೆನಪಿನಲ್ಲಿ ಉಳಿಯತಕ್ಕ ಉತ್ತಮವಾದ ವ್ಯಾಪಾರ ಚಿಹ್ನೆಯ ಅವಶ್ಯಕತೆ ಬಹಳವಿದೆಯೆಂಬುದು ಸ್ಪಷ್ಟವಾಗುತ್ತದೆ.

ಯೋಗ್ಯವಾದ ಒಂದು ವ್ಯಾಪಾರ ಚಿಹ್ನೆಯನ್ನು ಆಯ್ದುಕೊಳ್ಳುವುದು ಅಷ್ಟು ಸುಲಭದ ಕೆಲಸವಲ್ಲ. ನಮ್ಮ ದೇಶದಲ್ಲಿ ವ್ಯಾಪಾರ ಚಿಹ್ನೆಯನ್ನು ಆಯ್ದುಕೊಳ್ಳುವ ವಿಷಯದಲ್ಲಿ ಅನೇಕ ನಿರ್ಮಾಪಕರು ಮತ್ತು ವ್ಯಾಪಾರಿಗಳು ಅವಶ್ಯವಿದ್ದಷ್ಟು ಆಸ್ಥೆ ವಹಿಸುತ್ತಿಲ್ಲವೆಂದು ಹೇಳ ಬಹುದು. ಒಂದು ವ್ಯಾಪಾರ ಚಿಹ್ನೆಯನ್ನು ಹೊಂದಿರುವ ಸರಕು ಜನಪ್ರಿಯವಾಗಿದ್ದರೆ ಅದಕ್ಕೆ ಬೇಡಿಕೆ ಅಧಿಕವಿದ್ದರೆ ಅದನ್ನು ನಕಲುಮಾಡುವ ಇಲ್ಲವೇ ಅದಕ್ಕೆ ಹತ್ತಿರವಿರುವ ವ್ಯಾಪಾರ ಚಿಹ್ನೆಯನ್ನು ಆಯ್ದುಕೊಳ್ಳುವ ಹಂಬಲ ಉದ್ಯಮಿಗಳಲ್ಲಿ ಸಹಜವಾಗಿಯೇ ಮೂಡಿ ಅಂಥ ಚಪಲಕ್ಕೆ ಅನೇಕ ಉದ್ಯಮಗಳು ಬಲಿಯಾಗುವುದುಂಟು. ಆದರೆ ಅವರು ಕೂಲಂಕಷವಾಗಿ ವಿಚಾರವಾಡಿದಲ್ಲಿ ಕೊನೆಯಲ್ಲಿ ಅದರಿಂದ ನಷ್ಟವೇ ಸಂಭವಿಸುವುದೆಂದು ಅವರಿಗೆ ಎನಿಸದಿರದು. ಆದರೆ ಶೀಘ್ರಲಾಭ ಪಡೆಯಬೇಕೆನ್ನುವ ಲೋಭಿ ಉದ್ಯಮಿ ಅನ್ಯರ ವ್ಯಾಪಾರಚಿಹ್ನೆಗಳ ಅನುಕರಣೆ ಮಾಡಬೇಕೆನ್ನುವ ಚಪಲವನ್ನು ಹತ್ತಿಕ್ಕುವದು ಕಷ್ಟಸಾಧ್ಯ.

ಒಂದು ಒಳ್ಳೆಯ ವ್ಯಾಪಾರದ ಚಿಹ್ನೆ ಹೇಗೆ ಸರಕುಗಳಿಗೆ ಬೇಡಿಕೆಯನ್ನು ಹೆಚ್ಚಿಸಿ ಉದ್ಯಮದ ಅಭಿವೃದ್ಧಿಗೆ ಕಾರಣವಾಗಬಲ್ಲುದೋ ಅಂತೆಯೇ ಸಾಕಷ್ಟು ವಿಚಾರ ಮಾಡದೆ

ಅಲಕ್ಷ್ಯದಿಂದ ಆರಿಸಿಕೊಂಡ ಒಂದು ಕೆಟ್ಟ ವ್ಯಾಪಾರ ಚಿಹ್ನೆ ಉದ್ಯಮದ ಅವನತಿಗೆ ಕಾರಣವಾಗಬಲ್ಲುದು. ಅದರಿಂದ ಲಾಭವೊತ್ತಟ್ಟಿಗಿರಲಿ, ಅದು ನಷ್ಟಕ್ಕೇ ಮೂಲಪ್ರಾಯವಾಗಬಹುದು. ಇನ್ನೊಬ್ಬ ನಿರ್ಮಾಪಕ ಈಗಾಗಲೇ ಉಪಯೋಗಿಸಿ ಇಲ್ಲವೇ ನೋಂದಣಿಯ ಮೂಲಕ ತನ್ನದಾಗಿ ಮಾಡಿಕೊಂಡಿರುವ ವ್ಯಾಪಾರ ಚಿಹ್ನೆಯನ್ನು ಉಪಯೋಗಿಸತೊಡಗಿದಲ್ಲಿ ಅದರಿಂದ ನ್ಯಾಯಾಲಯಗಳ, ಕಚೇರಿಗಳ ವ್ಯವಹಾರವನ್ನು ಗಂಟುಹಾಕಿಕೊಂಡಂತಾಗುವುದು. ಇಂಥ ವ್ಯವಹಾರಗಳಿಗೆ ಸಿಲುಕಿ ಸಂಕಷ್ಟಕ್ಕೊಳಗಾದ ಉದ್ದಿಮೆಗಳ ಉದಾಹರಣೆಗಳು ಹಲವಾರುಂಟು. ವ್ಯಾಪಾರ ಚಿಹ್ನೆಗಳಿಗೆ ಸಂಬಂಧಿಸಿದ ವ್ಯಾಜ್ಯಗಳು ಬ್ರಿಟಿಷರ ಕಾಲದಲ್ಲಿ ಪ್ರಿವಿಕೌನ್ಸಿಲ್ಲಿನ ವರೆಗೂ ಸ್ವತಂತ್ರ ಭಾರತದಲ್ಲಿ ಸರ್ವೋಚ್ಚ ನ್ಯಾಯಾಲಯದವರೆಗೂ ಹೋದದ್ದುಂಟು. ಈಗಲೂ ಹೋಗುತ್ತಿವೆ. ಉಚ್ಚ ನ್ಯಾಯಾಲಯಗಳನ್ನು ಕೂಡ ಕಾಣುತ್ತಿರುವ ವ್ಯಾಜ್ಯಗಳು ಲೆಕ್ಕವಿಲ್ಲದಷ್ಟು. ಇಂಥ ಅನಾವಶ್ಯಕ ಹಾಗೂ ಸುಲಭವಾಗಿ ತಪ್ಪಿಸಿಕೊಳ್ಳಬಹುದಾದ ವ್ಯಾಜ್ಯಗಳಿಂದಾಗಬಹುದಾದ ಹಾನಿಯನ್ನು ಸುಲಭವಾಗಿ ಊಹಿಸಬಹುದು. ಅಂಥ ವ್ಯಾಜ್ಯಗಳಿಂದ ವಕೀಲರಿಗೆ ಲಾಭವಾಗಬಹುದೇ ಹೊರತು ಉದ್ಯಮಿಗಳಿಗಲ್ಲ. ವ್ಯಾಪಾರ ಚಿಹ್ನೆ ಒಂದು ಕೈಗಾರಿಕಾ ಸ್ವತ್ತು. ಇನ್ನೊಂದು ಉದ್ಯಮದ ವ್ಯಾಪಾರ ಚಿಹ್ನೆಯನ್ನು ಯೋಗ್ಯ ಪರವಾನಗಿಯಿಲ್ಲದೆ ಉಪಯೋಗಿಸತೊಡಗುವುದು ಹೆರವರ ಸ್ವತ್ತನ್ನು ಅಪಹರಿಸುವಂಥದೇ ಅಪರಾಧವಾಗಿ ಗಣಿಸಲ್ಪಡುವುದರಿಂದ, ಅಂಥ ಅಪರಾಧವನ್ನೆಸಗಿದರೆ ಆಗುವ ಎಲ್ಲ ಪರಿಣಾಮಗಳಿಗೂ ಗುರಿಯಾಗಬೇಕಾಗುತ್ತದೆ. ಇನ್ನು ಎಲ್ಲ ಉದ್ಯಮಕಾರರೂ ಸಹಜವಾಗಿ, ನಿರಾತಂಕವಾಗಿ ಉಪಯೋಗಿಸಬಹುದಾದ ವ್ಯಾಪಾರ ಚಿಹ್ನೆಗಳನ್ನು ಆಯ್ದುಕೊಂಡರೆ, ಅದರಿಂದ ಯಾವ ಪ್ರಯೋಜನವೂ ಆಗಲಾರದು. ಅಂಥ ವ್ಯಾಪಾರ ಚಿಹ್ನೆಗಳ ಜಾಹೀರಾತಿಗೆ ಖರ್ಚು ಮಾಡಿದ ಹಣವೆಲ್ಲವೂ ನೀರಿನಲ್ಲಿ ಹಾಕಿದಂತೆಯೇ ವ್ಯರ್ಥ. ಕೀಳದರ್ಜೆಯ ಸರಕುಗಳ ಉತ್ಪಾದಕರೂ ಅಂಥ ವ್ಯಾಪಾರ ಚಿಹ್ನೆಗಳನ್ನು ನಿರಾತಂಕವಾಗಿ ಉಪಯೋಗಿಸಬಹುದಾದ್ದರಿಂದ, ಉಪಯೋಗಿಸುವುದರಿಂದ, ಗ್ರಾಹಕರಿಗೆ ಅಂಥ ವ್ಯಾಪಾರ ಚಿಹ್ನೆ ಹೊಂದಿರುವ ಸರಕುಗಳಲ್ಲಿ ನಂಬಿಕೆ ಕಳೆದು ವ್ಯಾಪಾರ ಕುಗ್ಗಿ ನಷ್ಟವಾಗುವುದು ಖಂಡಿತ. ಅಂಥ ವ್ಯಾಪಾರ ಚಿಹ್ನೆಗಳು ವ್ಯಾಪಾರ ಚಿಹ್ನೆಗಳ ರಿಜಿಸ್ಟ್ರಾರರಿಂದ ನೋಂದಣಿಗೂ ಅನರ್ಹವಾಗುತ್ತವೆ. ಉತ್ತಮ ಶ್ರೇಷ್ಠ ಅಘೋಘ ಕರಿದು ಬಿಳಿದು ದೊಡ್ಡದು ಚಿಕ್ಕದು ಸುವಾಸಿತ ಸುವರ್ಣ ರುಚಿಕರ ಪೌಷ್ಟಿಕ ಮುಂತಾದ ಪದಗಳು, ಉಣ್ಣೆಯ ಸಂಬಂಧದಲ್ಲಿ ಕುರಿಯ ಚಿತ್ರ, ಬಿಸ್ಕತ್ತು ರೊಟ್ಟಿಗಳ ಸಂಬಂಧದಲ್ಲಿ ಗೋಧಿಯ ತೆನೆಯ ಚಿತ್ರ, ಹಾಲು ಬೆಣ್ಣೆ ತುಪ್ಪಗಳ ಇಲ್ಲವೇ ಅವುಗಳಿಂದಲೇ ತಯಾರು ಮಾಡಲಾಗುವ ಸರಕುಗಳ ಸಂಬಂಧದಲ್ಲಿ ಆಕಳು ಇಲ್ಲವೇ ಎಮ್ಮೆಯ ಚಿತ್ರ—ಈ ತರದ ವ್ಯಾಪಾರ ಚಿಹ್ನೆಗಳು ಉದಾಹರಣೆಗಳು.

ಒಂದು ಉತ್ತಮ ವ್ಯಾಪಾರ ಚಿಹ್ನೆಯ ಕೆಲವು ಮುಖ್ಯ ಲಕ್ಷಣಗಳನ್ನು ಇಲ್ಲಿ ಹೇಳಬಹುದು :

1 ಅದು ಇತರ ಉದ್ಯಮಿಗಳು, ವ್ಯಾಪಾರಿಗಳು ಅದೇ ಜಾತಿಯ ಸರಕುಗಳ ಸಂಬಂಧದಲ್ಲಿ ಉಪಯೋಗಿಸುತ್ತಿರುವವರ ಇಲ್ಲವೆ ನೋಂದಣಿಯ ಮೂಲಕ ತಮ್ಮದಾಗಿ ಮಾಡಿಕೊಂಡಿರುವ ವ್ಯಾಪಾರ ಚಿಹ್ನೆಗಳಿಂದ ಭಿನ್ನವಾಗಿರಬೇಕು. ಅಂದರೆ ಅವುಗಳ ನಕಲಾಗಲಿ ಹತ್ತಿರದ

ಅನುಕರಣೆಯಾಗಲಿ ಆಗಿರಬಾರದು. ಒಂದು ವ್ಯಾಪಾರ ಚಿಹ್ನೆ ಇನ್ನಿತರ ವ್ಯಾಪಾರ ಚಿಹ್ನೆಗಳಿಂದ ವರ್ಣ, ಆಕಾರ, ಚಿತ್ರಣದ ನಮೂನೆ ಮುಂತಾದ ಮುಖ್ಯವಲ್ಲದ ಅಂಶಗಳಲ್ಲಿ ಭಿನ್ನವಾಗಿದ್ದರೆ ಸಾಲದು. ಉದಾಹರಣೆಗಾಗಿ ಒಂದು ವ್ಯಾಪಾರ ಚಿಹ್ನೆಯಲ್ಲಿ ಬಲಗಡೆಗೆ ಮೋರೆ ಮಾಡಿದ ಒಂದು ಒಂಟೆಯ ಚಿತ್ರವಿದ್ದರೆ ಹಾಗೂ ಇನ್ನೊಂದರಲ್ಲಿ ಎಡಗಡೆಗೆ ಮೋರೆ ಮಾಡಿದ ಒಂಟೆಯ ಚಿತ್ರವಿದ್ದರೆ, ಒಂದರಲ್ಲಿ ಒಂಟೆಯ ಚಿತ್ರ ಚಿಕ್ಕದಾಗಿದ್ದು ಇನ್ನೊಂದರಲ್ಲಿ ದೊಡ್ಡದಾಗಿದ್ದರೆ ಇಲ್ಲವೇ ಒಂದರಲ್ಲಿ ಒಂದೇ ಒಂಟೆಯ ಚಿತ್ರವಿದ್ದು ಇನ್ನೊಂದರಲ್ಲಿ ಎರಡು ಒಂಟೆಗಳ ಚಿತ್ರವಿದ್ದರೆ ಕಾನೂನಿನ ದೃಷ್ಟಿಯಲ್ಲಿ ಅವು ಬೇರೆ ಬೇರೆ ವ್ಯಾಪಾರ ಚಿಹ್ನೆಗಳಾಗುವವೆಂದು ಎಣಿಸಲ್ಪಡುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಒಂದೆರಡು ಅಕ್ಷರಗಳಲ್ಲಿ ಭಿನ್ನತೆಯಿದ್ದರೂ ಅವು ಬೇರೆ ಬೇರೆ ವ್ಯಾಪಾರ ಚಿಹ್ನೆಗಳೆಂದು ನ್ಯಾಯಾಲಯಗಳು ಗಣಿಸುವುದಿಲ್ಲ. ಉದಾಹರಣೆಗಾಗಿ ನಶ್ಯದ ಸಂದರ್ಭದಲ್ಲಿ ಉಪಯೋಗಿಸಲಾಗುತ್ತಿದ್ದ ಅಂಬಾಳ್ ಮತ್ತು ಅಂಡಾಳ್ ಎಂಬ ಪದಗಳಲ್ಲಿ ಸ್ವರ ಸಾಮ್ಯವಿದೆ ಎಂದು ಸರ್ವೋಚ್ಚ ನ್ಯಾಯಾಲಯ ತೀರ್ಪನ್ನಿತ್ತಿದೆ. Emollio ಮತ್ತು Emolline, KoKoKo ಮತ್ತು coco, Zykol ಮತ್ತು Zeekol Victor ಮತ್ತು Victory, Nuvol ಮತ್ತು Nujol, Hemvo ಮತ್ತು Harvo, Gluvita ಮತ್ತು Glucovita, Amrit Sukh Jiwan Dhara ಮತ್ತು Amrit Dhara, Amrit Dhara ಮತ್ತು Laksman Dhara Supavite ಮತ್ತು Supervita, Plyophen ಮತ್ತು Plibond, KoKola Coca-Cola, Thanda Baspam ಮತ್ತು Thanga Baspam, Cibol ಮತ್ತು Ciba, Pem Books ಮತ್ತು Pan Books, Stafford ಮತ್ತು Trafford, Hamid Mahal ಮತ್ತು Taj Mahal ಮತ್ತು Mahal, Sunright ಮತ್ತು Sunlight, States Manoranjitham Bathy No. 7/28 ಮತ್ತು Manoranjan 28, Jardex ಮತ್ತು Jardox, Sunniwite ಮತ್ತು Sunlight ಇವೆಲ್ಲವೂ ಒಂದಕ್ಕೊಂದು ಸದೃಶವಾದ ಇಲ್ಲವೇ ಸಾಮ್ಯವುಳ್ಳ ವ್ಯಾಪಾರ ಚಿಹ್ನೆಗಳೆಂದು ನ್ಯಾಯಾಲಯಗಳು ತೀರ್ಪನ್ನಿತ್ತಿವೆ. ಅಂತೆಯೇ ಒಂದು ವ್ಯಾಪಾರ ಚಿಹ್ನೆಯಲ್ಲಿ ಒಂದು ನವಿಲಿನ ಚಿತ್ರ ಹಾಗೂ ಮೋರ್ ಬ್ರಾಂಡ್ ಎಂಬ ಪದಗಳು ಮತ್ತು ಇನ್ನೊಂದರಲ್ಲಿ ಎರಡು ನವಿಲುಗಳ ಚಿತ್ರ ಮತ್ತು ಟೂ ಪೀಕಾಕ್ ಬ್ರಾಂಡ್ ಎಂಬ ಪದಗಳು ಇದ್ದಾಗ, ಒಂದರಲ್ಲಿ ಸಮವಸ್ತ್ರದಲ್ಲಿದ್ದ ಮನುಷ್ಯ ಹಾಗೂ ನೇಪಾಲಿ ಬೀಡಿ ಎಂಬ ಪದಗಳು ಮತ್ತು ಇನ್ನೊಂದು ವ್ಯಾಪಾರ ಚಿಹ್ನೆಯಲ್ಲಿ ಸಮವಸ್ತ್ರದಲ್ಲಿದ್ದ ಸೈನಿಕನ ಚಿತ್ರ ಮತ್ತು ಸೈನಿಕ್ ಬೀಡಿ ಎಂಬ ಪದಗಳು ಇದ್ದಾಗ, ಒಂದು ವ್ಯಾಪಾರ ಚಿಹ್ನೆಯಲ್ಲಿ ಉದಯಿಸುವ ಸೂರ್ಯನ ಚಿತ್ರ ಮತ್ತು ಪ್ರಭಾತ್ ಎಂಬ ಪದ ಹಾಗೂ ಇನ್ನೊಂದರಲ್ಲಿ ಉದಯಿಸುವ ಸೂರ್ಯನ ಚಿತ್ರ ಮತ್ತು ಸನ್‌ಲೈಟ್ ಎಂಬ ಪದ ಇದ್ದಾಗ ಆ ವ್ಯಾಪಾರ ಚಿಹ್ನೆಗಳಲ್ಲಿ ಸಾಮ್ಯವಿದೆ ಎಂದು ನಿರ್ಧರಿಸಲಾಗಿದೆ. ಗ್ರಾಹಕರಿಗೆ ತಾವು ಕೊಂಡು ಉಪಯೋಗಿಸಿದ ಸರಕುಗಳಿಗೆ ಸಂಬಂಧಿಸಿದ ವ್ಯಾಪಾರ ಚಿಹ್ನೆಗಳ ವಿವರಗಳ ನೆನಪು ಅಸ್ಪಷ್ಟವಾಗಿರುವದು ಸಹಜ. ಮಾನವನ ಮನಸ್ಸು ಛಾಯಾಗ್ರಾಹಕನ

ಕ್ಯಾಮರದಂತೆ ಯಂತ್ರವಲ್ಲ. ಇನ್ನು ಸರಕು ಅಪರೂಪವಾಗಿ ಕೊಳ್ಳುವಂತಹದಾಗಿದ್ದರಂತೂ ಈ ಅಸ್ಪಷ್ಟತೆ ಇನ್ನೂ ಹೆಚ್ಚಾಗುತ್ತದೆ. ಉದಾಹರಣೆಗೆ ದೀಪಾವಳಿ ಹಬ್ಬದ ಸಮಯಕ್ಕೆ ಕೊಳ್ಳುವ ಪಟಾಕಿಗಳು. ಇನ್ನೂ ಒಂದು ಎಂದರೆ, ಗ್ರಾಹಕರು ಯಾವತ್ತೂ ತಾವೇ ಮಾರುಕಟ್ಟೆಗೆ ಇಲ್ಲವೇ ವ್ಯಾಪಾರಿಯಲ್ಲಿಗೆ ಹೋಗಿ ಸರಕುಗಳನ್ನು ಕೊಳ್ಳುವದಿಲ್ಲ. ಸರಕುಗಳು ದಿನ ಬಳಕೆಯವಾಗಿದ್ದರಂತೂ ವಿದ್ಯಾಹೀನರಾದ ಆಳುಮಕ್ಕಳು, ಇಲ್ಲವೇ ಚಿಕ್ಕ ಹುಡುಗರು, ಇಂಥವರಿಂದಲೇ ಒಲೇ ವ್ಯಾಪಾರ ಚಿಹ್ನೆಯ ಹೆಸರನ್ನಷ್ಟೇ ಹೇಳಿ ತರಿಸುವ ಸಂಭವವೇ ಹೆಚ್ಚಾಗಿರುತ್ತದೆ.

2 ವ್ಯಾಪಾರ ಚಿಹ್ನೆ ಸರಕಿನ ಗುಣವರ್ಣನೆ ಮಾಡುವುದಾಗಿದ್ದರೆ ಅಥವಾ ಅದರ ಲಕ್ಷಣಗಳನ್ನು ನೇರವಾಗಿ ಸೂಚಿಸುವುದಾಗಿದ್ದರೆ ಅಥವಾ ಸರಕನ್ನು ಗುರುತಿಸುವುದಾಗಿದ್ದರೆ ಅದು ಉತ್ತಮ ವ್ಯಾಪಾರ ಚಿಹ್ನೆ ಎನಿಸದು. ಏಕೆಂದರೆ ಅಂಥ ವ್ಯಾಪಾರ ಚಿಹ್ನೆಗಳಲ್ಲಿ ಯಾವ ವೈಶಿಷ್ಟ್ಯವೂ ಇರುವುದಿಲ್ಲ. ಅವು ಎಲ್ಲ ನಿರ್ಮಾಪಕರಿಗೂ ಮೀಸಲಾಗಿರುತ್ತವೆ. ಉದಾಹರಣೆಗೆ ಗುಣವಾಚಕ ಪದಗಳು, ಊದುಬತ್ತಿಯ ಸಂಬಂಧವಲ್ಲಿ ಗುಲಾಬಿ, ಮಲ್ಲಿಗೆ, ಸಂಪಗೆ ಮುಂತಾದ ಸುವಾಸನೆಯಿರುವ ಹೂವುಗಳ, ಚಿತ್ರಗಳು, ಶಿಶುಗಳ ಆಹಾರದ ಸಂಬಂಧದಲ್ಲಿ ಶಿಶುವಿನ ಚಿತ್ರ, ಇಲ್ಲವೇ ಕಾಂತಿಚೂರ್ಣ (ಫೇಸ್ ಪೌಡರ್),ಸ್ನೋ, ಕುಂಕುಮ, ಬಳೆ ಮುಂತಾದ ಪ್ರಸಾಧನ ವಸ್ತುಗಳ ಸಂಬಂಧದಲ್ಲಿ ಹೆಂಗಸಿನ ಚಿತ್ರ ಇವು ಉತ್ತಮ ವ್ಯಾಪಾರ ಚಿಹ್ನೆಗಳಾಗವು. ವ್ಯಾಪಾರ ಚಿಹ್ನೆಗಳಲ್ಲಿ ವೈಶಿಷ್ಟ್ಯ ಇರಬೇಕಾದ್ದು ಅತ್ಯವಶ್ಯ.

3 ವ್ಯಾಪಾರ ಚಿಹ್ನೆ ತುಂಬ ಸರಳವಾಗಿದ್ದು ವರ್ಣಿಸಲ ಸಾಧ್ಯವಾಗಿರಬಾರದು. ಇದರಿಂದ ಅದು ಬಹುಕಾಲ ಗ್ರಾಹಕರ ನೆನಪಿನಲ್ಲಿ ಉಳಿಯಲು ಸಾಧ್ಯವಾಗುವದು.

4 ವ್ಯಾಪಾರ ಚಿಹ್ನೆ ದೃಷ್ಟಿಗೆ ಬಿದ್ದೊಡನೆಯೇ ಮನಸ್ಸನ್ನು ಆಕರ್ಷಿಸುವಂತಹದಿರಬೇಕು.

5 ಅದರ ಉಚ್ಚಾರಣೆ ಕಿವಿಗೆ ಇಂಪಾಗಿರಬೇಕು, ಕರ್ಕಶವಾಗಿರಬಾರದು.

6 ಅದನ್ನು ಸಹಜವಾಗಿ ಓದಲು, ಉಚ್ಚರಿಸಲು ಬರುವಂತಿರಬೇಕು.

7 ಅದು ಜನತೆಯ ಮನಸ್ಸಿನಲ್ಲಿ ಹೇಸಿಕೆ, ಜಿಗುಪ್ಸೆ, ಭಯ, ಸಂಶಯ ಮುಂತಾದ ಭಾವನೆಗಳನ್ನುಂಟು ಮಾಡಲಾಗದು. ಉದಾಹರಣೆಗಾಗಿ ವಾಹನಗಳ ಇಲ್ಲವೇ ಔಷಧಗಳ ಸಂಬಂಧದಲ್ಲಿ ಕೋಣವನ್ನು ಸವಾರಿಮಾಡುತ್ತಿರುವ ಯಮಧರ್ಮನ ಚಿತ್ರವಾಗಲಿ, ಸ್ವರ್ಗ ಎಂಬ ಪದವಾಗಲಿ ಯೋಗ್ಯ ವ್ಯಾಪಾರ ಚಿಹ್ನೆ ಆಗಲಾರದು.

8 ಅದು ಸರಕನ್ನು ತೆಗಳುವಂಥದಿರಬಾರದು.

9 ಅದನ್ನು ಸಹಜವಾಗಿ, ಸ್ಪಷ್ಟವಾಗಿ ಮುದ್ರಿಸಲು ಬರುವಂತಿರಬೇಕು.

10 ಅದು ಸ್ವಾಮ್ಯ ಹಕ್ಕನ್ನು ಪಡೆಯಲು ಯೋಗ್ಯವಾಗಿರಬೇಕು.

11 ಅದು ಜನತೆಯ ಧಾರ್ಮಿಕ ಭಾವನೆಗಳನ್ನು ನೋಯಿಸುವಂಥದಿರಬಾರದು. ಉದಾಹರಣೆಗೆ ಚಪ್ಪಲಿ, ಬೂಟು ಇಲ್ಲವೇ ಮಾದಕ ಪದಾರ್ಥಗಳ ಸಂಬಂಧದಲ್ಲಿ ದೇವರ ಚಿತ್ರವನ್ನು ವ್ಯಾಪಾರ ಚಿಹ್ನೆಯಂತೆ ಉಪಯೋಗಿಸುವದು ಸೂಕ್ತವಲ್ಲ.

12 ಅದು ಜಾರಿಯಲ್ಲಿರುವ ಯಾವ ಕಾನೂನಿನ ಅಂಶವನ್ನೂ ಉಲ್ಲಂಘಿಸುವಂಥದಿರಬಾರದು. 1950ರ ಲಾಂಛನ ಮತ್ತು ಹೆಸರುಗಳ ಅನುಚಿತ ಬಳಕೆಯ ಪ್ರತಿಬಂಧಕ ಅಧಿ

ನಿಯಮಕ್ಕೆ [The Emblems and Names(Prevention of Improper use) Act, 1950] ಸೇರಿಸಿದ ಅನುಸೂಚಿಯಲ್ಲಿ ವ್ಯಾಪಾರ ಚಿಹ್ನೆಗಳಾಗಿ ಉಪಯೋಗಿಸಲಾಗದ ಲಾಂಛನ ಮತ್ತು ಹೆಸರುಗಳ ಪಟ್ಟಿಯಿದೆ. ತಿರುಪತಿ ವೆಂಕಟೇಶ್ವರ ದೇವರ ಚಿತ್ರ ಮತ್ತು ಬಾಲಾಜಿ ಎಂಬ ಪದ, ಛತ್ರಪತಿ ಶಿವಾಜಿ ಮಹಾರಾಜನ ಚಿತ್ರ ಅಥವಾ ಹೆಸರು, ಸಿಖ್ ಗುರುಗಳ ಚಿತ್ರ ಇಲ್ಲವೇ ಹೆಸರುಗಳು, ಶ್ರೀ ಅರವಿಂದರು, ಮಹಾತ್ಮಾಗಾಂಧಿ ಮೊದಲಾದ ರಾಷ್ಟ್ರೀಯ ವ್ಯಕ್ತಿಗಳ ಚಿತ್ರಗಳು ಮತ್ತು ಹೆಸರುಗಳನ್ನು ವ್ಯಾಪಾರ ಚಿಹ್ನೆಗಳಾಗಿ ನೋಂದಣಿ ಮಾಡುವುದನ್ನು ಸರ್ಕಾರ ನಿಷೇಧಿಸುತ್ತದೆ.

ಒಂದು ವ್ಯಾಪಾರ ಚಿಹ್ನೆ ಉತ್ತಮ ವ್ಯಾಪಾರ ಚಿಹ್ನೆ ಎನಿಸಬೇಕಾದರೆ ಅದರಲ್ಲಿ ವೈಶಿಷ್ಟ್ಯವಿರಬೇಕಾದ್ದು ಅನಿವಾರ್ಯ. ವ್ಯಾಪಾರ ಚಿಹ್ನೆಯ ನಕಲು ಇಲ್ಲವೇ ಅನುಕರಣೆಗಳನ್ನು ಸಕಾಲದಲ್ಲಿ ತಡೆಯದಿದ್ದಲ್ಲಿ ಈ ವೈಶಿಷ್ಟ್ಯ ಕಾಲಕ್ರಮೇಣ ಇಲ್ಲದಂತಾಗುತ್ತದೆ ಮತ್ತು ಛಾಪಿನ ಮಹತ್ವ ಕುಗ್ಗುತ್ತದೆ. ಅದರಿಂದ ವ್ಯಾಪಾರ ಚಿಹ್ನೆಗಳ ಅಥವಾ ಛಾಪುಗಳ ಒಡೆಯರಿಗೆ ಪ್ರತಿಸ್ಪರ್ಧಿ ನಿರ್ಮಾಪಕರು ತಮ್ಮ ಛಾಪುಗಳನ್ನು ನಕಲು ಅಥವಾ ಅನುಕರಣೆ ಮಾಡುವದನ್ನು ಕಾನೂನಿನ ಸಹಾಯದಿಂದ ಸಕಾಲದಲ್ಲಿ ತಡೆಗಟ್ಟುವದು ಅತ್ಯವಶ್ಯ.

ಹೊಸತಾಗಿ ಉಪಜ್ಞಿಸಿದ (ಇನ್ವೆಂಟ್) ಇಲ್ಲವೇ ಟಂಕಿಸಿದ ಪದಗಳು ಉತ್ತಮ ವ್ಯಾಪಾರ ಚಿಹ್ನೆಗಳಾಗಬಲ್ಲುವು. ಉದಾಹರಣೆಗಾಗಿ ಕೊಡ್ಯಾಕ್, ವಿಮ್ಕೊ, ಸೋಲಿಯೋ ಮುಂತಾದ ಪದಗಳು. ಅದರಂತೆಯೇ ವಿಚಿತ್ರವಾದ, ವಿಲಕ್ಷಣವಾದ ಇಲ್ಲವೇ ಅಸಾಮಾನ್ಯವಾದ ದೃಶ್ಯಗಳನ್ನು ಒಳಗೊಂಡ ಚಿತ್ರಗಳೂ ಒಳ್ಳೆಯ ಛಾಪುಗಳಾಗಬಲ್ಲುವು. ಉದಾಹರಣೆಗಾಗಿ ಜಿಂಕೆಯೊಂದು ಹುಲಿಯನ್ನು ಬೆನ್ನಟ್ಟುವ ಚಿತ್ರ, ಕುರಿಯೊಂದು ಸಿಂಹವನ್ನು ಸವಾರಿಮಾಡುವ ಚಿತ್ರ, ಸೈಕಲ್ಲಿನ ಮೇಲೆ ಕುಳಿತು ಸವಾರಿಮಾಡುತ್ತಿರುವ ಕೋತಿಯ ಚಿತ್ರ ಇವುಗಳನ್ನೊಳಗೊಂಡ ಛಾಪುಗಳು.

ಯಾವುದೊಂದು ವ್ಯಾಪಾರ ಚಿಹ್ನೆಯನ್ನು ಆಯ್ದುಕೊಂಡು ಉಪಯೋಗಿಸತೊಡಗುವ ಮೊದಲು ಅದು ಅಥವಾ ಅದಕ್ಕೆ ಸಾಮ್ಯವಿರುವ ಛಾಪು ಅದೇ ತರಹದ ಸರಕಿನ ಸಂಬಂಧದಲ್ಲಿ ಇನ್ನಾರಿಂದಲೂ ಉಪಯೋಗಿಸಲ್ಪಡುತ್ತಿಲ್ಲವೆಂಬುದನ್ನು ವಿವಿಧ ಪ್ರದೇಶಗಳ ಮಾರುಕಟ್ಟೆಗಳಲ್ಲಿ ವಿಚಾರಿಸಿ ಖಚಿತ ಮಾಡಿಕೊಳ್ಳುವುದು ಅತ್ಯಗತ್ಯ. ಒಂದು ಛಾಪು ಈಗಾಗಲೇ ವ್ಯಾಪಾರ ಚಿಹ್ನೆಗಳ ರಿಜಿಸ್ಟ್ರಾರರಿಂದ ನೋಂದಣಿ ಪಡೆದಿದ್ದರೆ ಇಲ್ಲವೇ ಅದರ ನೋಂದಣಿಗಾಗಿ ಅರ್ಜಿ ತೀರ್ಪಿಗಾಗಿ ಕಾಯುತ್ತಿದ್ದರೆ ಅದರ ದಾಖಲೆಯನ್ನು ವ್ಯಾಪಾರ ಚಿಹ್ನೆ ಇಲಾಖೆಯ ಕಾರ್ಯಾಲಯಗಳಲ್ಲಿ ನಿರ್ದಿಷ್ಟ ಶುಲ್ಕವನ್ನು ತೆತ್ತು ಪರಿಶೀಲಿಸಬಹುದು. ಇಲ್ಲವಾದರೆ ಗೊತ್ತುಮಾಡಿದ ನಮೂನೆಯಲ್ಲಿ ಅರ್ಜಿ ಸಲ್ಲಿಸಿ ಶುಲ್ಕ ತೆತ್ತು ಅಂಚೆಯ ಮೂಲಕ ಮಾಹಿತಿಯನ್ನು ದೊರಕಿಸಿಕೊಳ್ಳಬಹುದು. ಹೀಗೆ ಅವಶ್ಯ ಕಾಳಜಿ ವಹಿಸದೆ ಅನಾಸ್ಥೆಯಿಂದ ಮನಸ್ಸಿಗೆ ಬಂದ ಚಿಹ್ನೆಯೊಂದನ್ನು ಇಲ್ಲವೇ ಪದವೊಂದನ್ನು ಆಯ್ದುಕೊಂಡು ವ್ಯಾಪಾರ ಚಿಹ್ನೆಯಂತೆ ಉಪಯೋಗಿಸತೊಡಗಿದಲ್ಲಿ ಹಿಂದೆ ಹೇಳಿದಂತೆ ಕಷ್ಟನಷ್ಟಗಳಿಗೆ ಹಾದಿ ಮಾಡಿಕೊಂಡಂತಾಗುವುದು.

ಒಂದು ವ್ಯಾಪಾರ ಚಿಹ್ನೆಯನ್ನು ಆಯ್ದುಕೊಂಡ ಅನಂತರ ಅದರ ಆಯ್ಕೆಯ ಸಂಬಂಧದಲ್ಲಿ ಎಲ್ಲ ವಿವರಗಳ ಅಂದರೆ ಆಯ್ದುಕೊಂಡ ಬಗೆ, ದಿನಾಂಕ, ವ್ಯಾಪಾರ ಚಿಹ್ನೆ ಚಿತ್ರವಾಗಿದ್ದರೆ

ಚಿತ್ರವನ್ನು ಬಿಡಿಸಿದವ, ಬ್ಲಾಕನ್ನು ತಯಾರಿಸಿದವ, ಲೇಬಲ್ಲುಗಳ ಮುದ್ರಕ ಮೊದಲಾದವರಿಗೆ ಕೊಟ್ಟ ಆದೇಶಗಳ ದಿನಾಂಕ ಮತ್ತು ಅವುಗಳ ಸಂಬಂಧದಲ್ಲಿ ಖರ್ಚುಮಾಡಿದ ಹಣ ಇವುಗಳ ಬಗ್ಗೆ ದಾಖಲೆಗಳನ್ನು ಕಾದಿಡಬೇಕು. ಅದರಂತೆಯೇ ಛಾಪುಗಳನ್ನು ಹೊಂದಿದ ಸರಕುಗಳ ಮಾರಾಟದ ಅಂಕೆಸಂಖ್ಯೆಗಳನ್ನೂ ಕಾದಿಡಬೇಕು. ಇದರಿಂದ ವ್ಯಾಪಾರಚಿಹ್ನೆಗೆ ಸಂಬಂಧಿಸಿದ ನ್ಯಾಯಾಲಯ ಕಚೇರಿಗಳ ವ್ಯವಹಾರಗಳಲ್ಲಿ ಹಾಗೂ ಅದರ ನೋಂದಣಿಯ ಕಾಲಕ್ಕೆ ಛಾಪಿನ ಸ್ವಾಮ್ಯ ಪಕ್ಕಾ ಪುರಾವೆಯಾಗಿ ನೆರವಾಗುವುದು.

ಒಂದು ವ್ಯಾಪಾರ ಚಿಹ್ನೆಯು ಆಯ್ಕೆಯಾದ ಅನಂತರ ಅದನ್ನು ನೋಂದಣಿ ಮಾಡಿಸುವದು ಲಾಭದಾಯಕ. ನಮ್ಮ ದೇಶದಲ್ಲಿ ಇದಕ್ಕೊಂದು ಇಲಾಖೆಯಿದೆ. ಇಲಾಖೆಯ ಮುಖ್ಯ ಕಾರ್ಯಾಲಯ ಮುಂಬಯಿಯಲ್ಲಿದೆ. ಅದರ ಶಾಖಾ ಕಾರ್ಯಾಲಯಗಳು ಕಲ್ಕತ್ತ, ದೆಹಲಿ, ಮದ್ರಾಸುಗಳಲ್ಲಿವೆ. ದೇಶದ ಪಶ್ಚಿಮ, ಪೂರ್ವ, ಉತ್ತರ ಹಾಗೂ ದಕ್ಷಿಣ ವಲಯಗಳ ರಾಜ್ಯಗಳಲ್ಲಿ ತಮ್ಮ ಮುಖ್ಯ ಕಾರಖಾನೆಗಳಿರುವ ಮಾಲೀಕರು ಅನುಕ್ರಮವಾಗಿ ಈ ಕಾರ್ಯಾಲಯಗಳಿಗೆ ನೋಂದಣಿಗಾಗಿ ನಿರ್ಧರಿಸಿದ ನಮೂನೆಯಲ್ಲಿ ನಿಗದಿಯಾದ ಶುಲ್ಕವನ್ನು ಕೊಟ್ಟು ಅರ್ಜಿಗಳನ್ನು ಸಲ್ಲಿಸಬೇಕಾಗುತ್ತದೆ. ಸದೃಶವಾದ ಇಲ್ಲವೇ ಸಾಮ್ಯವಿರುವ ಇನ್ನೊಂದು ವ್ಯಾಪಾರ ಚಿಹ್ನೆಯ ನೋಂದಣಿಯನ್ನು ವಿರೋಧಿಸುವುದಕ್ಕೆ ಅಥವಾ ಅಂತಹ ವ್ಯಾಪಾರ ಚಿಹ್ನೆಯ ಮಾಲೀಕನ ವಿರುದ್ಧ ನ್ಯಾಯಾಲಯ ಕಚೇರಿಗಳಲ್ಲಿ ಕಾನೂನುಬದ್ಧ ಕ್ರಮಗಳನ್ನು ಕೈಗೊಳ್ಳುವುದಕ್ಕೆ, ಇಲ್ಲವೇ ಕ್ರಮಗಳನ್ನು ಎದುರಿಸುವುದಕ್ಕೆ ಈ ನೋಂದಣಿ ಪ್ರಮಾಣ ಪತ್ರ ವ್ಯಾಪಾರ ಚಿಹ್ನೆಯ ಒಡೆತನ ಪಕ್ಕಾ ಪುರಾವೆಯಾಗಿ ಸಹಾಯಕವಾಗುತ್ತದೆ. ಸರ್ಕಾರ ತಾನಾಗಿಯೇ ಕಾನೂನು ವಿರುದ್ಧವಾದ ವ್ಯಾಪಾರಚಿಹ್ನೆಯ ಉಪಯೋಗದ ಸಂಬಂಧವಾಗಿ ಯಾವ ಕ್ರಮವನ್ನೂ ತೆಗೆದುಕೊಳ್ಳುವದಿಲ್ಲ. ನೋಂದಣಿಯಾಗದೆ ಇರುವ ವ್ಯಾಪಾರ ಚಿಹ್ನೆಯನ್ನು 'ರಿಜಿಸ್ಟರ್ಡ್' ಎಂದು ಕರೆಯುವುದು ಅಪರಾಧವಾಗುತ್ತದೆ. ನೋಂದಣಿಗಾಗಿ ಎಲ್ಲ ಸರಕುಗಳನ್ನೂ 34 ವರ್ಗಗಳಲ್ಲಿ ವಿಭಾಗಿಸಲಾಗಿದೆ. ಉದಾಹರಣೆಗೆ ಈ ವಿಭಜನೆಯ ಅನುಸಾರ ಊದುಬತ್ತಿ, ಅತ್ತರು, ಸಾಬೂನು, ಕಾಂತಿ ಚೂರ್ಣ, ಕುಂಕುಮ ಮುಂತಾದವು ಮೂರನೆಯ ವರ್ಗದಲ್ಲಿಯೂ ಔಷಧಗಳು ಐದನೆಯ ವರ್ಗದಲ್ಲಿಯೂ ಕಾಗದ, ಶಾಯಿ, ಪೆನ್ನು ಮುಂತಾದ ಲೇಖನ ಸಾಮಗ್ರಿಗಳು ಹದಿನಾರನೆಯ ವರ್ಗದಲ್ಲಿಯೂ ಬೀಡಿ, ಸಿಗರೇಟು, ನಶ್ಯ, ತಂಬಾಕು, ಬೆಂಕಿಪೆಟ್ಟಿಗೆ ಮುಂತಾದವು ಮೂವತ್ನಾಲ್ಕನೆಯ ವರ್ಗದಲ್ಲಿಯೂ ಸೇರುತ್ತವೆ. ಕಾನೂನಿನನ್ವಯ ಎರಡು ವ್ಯಾಪಾರ ಚಿಹ್ನೆಗಳು ಒಂದನ್ನೊಂದು ಹೋಲುವಂತಿದ್ದರೂ ಅವು ಬೇರೆ ಬೇರೆ ವರ್ಗಗಳಲ್ಲಿ ಸೇರುವ ಸರಕುಗಳ ಸಂಬಂಧದಲ್ಲಿ ಉಪಯೋಗಿಸಲ್ಪಡುತ್ತಿದ್ದಲ್ಲಿ ಅವು ಸದೃಶವೆಂದು ಅವುಗಳ ನೋಂದಣಿಗೆ ಅಡ್ಡಿ ಬರುವುದಿಲ್ಲ. ಆದಾಗ್ಯೂ ಒಂದು ವ್ಯಾಪಾರ ಚಿಹ್ನೆ ಇನ್ನೊಂದು ವ್ಯಾಪಾರ ಚಿಹ್ನೆಯನ್ನು ಹೋಲುತ್ತಿದ್ದರೆ ಅವೆರಡೂ ಬೇರೆ ಬೇರೆ ವರ್ಗಗಳಲ್ಲಿ ಸೇರುವ ಸರಕುಗಳ ಸಂಬಂಧದಲ್ಲಿ ಉಪಯೋಗಿಸಲ್ಪಡುತ್ತಿದ್ದರೂ ಅವುಗಳಲ್ಲಿ ಒಂದು ಅತಿ ಪ್ರಸಿದ್ಧವಾಗಿದ್ದು ಅದರ ನೋಂದಣಿಯಾಗಿದ್ದರೆ ಅವೆರಡೂ ವ್ಯಾಪಾರಚಿಹ್ನೆಗಳಲ್ಲಿರುವ ಹೋಲಿಕೆಯ ಮೂಲಕ ಅವಕ್ಕೆ ಸಂಬಂಧಿಸಿದ ಸರಕುಗಳು ಒಂದೇ ಮೂಲದಿಂದ ಬಂದಿವೆ ಎಂಬ ಸಂಶಯ ಜನತೆಯ ಮನಸ್ಸಿನಲ್ಲಿ ಮೂಡುವುದು ಸಾಧ್ಯ ಎಂದು ಸಾಬೀತಾದರೆ ಎರಡನೆಯ ಛಾಪಿನ ನೋಂದಣಿ ತಿರಸ್ಕೃತ

ವಾಗುವ ಸಂಭವವಿರುತ್ತದೆ. ಒಂದು ವ್ಯಾಪಾರ ಚಿಹ್ನೆಯು ನೋಂದಣಿಯಾಗಬೇಕಿದ್ದರೆ ಅದು ಎಂತಿರಬೇಕೆಂಬ ಸಂಬಂಧದಲ್ಲಿ ಸೂಕ್ತ ನಿಯಮಗಳನ್ನು ಕಾನೂನು ಹೇಳುವುದಿಲ್ಲ. ಅಂಥ ನಿಯಮಗಳನ್ನು ನಿಶ್ಚಿತವಾಗಿ ಹೇಳಹೋಗುವುದು ಅಚಾತುರ್ಯವೂ ಅಪಾಯಕರವೂ ಆಗಬಹುದು. ವ್ಯಾಪಾರ ಚಿಹ್ನೆಯ ಸಂಬಂಧದಲ್ಲಿ ಒಂದೊಂದು ಪ್ರಕರಣವೂ ಅದರ ಗುಣ ಮತ್ತು ಸಂದರ್ಭಗಳನ್ನು ಅವಲಂಬಿಸಿರುತ್ತದೆ ಎಂದಷ್ಟೇ ಹೇಳಬಹುದು. ಆದರೂ ಸ್ಥೂಲವಾಗಿ ಒಂದು ವ್ಯಾಪಾರ ಚಿಹ್ನೆ 1 ವಿಶಿಷ್ಟ ಅಥವಾ ವಿಲಕ್ಷಣ ಅಥವಾ ಅಸಾಮಾನ್ಯ ರೀತಿಯಲ್ಲಿ ತೋರಿಸಲಾದ ಒಬ್ಬ ವ್ಯಕ್ತಿಯ ಅಥವಾ ಸಂಸ್ಥೆಯ ಹೆಸರಾಗಿರದಿದ್ದರೆ, 2 ಅರ್ಜಿದಾರನ ಇಲ್ಲವೇ ವ್ಯಾಪಾರ ಚಿಹ್ನೆಯ ಮಾಜೀ ಮಾಲೀಕನ ಸಹಿಯಾಗಿರದಿದ್ದರೆ, 3 ಒಂದು ಇಲ್ಲವೇ ಹೆಚ್ಚು ಉಪಜ್ಞಾತ ಇಲ್ಲವೇ ಟಂಕಿತ ಪದಗಳನ್ನು ಒಳಗೊಂಡಿರದಿದ್ದರೆ 4 ಸರಕಿನ ಗುಣವನ್ನು ಇಲ್ಲವೆ ದರ್ಜೆಯನ್ನು ನೇರವಾಗಿ ಸೂಚಿಸಿದ ಇಲ್ಲವೇ ಸರಕನ್ನು ಗುರುತಿಸದ ಪದ ಇಲ್ಲವೇ ಪದಗಳನ್ನು ಒಳಗೊಂಡಿರದಿದ್ದರೆ ಅಥವಾ 5 ಇನ್ನಾವುದೇ ವಿಶಿಷ್ಟ ಗುಣವನ್ನು ಹೊಂದಿರದಿದ್ದರೆ ಅಂತಹ ವ್ಯಾಪಾರಚಿಹ್ನೆ ನೋಂದಣಿ ಪಡೆಯುವುದಿಲ್ಲ ಎಂದು ಹೇಳಬಹುದು. ಭೌಗೋಳಿಕ ನಾಮ ಉಪನಾಮ, ಒಂದು ಸಮಾಜದ ಇಲ್ಲವೇ ಪಂಗಡದ ಹೆಸರು ಇವು ಸಾಮಾನ್ಯವಾಗಿ ವ್ಯಾಪಾರ ಚಿಹ್ನೆಗಳಂತೆ ನೋಂದಣಿ ಪಡೆಯುವುದು ಕಷ್ಟ. ಅಂತೆಯೇ ನಂ 786 ಇಲ್ಲವೇ ಚಂದ್ರ ಮತ್ತು ನಕ್ಷತ್ರ ಮುಂತಾದ ಧಾರ್ಮಿಕ ಸಂಜ್ಞೆಗಳು, ಶ್ರೀ ಮುಂತಾದ ಅಕ್ಷರಗಳು ನೋಂದಣಿಗೆ ಅನರ್ಹವಾಗುತ್ತವೆ. ವ್ಯಾಪಾರಚಿಹ್ನೆ ಅಂಕಿತನಾಮ, ನಂಬರು ಇಲ್ಲವೇ ಅಕ್ಷರಗಳನ್ನು ಒಳಗೊಂಡಿದ್ದಾದಲ್ಲಿ ಅದರ ನೋಂದಣಿಯಾಗಬೇಕಿದ್ದರೆ ಅದು ಬಹಳ ವರ್ಷಗಳ ಉಪಯೋಗದ ಮೂಲಕ ಪ್ರಸಿದ್ಧಿ ಪಡೆದ ಪುರಾವೆಯಿರಬೇಕಾಗುತ್ತದೆ. ಅಕ್ಷರಗಳು ಕೂಡಕ್ಷರದ ರೂಪದಲ್ಲಿದ್ದರೆ ಸುಲಭವಾಗಿ ನೋಂದಣಿಯಾಗಬಹುದು.

ವ್ಯಾಪಾರ ಚಿಹ್ನೆ ಒಂದು ಉತ್ತಮ ಕೈಗಾರಿಕಾ ಸ್ವತ್ತು. ಅದರ ಆಯ್ಕೆಯ ವಿಷಯದಲ್ಲಿ ಅತ್ಯಂತ ಜಾಗರೂಕತೆ ವಹಿಸಬೇಕಾದ್ದು ಅನಿವಾರ್ಯ. ಸರಕುಗಳ ಕೈಗಾರಿಕೆಯ ಅಭಿವೃದ್ಧಿಯಲ್ಲಿ ಅದು ಒಂದು ಮಹತ್ತ್ವದ ಪಾತ್ರವನ್ನು ವಹಿಸುತ್ತದೆ. ಅದನ್ನು ಪರರು ನಕಲಿ ಮಾಡದಂತೆ ಆಸ್ಥೆ ವಹಿಸಿ ಕಾಪಾಡಿಕೊಂಡು ಬಂದಲ್ಲಿ ಅದು ತನ್ನ ಒಡೆಯನಿಗೆ ತಕ್ಕ ಪ್ರತಿಫಲವನ್ನು ಕೊಡಬಲ್ಲದು.

ಎಂ. ಹನುಮಂತರಾವ್
ಕೆ. ಮೊಹಮ್ಮದ್ ಶರೀಫ್

# ಕೃಷ್ಣದೇವರಾಯನ ಸಿರಿವರ ದಾನಶಾಸನ

ಬಳ್ಳಾರಿ ಜಿಲ್ಲೆ ಹಡಗಲಿ ತಾಲ್ಲೂಕು ಉತ್ತಂಗಿಯಲ್ಲಿರುವ ಶ್ರೀ ಎ. ಎಮ್. ಷಣ್ಮುಖಯ್ಯನವರ ಬಳಿ ಈ ತಾಮ್ರಶಾಸನವಿರುವ ಸುದ್ದಿಯನ್ನು ತಿಳಿಸಿ, ಷಣ್ಮುಖಯ್ಯನವರ ಸ್ನೇಹಿತರಾದ ಶ್ರೀ ಕೆ. ಜಿ. ಈರಪ್ಪನವರ ನೆರವಿನಿಂದ, ಈ ಶಾಸನವನ್ನು ಓದಿ ಪ್ರತಿಮಾಡಿಕೊಳ್ಳುವುದಕ್ಕಾಗಿ, ನಮಗೆ ತರಿಸಿಕೊಟ್ಟು ಉಪಕರಿಸಿದವರು ಮೈಸೂರಿನಲ್ಲಿರುವ ಶ್ರೀ ಎನ್. ತೇಗೋಜಿರಾಯರು. ಈ ಶಾಸನವನ್ನು ಪ್ರಕಟಿಸಲು ಹೀಗೆ ನಮಗೆ ನೆರವಿತ್ತ ಈ ಎಲ್ಲರಿಗೂ ನಮ್ಮ ಕೃತಜ್ಞತೆಗಳು ಸಲ್ಲಬೇಕು. ಈ ಶಾಸನದ ಹಲಗೆಗಳು ಷಣ್ಮುಖಯ್ಯನವರ ಮನೆಯಲ್ಲಿ ಬಹಳ ಕಾಲದಿಂದ ಇರುವುದಾಗಿ ತಿಳಿದುಬರುತ್ತದೆ. ಅವರಲ್ಲಿಗೆ ಅದು ಹೇಗೆ ಬಂತು ಎಂಬುದರ ಸುಳಿವು ಈಗ ದೊರೆಯದು.

ತಾಮ್ರಶಾಸನ ಮೂರು ಹಲಗೆಗಳುಳ್ಳದ್ದಾಗಿದ್ದು ಈ ಹಲಗೆಗಳನ್ನು ಅವುಗಳ ಮೇಲ್ಭಾಗದಲ್ಲಿರುವ ರಂಧ್ರದ ಮೂಲಕ 7 ಸೆಂಮೀ. ಅಡ್ಡಳತೆಯುಳ್ಳ ಬಳೆಯೊಂದನ್ನು ಪೋಣಿಸಿ ಬಂಧಿಸಲಾಗಿದೆ. ಬಳೆಗೆ ವರಾಹ ಮುದ್ರೆಯೊಂದನ್ನು ಸೇರಿಸಿದೆ. 26 ಸೆಂಮೀ. ಉದ್ದ, 17 1/2 ಸೆಂಮೀ. ಅಗಲವಿರುವ ಆಯತಾಕಾರದ ಹಲಗೆಗಳ ಮೇಲ್ಭಾಗ ಕಮಾನಿನಾಕಾರದಲ್ಲಿದೆ. ಮೊದಲ ಮತ್ತು ಕಡೆಯ ಹಲಗೆಗಳ ಒಳಭಾಗದಲ್ಲಿಯೂ ನಡುವಣ ಹಲಗೆಯ ಎರಡು ಕಡೆಗಳಲ್ಲಿಯೂ ಶಾಸನವನ್ನು ಕಂಡರಿಸಿದೆ. ಅಕ್ಷರಗಳು ತಕ್ಕಮಟ್ಟಿಗೆ ಸ್ಫುಟವಾಗಿವೆ. ಹಲಗೆಗಳು ಉಜ್ಜಿ ಲಿಪಿ ಬೇಗ ಸವೆದುಹೋಗದಂತಿರಲು ಹಲಗೆಗಳ ಅಂಚನ್ನು ಲಿಪಿಯನ್ನು ಕಂಡರಿಸಿರುವ ಮುಖದ ಕಡೆ ಸ್ವಲ್ಪ ಉಬ್ಬಿಸಿದೆ. ಇದರ ಒಟ್ಟು ತೂಕ ಸುಮಾರು 3 ಕೆಜಿ. ಗಳಷ್ಟು.

ಶಾಸನದ ಲಿಪಿ ನಂದಿನಾಗರಿ. ಕೊನೆಯಲ್ಲಿರುವ 'ಶ್ರೀ ವಿರೂಪಾಕ್ಷ' ಎಂಬ ಅಂಕಿತ ಮಾತ್ರ ಕನ್ನಡ ಲಿಪಿಯಲ್ಲಿದೆ. ಭಾಷೆ ಸಂಸ್ಕೃತ : ಪದ್ಯಶೈಲಿ. ಆದರೆ ದತ್ತಿ ಬಿಟ್ಟ ಗ್ರಾಮದ ಸೀಮೆಯನ್ನು ತಿಳಿಸುವಲ್ಲಿ ಮಾತ್ರ ಕನ್ನಡ ಭಾಷೆಯನ್ನುಪಯೋಗಿಸಿದ್ದು ಅದು ಗದ್ಯದಲ್ಲಿದೆ. ಶಾಸನದಲ್ಲಿ ಭಾಷಾ ಸ್ಖಾಲಿತ್ಯ ಸ್ವಲ್ಪ ಹೆಚ್ಚಾಗಿಯೇ ಇದೆ. ಇದು ಬಹುಶಃ ಲಿಪಿಕಾರನ ದೋಷವಿರಬೇಕು. ಇದರೊಂದಿಗೆ ಕೊನೆಯ ಹಲಗೆಯಲ್ಲಿ ದತ್ತಿ ಬಿಟ್ಟ ಊರಿನ ಎಲ್ಲೆಯನ್ನು ತಿಳಿಸುವ ಸ್ವಲ್ಪ ಭಾಗವನ್ನು ಉದ್ದೇಶಪೂರ್ವಕವಾಗಿ ಚಚ್ಚಿರುವುದರಿಂದ ಅಷ್ಟು ಭಾಗ ಈಗ ನಷ್ಟವಾಗಿದೆ.

ವಿಜಯನಗರ ಸಂಸ್ಥಾನದ ಚಕ್ರವರ್ತಿ ಕೃಷ್ಣದೇವರಾಯ ಹಾಕಿಸಿರುವ ಈ ತಾಮ್ರಶಾಸನ ಇತರ ಅನೇಕ ತಾಮ್ರಶಾಸನಗಳಂತೆಯೇ ಇದ್ದು, ಅವರಲ್ಲಿ ಚಕ್ರವರ್ತಿಯ ವಂಶಾವಳಿ

ಯನ್ನು ಪೌರಾಣಿಕ ಕಾಲಕ್ಕೆ ಒಯ್ದಿದೆ. ಕ್ಷೀರಸಾಗರವನ್ನು ಕಡೆದಾಗ ಹುಟ್ಟಿದ ಚಂದ್ರ ಈ ವಂಶಕ್ಕೆ ಮೂಲಪುರುಷ. ಈ ಚಂದ್ರವಂಶದಲ್ಲಿ ಬುಧ, ಪುರೂರವ, ಆಯು, ನಹುಷ, ಯಯಾತಿ ಮೊದಲಾದ ಪೌರಾಣಿಕ ಅರಸರ ಪೀಳಿಗೆಯನ್ನು ತಿಳಿಸಿ ಆ ವಂಶದಲ್ಲಿ ತಿಮ್ಮ ಭೂಪತಿ ಜನಿಸಿದನೆನ್ನುತ್ತದೆ. ಶಾಸನದಲ್ಲಿ ಈ ವಂಶ ತುಳುವ ವಂಶವೆಂದು ಪ್ರಸಿದ್ಧವಾಗುತ್ತದೆ. ಆದ್ದರಿಂದ ಈ ತುಳುವ ವಂಶಕ್ಕೆ ಮೂಲಪುರುಷ ತಿಮ್ಮ ಭೂಪತಿ ಮತ್ತು ಈ ವಂಶದ ಮುಂದಿನ ಪೀಳಿಗೆ ಹೀಗಿದೆ.

ತಿಮ್ಮಭೂಪತಿ–ದೇವಕಿ

|

ಈಶ್ವರ–ಬುಕ್ಕಮ್ಮ

|

ನರಸ–1 ತಿಪ್ಪಾಜಿ 2 ನಾಗಲಾದೇವಿ

| |

ನೃಸಿಂಹ ಕೃಷ್ಣರಾಯ

ಇವರಲ್ಲಿ ನರಸಿಂಹ ಮತ್ತು ಕೃಷ್ಣದೇವರಾಯರ ಸಾಹಸ ಪರಾಕ್ರಮಗಳನ್ನೂ ದಾನಶೀಲತೆಯನ್ನೂ ವಿಶೇಷವಾಗಿ ಸ್ತುತಿಸಿದ್ದು, ಕೃಷ್ಣದೇವರಾಯನ ಅನೇಕ ತಾಮ್ರಶಾಸನಗಳಲ್ಲಿ ಕಂಡು ಬರುವ ವರ್ಣನೆಯೇ ಇದರಲ್ಲಿಯೂ ತುಂಬಿದೆ.

ಇದು ಒಂದು ದಾನಶಾಸನ. ವೇದವೇದಾಂತ ಪಾರಂಗತನಾದ ವಿಷ್ಣು ಭಟ್ಟೋಪಾಧ್ಯಾಯನ ಮಗನಾದ ಗೋಪೀನಾಥಭಟ್ಟನಿಗೆ ಕೃಷ್ಣದೇವರಾಯ ಶಿರಿವರ ಎಂಬ ಗ್ರಾಮವನ್ನು ಕೃಷ್ಣರಾಯಪುರ ಎಂಬ ಹೆಸರಿನಿಂದ ದತ್ತಿಬಿಟ್ಟಿದ್ದಾನೆ. ದಾನ ಕೊಟ್ಟ ಗ್ರಾಮ ರಾಯದುರ್ಗ ರಾಜ್ಯದ ಉರವಕೊಂಡ ಸೀಮೆಗೆ ಸೇರಿರುವುದಾಗಿ ಶಾಸನ ತಿಳಿಸುತ್ತದೆ. ಹೀಗೆ ಕೊಟ್ಟ ದಾನದ ಗ್ರಾಮವನ್ನು ಗೋಪೀನಾಥಭಟ್ಟ ಐದು ಭಾಗಗಳಾಗಿ ವಿಂಗಡಿಸಿ, ತನ್ನ ಸೋದರರೊಂದಿಗೆ ಹಂಚಿಕೊಂಡಿದ್ದಾನೆ. $1\frac{3}{4}$ ಭಾಗವನ್ನು ತನಗೆ ಉಳಿಸಿಕೊಂಡು ತನ್ನ ಅಣ್ಣ ಧರ್ಮಭಟ್ಟನಿಗೆ $1\frac{1}{4}$ ಭಾಗವನ್ನು, ಇಬ್ಬರು ತಮ್ಮಂದಿರಾದ ಮಾಧವ ಮತ್ತು ತಿರುಮಲಾರ್ಯರಿಗೆ ಒಂದೊಂದು ಭಾಗವನ್ನು ಹಂಚಲಾಗಿದೆ. ಪುನಃ ಈ ಗ್ರಾಮವನ್ನು 120 ವೃತ್ತಿಗಳಾಗಿ ವಿಂಗಡಿಸಿ ನೂರು ವೃತ್ತಿಗಳನ್ನು ಮೇಲಿನ ರೀತಿಯಲ್ಲಿ ತಾವು ನಾಲ್ಕು ಜನ ಹಂಚಿಕೊಂಡು, ಉಳಿದ 20 ವೃತ್ತಿಗಳಲ್ಲಿ ಹದಿನೈದನ್ನು ಮಾತ್ರ ಕೆಲವು ಬ್ರಾಹ್ಮಣರಿಗೆ ಹಂಚಿದ್ದಾರೆ. ಈ ಭಾಗದಲ್ಲಿ ಲಿಪಿ ಹೆಚ್ಚು ಸ್ಪಷ್ಟವಿಲ್ಲದೆ ಭಾಷೆಯಲ್ಲಿಯೂ ಸ್ಖಾಲಿತ್ಯ ಹೆಚ್ಚಾಗಿರುವುದರಿಂದ ಈ ವಿವರ ಹೆಚ್ಚು ಸ್ಪಷ್ಟವಾಗಿಲ್ಲ. ದಾನ ಪಡೆದ ಇತರರಲ್ಲಿ ರಾಮಾಭಟ್ಟ, ಔಘನಭಟ್ಟ, ನಾರಸಿಂಹ ಭಟ್ಟ, ನಾರಾಯಣಭಟ್ಟ ಇವರ ಹೆಸರುಗಳನ್ನು ಗುರುತಿಸಬಹುದು.

ದಾನ ಕೊಟ್ಟ ಗ್ರಾಮ ಇರುವುದು ರಾಯದುರ್ಗ ರಾಜ್ಯದಲ್ಲಿ ಎಂದು ಹಿಂದೆಯೇ ಹೇಳಿದೆ. ಬಳ್ಳಾರಿ ಜಿಲ್ಲೆಯ ಅಂಚಿನಲ್ಲಿರುವ ರಾಯದುರ್ಗ (ಈಗ ಇದು ಆಂಧ್ರ ಪ್ರದೇಶಕ್ಕೆ ಸೇರಿದೆ) ರಾಜ್ಯದ ಒಂದು ಮುಖ್ಯ ನಗರವಾಗಿತ್ತೆಂಬುದು ಇದರಿಂದ ಸ್ಪಷ್ಟ. ಶಿರಿವರದ ಸೀಮೆಯನ್ನು ವಿವರಿಸುವಲ್ಲಿ ಹಲವು ಊರುಗಳ ಹೆಸರುಗಳಿವೆ. ಅವುಗಳೆಂದರೆ ಪೈಲೋದೇವನಹಳ್ಳಿ,

ಮುಗಲವಳ್ಳಿ, ಬಳ್ಳಾರಿ, ಜಂಗನೂರು, ಬೂದಿಹಾಳ, ಅಮರಾಪುರ, ಕಕ್ಕೆಬೋವನಪಳ್ಳಿ, ಕೊತ್ತಲ, ಮಾದಿನಾಯಕನಪಳ್ಳಿ, ಸಂಗನಕಲ್ಲು, ಇಮ್ಮಗಲ್ಲು, ಹಾಲುವರ್ತ್ತಿ ಮೊದಲಾದುವು. ಬಳ್ಳಾರಿ ಈಗಿನ ಬಳ್ಳಾರಿ ಜಿಲ್ಲೆಯ ಮುಖ್ಯಪಟ್ಟಣ. ಉಳಿದ ಊರುಗಳಲ್ಲಿ ಅನೇಕವು ಅದೇ ಹೆಸರುಗಳಿಂದ ಉಳಿದುಬಂದಿವೆ. ಇವುಗಳಲ್ಲಿ ಬಳ್ಳಾರಿಯಿಂದ ಮುಗಲವಳ್ಳಿ 8 ಮೈಲಿ ದೂರದಲ್ಲಿ, ಜಾಗನೂರು 3 ಮೈಲಿ ದೂರದಲ್ಲಿ ಇವೆ. ಹಾಗೆಯೇ ಬೂದಿಹಾಳವು ಜಾಗನೂರಿಗೆ 2 ಮೈಲಿ ದೂರದಲ್ಲಿಯೂ ಬೂದಿಹಾಳದಿಂದ ಅಮರಾಪುರವು 3 ಮೈಲಿ ದೂರ ಇರುವುದನ್ನು ಗುರುತಿಸಬಹುದು.

ದಾನ ಕೊಟ್ಟಿದ್ದು ಶಕ 1438 ಧಾತು ಸಂವತ್ಸರ ಆಷಾಢಮಾಸದ ಅಮಾವಾಸ್ಯೆ ಭಾನುವಾರದಂದು, ಎಂದರೆ ಕ್ರಿ. ಶ. 1516ರಲ್ಲಿ. ಕೃಷ್ಣದೇವರಾಯನ ಈ ಶಾಸನವನ್ನು ಕಂಡರಿಸಿದವನು ಮಲ್ಲಣ್ಣನ ಮಗ ವೀರಣಾಚಾರ್ಯನೆಂದು ಶಾಸನ ತಿಳಿಸುತ್ತದೆ. ಈ ವೀರಣಾಚಾರ್ಯನೇ ಕೃಷ್ಣದೇವರಾಯನ ಹಲವಾರು ತಾಮ್ರಶಾಸನಗಳನ್ನು ಕಂಡರಿಸಿದ್ದಾನೆ.

ಶಾಸನದಲ್ಲಿ ಕೃಷ್ಣದೇವರಾಯನ ಬಗೆಗಾಗಲಿ, ಇತರ ರಾಜರ ವಿಷಯದಲ್ಲಾಗಲಿ ಯಾವ ಹೊಸ ಬೆಳಕೂ ಬೀಳುವುದಿಲ್ಲ. ಈಗಾಗಲೇ ದೊರೆತಿರುವ ಕೃಷ್ಣದೇವರಾಯನ ಹಲವಾರು ತಾಮ್ರ ಶಾಸನಗಳ ಸಾಲಿಗೆ ಇದೂ ಸೇರುತ್ತದೆ. ಆದರೆ ಇದರಲ್ಲಿನ ಸ್ಖಾಲಿತ್ಯ, ದಾನಕೊಟ್ಟ ಗ್ರಾಮವನ್ನು ಹಂಚಿಕೊಂಡಿರುವ ರೀತಿ ಇವುಗಳನ್ನು ಗಮನಿಸಿದಾಗ ಈ ಶಾಸನ ಕೂಟ ಶಾಸನವಿರಬಹುದೇ ಎಂಬ ಸಂಶಯ ಸುಳಿಯದೆ ಇರುವುದಿಲ್ಲ.

## ಮೊದಲನೆಯ ಹಲಗೆಯ ಹಿಂಭಾಗ

1 ಶ್ರೀ ಗಣಾಧಿಪತಯೇ ನಮಃ । ನಮಸ್ತುಂಗಶಿರಶ್ಚುಂಬಿ ಚಂದಚಾಮರಚಾ

2 ರವೆ ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ(ತ್) ॥ ಪರೇರ್ಲೀಲಾವರಾ

3 ಹಸ್ಯ ದಂಷ್ಟ್ರಾದಂಡಃ ಸ ಪಾತು ವಃ । ಹೇಮಾದ್ರಿಕಲಸಾ ಯತ್ರ ಧಾತ್ರೀಚ್ಛತ್ರಶ್ರಿ

4 ಯಂ ದಧೌ(ಃ) ॥ ಕಲ್ಯಾಣಾಯಾಸ್ತು ತಂಧಾಮ ಪ್ರತ್ಯೂಹತಿಮಿರಾಪಹಂ ।
ಯದ್ಗಜೋಪ್ಯ

5 ಗಜೋದ್ಭೂತಂ ಹರಿಣೇಪಿ ಚ ಪೂಜ್ಯತೇ ॥ ಅಸ್ತಿ ಕ್ಷೀರಮಯಾದ್ದೇವೈರ್ಮಥ್ಯಮಾ

6 ನಾನ್ಮಹಾಂಬುಧೇಃ । ನವನೀತೇಮಿವೋದ್ಭೂತಮಪನೀ[ತ*] ತಮೋಮಹಃ । ತಸ್ಯಾ
ಸೀತ್ತ

7 ನಯಸ್ತಪೋಭಿರತುಲ್ಯೈರನ್ವರ್ಥನಾಮಾ ಭುದ[ಃ] ಪುಣ್ಯೈರಸ್ಯ ಪುರೂರವಾ ಭುಜಾಬಲ್ಯೈ

8 ರಾಯುರ್ದ್ವಿಷೋ ನಿಘ್ನತಃ ತಸ್ಯಾಯುರ್ನಹುಷೊಪ್ಯ ತಸ್ಯ ಪರುಷೋ ಯಂದ್ಧೇ ಯಯಾತಿ
ಕ್ಷಿತೌ

9 ಕ್ಯಾತಸ್ತಸ್ಯ ತು ತುರ್ವಸೂರ್ವಸುನಿಭ ಶ್ರೀ ದೇವಯಾನಾಪತೇ ತದ್ವಂಶೇ ದೇವಕೀ
ಜಾನಿ ದಿದೀಪೇ ತಿಂಮ

10 ಭೂಪತಿ । ಯಸಸ್ವೀ ತುಲುವೇಂದ್ರೇಷು ಯದೋ ಕೃಷ್ಣಇವಾನ್ವಯೇ । ತತೋಭೂದ್ಬು
ಕ್ಕಮಾಜಾನಿರೀಶ್ವರಕ್ಷಿ

11 ತಿಪಾಲಕಃ ಅತ್ಯಾಸಮಗುಣಭ್ರಂಶಂ ಮೌಲಿರತ್ನಂ ಮಹೀಭುಜಾಃ ಸರಸಾದುದಭೂತ್ತ
ಸ್ಮಾನ್ನರಸಾ

12 ವನಪಾಲಕಃ । ದೇವಕೀನಂದನಸತ್ಕಾರೋ ದೇವಕೀನಂದನಾದಿವ ಕಾವೇರೀ ಮಾಸುಬಧ್ವಾ ಬ
13 ಹಲಜಲತರಾಂ ಯೋ ವಿಲಂಘ್ಯೈವ ಶತ್ರುಂ ಜೀವಗ್ರಾಹಂ ಗೃಹೀತ್ವಾ ಸಮಿತಿ ಭುಜಬಲಾ
ತಂ ಚ ರಾಜ್ಯಂ
14 ತದೀಯಂ ಕೃತ್ವಾ ಶ್ರೀರಂಗಪೂರ್ವಂ ತದಪಿ ನಿಜವಶೇ ಪಟ್ಟಣಂ ಯೋ ಬಭಾಸೇ ಕೀರ್ತಿ
ಸ್ತಂಭಂ ನಿ
15 ಖಾಯ ತ್ರಿಭುವನಭವನಸ್ತೂಯಮಾನಾಪದಾನಃ। ಚೇರಂ ಚೋಲಂಚ ಪಾಂಡ್ಯಂ
ತಮಪಿ ಚ ಮ
16 ಧುರಾವಲ್ಲಭಂ ಮಾನಭೂಷಂ ವೀರೋದಗ್ರಂ ತುರುಷ್ಕಂ ಗಜಪತಿನೃಪತಿ
(ಂ)ಶ್ಚಾಪಿ ದಿತ್ವಾ ತದನ್ಯಾ
17 ನ್ ಆಗಂಗಾತೀರಲಂಕಾಪ್ರಥಮಚರಮಭೂಭೃತ್ತಟಾಂತಂನಿತಾಂತಂ ಖ್ಯಾತ
ಕ್ಷೋಣೀಪತೀನಾಂ
18 ಸ್ರಜಮಿವ ಶಿರಸಾಂ ಶಾಸನಂ ಯೋ ವ್ಯತಾಸೀತ್ । ವಿವಿಧ ಸಕಲೋದ್ದಾಮೇ
ರಾಮೇಶ್ವರಪ್ರಮು
19 ಖೇ ಮಹಾಮರ್ಯಾದಿತಹೃದಯಸ್ಥಾನೇ ಸ್ಥಾನೇ ವ್ಯಧತ್ತ ಯ[ಥಾ] ವಿಧಿ ಬುಧಪರಿವೃ
ತೋ ನಾನಾದಾ
20 ನಿ ಯೋ ಭುವಿ ಷೋಡಶ ತ್ರಿಭುವನಜನೋದ್ಗೀತಂ ಖ್ಯಾತಂ ಯಶಂ ಪುನರುಕ್ತಯನ್
21 ತಿಪ್ಪಾಜೀನಾಗಲಾದೇವ್ಯೋಃ ಕೌಸಲ್ಯಾಶ್ರೀಸುಮಿತ್ರಯೋಃ ।ದೇವ್ಯೋರಿವ ನೃಸಿಂಹೇಂದ್ರ
ತಸ್ಮಾ
22 ತ್ಪಂಕ್ತಿರಥಾದಿವ ವೀರೌ ವಿನಯಿನೌ ರಾಮಲಕ್ಷ್ಮಣಾವಿವ ನಂದನೌ [ಜಾ]ತೌ
23 ವೀರನೃಸಿಂಹೇಂದ್ರಕೃಷ್ಣರಾಯಮಹೀಪತೀ । ವೀರಶ್ರೀನಾರಸಿಂಹಃ ಸ ವಿಜ
24 ಯನಗರೇ ರತ್ನಸಿಂಹಾಸನಸ್ಥಃ ಕೀರ್ತ್ಯಾ ನೀತ್ಯಾ ನಿರಸ್ಯ[ನೃಗ] ನಲನಹುಷಾ
25 ನಪ್ಯವನ್ಯಾಮಧಾನ್ಯಾನ್ ಆಸೇತೋರಾಸುಮೇರೋರವನಿಸುರನುತಸ್ವೈರಮಾಚೋ
26 ದಯಾದ್ರೇರಾಪಾಸ್ತ್ಯಾತ್ಯಾಚಲಾಂತಾದಖಿಲಹೃದಯಮಾವರ್ಜ ರಾಜ್ಯಂ ಶಶಾಸ ॥ ನಾ
27 ನಾದಾನಾನ್ಯಕಾರ್ಷೀತ್ಕನಕಸದಶಿ ಯಃ ಶ್ರೀ ವಿರೂಪಾಕ್ಷದೇವಸ್ಥಾನೇ ಶ್ರೀಕಾಲಹಸ್ತೀ[ಶಿ]
28 ತುರಪಿ ನಗರೇ ವೇಂಕಟಾದ್ರೌ ಚ ಕಾಂಚ್ಯಾಂ ಶ್ರೀಶೈಲೇ ಶೋಣಶೈಲೇ ಮಹತಿ ಹರಿ
ಹರೇಹೋ
29 ಬಲೇ ಸಂಗಮೇ ಚ ಶ್ರೀರಂಗೇ ಕುಂಭಘೋಣೇ ಹತ ತಮಸಿ ಮಹಾನಂದಿತೀರ್ಥೇ
ನಿಮಿತ್ತೌ

**ಎರಡನೆಯ ಹಲಗೆಯ ಮುಂಭಾಗ**

30 ಗೋಕರ್ಣೇ ರಾಮಸೇತೌ ಜಗತಿತದಿತರೇಷ್ವಪ್ಯಸಪೇಷು ಪುಣ್ಯ
31 ಸ್ಥಾನೇಶ್ವಾಲಬ್ಧನಾನಾವಿಧಸತ್ರಲಮಹಾದಾನವಾರಿಪ್ರ
32 ವಾಹೈಃ ಯಸ್ಯೋದ[ಂ]ಚತುರ[ಂ]ಗಪ್ರಕತ ಸುರರಜಸುಹೃದಂಬೋಧಿಮಘ್ನಕ್ಷ್ಮಾ

33 ಭೃಪ್ತಃ ಕ್ಷತ್ರಿಯೋದ್ಭೂತಃರಕುಲಿಶಧರಾತ್ಮಂಶಿತಾಕುಂರಿತಾಭೂತ್ ॥ ಬ್ರಹ್ಮಾಂಡಂ ವಿ
34 ಶ್ವಚಕ್ರಂ ಘಟಮುದಿತಮಹಾಭೂತಕಂ ರತ್ನಧೇನುಂ ಸಪ್ತಾಂಭೋಧಿಂ ಚ ಕಲ್ಪಕ್ಷಿ[ತಿ]
35 ರುಪಲತಿಕೇ ಕಾಂಚನೀಂ ಕಾಮಧೇನುಂ । ಸ್ವರ್ಣಕ್ಷ್ಮಾಪ್ರೋ ಹಿರಣ್ಯಾಶ್ವರಥಮಪಿ ತು
36 ಲಾಪೂರುಷಂ ಗೋಸಹಸ್ರಂ ಹೇಮಾಶ್ವ ಹೇಮಗರ್ಭಂ ಕನಕಕರಿರಥಂ ಪಂಚಲಾಂ
ಗಲ್ಯತಾನೀ
37 ತ್॥ ರಾಜ್ಯಂ ಪ್ರಸಾಸ್ಯ ನಿರ್ವಿಘ್ನಂ ರಾಜ್ಯಂ ಪ್ರಾಮಿವ ಶಾಂತಃ । ತಸ್ಮಿನ್ ಗುಣೇನ
ವಿಖ್ಯಾ
38 ತೇ ಕ್ಷಿತೇರಿಂದ್ರದಿವಂಗತೇ । ತತೋಪ್ಯವಾರ್ಯವೀರಶ್ರೀಕೃಷ್ಣರಾಯಮಹೀಪತಿಃ ।
39 ಬಿಭರ್ತಿ ಮಣಿಕೇಯೂರನಿವಿ[F]ಶೇಷಂ ಮಹೀಂ ಭುಜೇ ಕೀರ್ತ್ಯಾ ಯಸ್ಯ ಸಮಂತತಃ ಪ್ರ
40 ಸೃತಯಾ ವಿಶ್ವಂ ರುಚೈಕ್ಯಂ ವ್ರಜೇದಿತ್ಯಾಶಂಕ್ಯ ಪುರಾ ಪುರಾರಿರಭವದ್ಭಾಲೇಕ್ಷಣಃ
41 ಪ್ರಾಯಶಃ । ಪದ್ಮಾಕ್ಷೋಪಿ ಚತುರ್ಭುಜೋಪಿ ಚತುರ್ವಕ್ತ್ರೋಭವತ್ ಪದ್ಮ
ಭೂ ಕಾಲೀ ಖ
42 ಡ್ಗಮಥಾದ್ರಮಾ ಚ ಕಮಲಂ ವೀಣಾಂ ಚ ವಾಣೀ ಕರೇ । ಶತ್ರೂಣಾಂ ವಾ ಸಮೇತೆ
ದದತಿ ದ
43 ತಿ ರುಷಾ ಕಿಂನು ಶಪ್ತಾಂಬುರಾಸೀ ನಾನಾಸೇನಾತುರಂಗತ್ರುಟಿತವಸುಮತೀಧೂಲಿ
44 ಕಾಪಾಲಿಕಾಭಿಃ ಸಂಶೋಷ್ಯ ಶ್ವೈರಮೇತತ್ಪ್ರತಿನಿಧಿ ಜಲಧಿಶ್ರೇಣಿಕಾ ಯೋ ವಿಧ
45 ತ್ತೇ ಬ್ರಹ್ಮಾಂಡಸ್ವರ್ಣಮೇರುಪ್ರಮುಖನಿಜಮಹಾದಾನತೋಯೈರಮೇಯೈಃ
ಮದ್ದತ್ತಾಮರ್ತಿ
46 ಸಾರ್ಥ ಶ್ರಿಯಮಿಹ ರುಚಿರಂ ಬುಜತಾಮಿತ್ಯಪೇತ್ಯಃ । ಪ್ರಾಯಃ ಪ್ರತ್ಯೂಷಹೇ
ತೋಸ್ಮಪನರ
47 ಥಗತೇರಾಲಯಂದಮತಾನಾಂ ॥ ತತ್ತದಿಗ್ಜೈತ್ರವೃತ್ತ್ಯಾಪಿ ಚ ಬಿರುದಪದೈರಂಕಿತೇ
48 ಸ್ತತ್ರ ತತ್ರೈಸ್ತಂಭಾಂ ಜಾತ ಪ್ರತಿಷ್ಠಾಪಿತನುತ ಭುವಿ ಯೋ ಭೂವಿಭುಂಕಸಾ
ಗ್ರಾನ್ ॥
49 ಕಾಂಚೀ ಶ್ರೀಶೈಲ ಶೋಣಾಚಲ ಕನಕಸಭಾ ವೇಂಕಟಾದ್ರಿ ಪ್ರಮುಖೇಷ್ವಾವೃತ್ಯಾವ
50 ತ್ಯ ಸರ್ವೆಷ್ವತನುತವಿಧಿವದ್ಭೂಯಸೇ ಶ್ರೇಯಸೇ ಯಃ॥ ದೇವಸ್ಥಾನೇಷು
ತೀರ್ಥೇಷ್ವಪಿಕ
51 ನಕತುಲಾಪೂರುಷಾದಾನಿ ನಾನಾದಾನೋಪೋಪದಾನ್ಯೈರಪಿ ಸಮಮಖಿಲಿರಾಗಮ
52 ಕ್ತಾನಿ ತಾನಿ॥ ರಾಪಪ್ರತಿಕೃತಪಾರ್ಥೀವದಂಷ್ಟ್ರಃ ಶೇಷಭುಜಕ್ಷಿತಿರಕ್ಷಣಶೌಂಡಃ ಭಾ
53 ಷೆಗೆತಪ್ಪುವರಾಯರಗಂಡಃ ಸ್ವಾಶಕೃತರ್ಥಿಷು ಯೋ ರಣಚಂಡ ಃ ರಾಜಾಧಿರಾಜ
ಇತ್ಯುಕ್ತೋ
54 ಯೋ ರಾಜಪರಮೇಶ್ವರಃ ಮೂರುರಾಯರಗಂಡಾಂಕಃ ಪರರಾಯಭಯಂಕರಃ ॥
ಹಿಂದೂರಾಯಸುರತ್ರಾಣೋ
55 ದುಷ್ಟಸಾಮಂತಮರ್ದನಃ ॥ ವೀರಪ್ರತಾಪಸಾಮಾದತ್ಯಾದಿನಿರುದ್ಧೈರುಚಿತ್ಯೈರ್ಜಿತಾ
ಅಳ್ಳೋಕಯಯ ಪ್ರ

56 ಹಾರಾಯ ಜಯ ಜೀವೇತಿ ವಾದಿಭಿಃ | ಅಂಗವಂಗಕಳಿಂಗದ್ಯೈರಾಜಭಿಃ ಸೇವ್ಯತೇ
57 ಚ ಯಃ ।ಸ್ವತ್ರ್ಯಾದಾರ್ಯಃ ಸುಧೀಭಿ ಸ ವಿಜಯನಗರೇ ರತ್ನಸಿಂಹಸನಸ್ಥಃ ।ಕ್ಷ್ಮಾಪಾ
58 ಲಾನ್ ಕೃಷ್ಣರಾಜಃ ಕ್ಷಿತಿಪತಿರ[ಪ]ಧರೀಕೃತ್ಯ ನೀತ್ಯಾ ನೃಗಾದೀನ್ | ಆಪೂರ್ವಾ
59 ದ್ರೇರಧಾಸ್ತ್ಥಃ ಕ್ಷಿತಿಧರಕಟಕಾದಾ ಚ ಹೇಮಾಚಲಾಂತಾದಾಸೇತೋರರ್ಥಿಸಾರ್ಥಂ
60 ಶ್ರಿಯಮಿಹ ಬಹುಲೀಂ ಕೃತ್ಯ ಕೀರ್ತ್ಯಾ ಸಮಿಂಧೇ ॥ ಶಾಲಿವಾಹನನಿರ್ಣೀತೇ ಸ
61 ಶಕಾಬ್ದೇ ಶ ಚತುಶ್ಶತೈ ಅಷ್ಟಾತ್ರಿಂಶಸಮಾಧಿಕ್ಯೈ ಸಂಯುತೇ ದಸಭಿಃ ಸತ್ಯೈಃ ಧಾತ್ರೀ
62 ವತ್ಸರೇ ಮಾಸೇಮಾಸ್ಯಾಘೇ ಭಾನುವಾಸರೇ । ಅಮಾವಾಸ್ಯಾ ತಿಥೌಪುಣ್ಯೇ
ಸಂಕ್ರಮೇಕಕಂ[ಟ]
63 ಹಾರ ಸನ್ನಿಧೌ ಬಾಲಕೃಷ್ಣಸಾಸರ್ವಸಂಪತ್ತಿದಾಯಿನಿ ಆಶ್ವಲಾಯನಸೂತ್ರಾಯ
64 ತ್ರಿಯೂಷ್ಣಯಜುಷ್ಮಿನೇ ರುಕ್ಶಾಖಾಧ್ಯಾಯಿನೇ ಮಮವದಾಂತಾಗಮವೇದಿನೇ

### ಎರಡನೆಯ ಹಲಗೆಯ ಹಿಂಭಾಗ

65 ಸೂನವೇ ವಿಷ್ಣುಭಟೋಪಾಧ್ಯಾಯಸ್ಯ ಮಹಾತ್ಮನೇ ಮಮಾ
66 ಕೃಪ್ರಮೋದೇಷು ಪರಾಂ ಪ್ರೀತಿಮುಪೇಯುಷಃ | ವಾಣೀಪಾಣಿಸ್ವಮೂ
67 ಣಿಕ್ಯವೀಣಾರಾಣಾನುಸಾರಿಣಾ | ಸರಸನರ್ಮಮೂದೂತಯಶಸೇ ವಚ
68 ಸದಾ ನಿರ್ಣೀತನೀತಿಶಾಸ್ತ್ರಾಯ ನಿರ್ಮಲಾತ್ಮಾಯ ಚೇತಸೇ | ಶ್ರೀ ಗೋಪಿನಾಥಭ
69 ಟಾಯ ಕೃತಿನೇ ಗುಣಶಾಲಿನೇ ರಾಯದುರ್ಗಸ್ಯ ರಾಜ್ಯಾಂತರ್ಭೂವಿಸ್ತಾಪಿ ಸಮಾಸಿ
70 ತಂ ಪರಾಗುರವಕೊಂಡಾಸ್ಯ ಸೀಮಾಯಾಂ ಸ್ಯಾತಿಮಾಸಿತಂ ಬಲಾರೇನಾಮಕಾಗ್ರಾಮಾ
71 ನ್ ಪ್ರಾಚೀಮಾಸನುಪಾಸಿತಂ | ಕಪಾಗಲ್ಲ್ಯಕಯ. ಮಾದಕ್ಷಿಣಸ್ಯಾಂದಿಸಿಸ್ಥಿತಂ
72 ಹಗಾಪಹಾಪಗ| ಗಾಯೂ ಪಾಚೈಗನುರೊಷ್ಟ ಪಶ್ಚಿಮಂ ಕಕ್ಕೆಬೆಮನಹಲ್ಯಾಶ್ಚ ದಿಶ
73 ನಶ್ರಿತಮುತರಾಂ ॥ ವಿಖ್ಯಾತಿಮಾಸಿತಮೇದಪ್ರತಿಮಾಸೋನಕಂ ಪರಂ ವಿಭೋಯಂ ಚೇ
74 ನಹಾದಾನಂ ಭೂದಾನಸ್ಯೈನಕಲ್ಪತಾಗಾಮಂ ಶಿರಿಮರಾಭಿಖ್ಯಾ ಸರ್ವಸಸ್ಯಸ ॥
75 ಮನ್ವಿತಂ॥ ಸರ್ವಮಾನ್ಯಂ ಚತುಸ್ಸೀಮಾಸಂಯುತಂ ಚ ಸಮಂತತಃ ।
ನಿಧಿ ನಿಕ್ಷೇಪ ಪಾ
76 ಷಾಣ ಶಿದ್ಧ ಸಾಧ್ಯ ಜಲಾನ್ವಿತೋ । ಅಕ್ಷಿಣ್ಯಾಗಾಮಿ ಸಂಯುಕ್ತಮೇಕಭೋಗ್ಯಂ ಸ ಭೂ
77 ರುಹಂ ಮಾಮೀ ಕೂಪತಟಾಕೈಶ್ಚ ಕಚ್ಛನಾಖಿ ಸಮನ್ವಿತಂ । ಪುತ್ರಪೌತ್ರಾದಿಭಿರ್ಭೋ
78 ಗ್ಯಂ ಕ್ರಮಾದಾಚಂದ್ರತಾರಕಂ । ದಾನಸ್ಯಾಧಮನಸ್ಯಾಪಿ ವಿಕ್ರಯಸ್ಯಾಪಿ ಚಾಚಿ
79 ತಂ । ಪರೀತಪ್ರಯತಸ್ನಿಗ್ಧೈ ಪುರೋಹಿತಪುರೋಗಮೈಃ ವಿವಿಧೈಶ್ರ್ಯೌತ ಪಥಿಕೈ
80 ರಧಿಕೈರ್ನಿರಾಂ। ಕೃಷ್ಣದೇವಮಹಾರಾಯೋ ಮಾನನಿಯೋ ಮನಸ್ವಿನಾಂ । ಸಹಿರಂ
81 ಣ್ಯ ಪಯೋಧಾರಾಪೂರ್ವಕಂ ದತ್ತವಾನ್ಮುದಾ । ತತಿದಮವನೀಮನೀಷಕವಿನೂ
82 ನಸ್ಯ ಭೂಮಿದಾನಸ್ಯಃ ॥ ಶ್ರೀ ಗೋಪಿನಾಥಭಟ್ಟೋಸೌ ಯಜಮಾನೋಯಶೋ
ನಿಧಿಃ ವಿಭಜ್ಯ
83 ಪಂಚಧಾಗ್ರಾಮಮಿಮಂ ಧರ್ಮವಿದಾಂ ಮರ ಪಾದೋನಾಂಶದ್ವಯಂ ಚಾತ್ರ ಚಾತ್ರ
ಸ್ಥಾಪಯಿತ್ವಾತ್ಮನಸ್ಸು

84 ಧೀಃ ಜ್ಯೇಷ್ಠಾಯ ಧರ್ಮಭಟ್ಟಾಯ ಸಪಾದೈಕಾಂ ಸಮಾದರಾತ್ ।
ಏಕಾ[ಂ]ಶಂ ಸ್ವಕನಿಷ್ಠಾಯ ಮಾಧವಾಯ ಮ

85 ನೀಷಿಣೇ । ಶ್ರೀಮತ್ತಿರುಮಲಾರ್ಯಾಯ ಚೈಕಾಂಶಂ ತತ್ಕನೀಯಸೇ ।
ಭ್ರಾತೃಭ್ಯಃ ಪ್ರವಿಭಜ್ಯೈವಂ ಪ್ರಾದಾಪ್ರಾಜ್ಞ

86 ತಮಾಗ್ರಣೀಃ ಶ್ರೀ ಗೋಪಿನಾಥಭಟ್ಟಶ್ಚ ಧರ್ಮಭಟ್ಟಸ್ತದಗ್ರಜಃ ಮನೀ
ಷೀ ಮಾಧವಾಭಿಖ್ಯೋ

87 ಧೀಮಾಂಸ್ತಿರುಮಲಾಹ್ವಯಃ ಚತ್ವಾರೋಬ್ರಾತರಶ್ಚೈತೇ ಯಜಮಾನಾ
ಯಶಸ್ವಿನಃ । ಬ್ರಹ್ಮೋತ್ತರಮಿಮಂ

88 ಗ್ರಾಮಂ ಕರ್ತುಕಾಮಾಮಹಾಧಿಯಃ । ಗ್ರಾಮೇಸ್ಮಿನ್ನೇಕಖಾರೀಕ
ಕೃಷ್ಣ ಜಾಂಗಲ ಮೇದಿನೀಂ ನವೀನ

89 ವಾಪೀ ಸಹಿತ ತಟಾರಾಮಸ್ಥಲಂ ವಿನಾ । ವಿಧಾಯ ವಿಂಶತ್ಯಧಿಕ
ಶತವೃತ್ತೀ ದ್ವಿಜೋತ್ತಮಾಃ॥

90 ವ(?) ಗೃಹ್ಯಪೂರ್ವಕ್ಲಪ್ತಾಂಶ ಪ್ರಕಾರೇಣ ಮಹಸ್ವಿನಃ । ವೃತ್ತೀರ್ದ್ದಾತಂ
ವಿಶೇಷಜ್ಞಾ ವಿದುಷಾಮಗ್ರಯಾಯಿ

91 ನಃ । ಅನ್ಯಾವಿಂಶತಿವೃತ್ತೀಶ್ಚ ವಿಪ್ರೇಭ್ಯ ಪ್ರಾದದುರ್ಮುದಾ ವೃತ್ತಿಮಂತೋ
ವಲಿಖ್ಯಂತೇ ವಿಪ್ರಾವೇದಾಂತ

92 ಪಾರಗಾಃ । ಶ್ರೀ ಚಕ್ರಪಾಣಿಭಟ್ಟಸ್ಯ ಸೂನುಶ್ಯಾಂಡಿಲ್ಯ ಗೋತ್ರಜಃ ।
ಪಂಚವೃತ್ತಿರವಾಪ್ನೋತಿ ರಾಮಾಭ

93 ಟ್ಟೋತ್ರ ಬಹ್ವೃಚಃ । ಸೂನುಃ ಪಂಡರಿಭಟ್ಟಸ್ಯ ವಿಶ್ವಾಮಿತ್ರಾನ್ವಯೋದ್ಭವಃ ।
ಸುಧೀರಾ । ಭನಭಟ್ಟೋತ್ರ ಬ

94 ಹ್ವೃಚಃ ಪಂಚವೃತ್ತಿಕಃ । ವಶಿಷ್ಟಗೋತ್ರಸಂಭೂತೊ ಭಾನುಭಟ್ಟಾತ್ಮ ಸಂಭವಃ
ಶ್ರೀ ನಾರಸಿಂಹ ಭ

95 ಟ್ಟಾಖ್ಯೋ ಬಹ್ವೃಚೋತ್ರ ದ್ವಿವೃತ್ತಿಮಾನ್ । ನಾರಾಯಣ ಸುಧೀಸೂನುಃ
ಪೂತಿಮಾಷಾನ್ವಯೋದ್ಭವಃ ಬಹ್ವೃ

96 ಚೋ ನಾರಸಿಂಹಾಸ್ಯ ಸುಧೀರತ್ರ ದ್ವಿವೃತ್ತಿಕಃ । ಶ್ರೀ ನಾರಾಯಣಭಟ್ಟಾಖ್ಯೋ
ನಾರಸಿಂಹಸುಧೀ

97 ಸುತಃ । ಆತ್ರೇಯಗೋತ್ರಜೋತ್ರೈಕಾಂ ವೃತ್ತಿಂ ದ್ರಾಹ್ಯಾಯಣೊಶ್ನುತೇ ।
ಗ್ರಾಮಸ್ಯಾಸ್ಯೈವ ಸೀಮಾನ್ಯಾದಿ

**ಮೂರನೆಯ ಹಲಗೆಯ ಮುಂಭಾಗ**

98 ಪ ಪ್ರಾಚ್ಯಾದಿಷುಕ್ರಮಾತ್ । ತತ್ರ ಚಿಂಹ್ನಸಮಾಯುಕ್ತೋ ಲಿಖ್ಯಂತೇ ದೇಶ

99 ಭಾಷಯಾ । ಶಿರಿವರಕ್ಕೆ ಪ್ರತಿನಾಮವಾದ ಕೃಷ್ಣರಾಯಪುರ ವೆಂಬ ಸರ್ವ

100 ಮಾನ್ಯದ ಅಗ್ರಹಾರದ ವಲಯಶಾಸನದ ವಲಯದ ವಿವರ । ಶಿರಿ

101 [ವುರ]ಕ್ಕೆ ಮೂಡಲು ಭೈರೋದೇವನಹಲ್ಲಿ ಮುಗುಲವಲ್ಲಿಯ ಮುಗ್ಗುಡ್ಡಿಯಲ್ಲಿ
ಬಿರಿದ ಕಾರಿಯ

102 ...............ಆ ಮುಂದೆ ಕರಿಯನಲಗುಂಡು ಆ ಮುಂದೆ ಮುಗುಲವ
103 ...............ಲ್ಲಲಗುಟ್ಟ. ತ್ರ ಆ ಮುಂದೆ ಗೌರಿಗೋಡಿಹಳ್ಳ
104 ...............ದಂ ಆ ಮುಂದೆ ಬಲ್ಲಾರಿ ಇಂದ ಜಂಗನೂರಿಗೆ ಹೊ
105 ...............ಮುಂದೆ ಜಾಗನೂರು ಬೂದಿಹಾಲದ ಮಗ್ಗುಡ್ಡೆಯ
106 ...............ಲು ಬೂದೀಹಾಲು ಅಮರಾಪುರದ ಮುಗುಡಿಯಲ್ಲು ಕ
107 .... .........ರ ಕಕ್ಕೆಬೋವನಹಲ್ಲಿಯ ಮಗ್ಗುಡ್ಡೆಯಲ್ಲು ಮರ
108 ........ಉ ಸಾಲುಕಲ್ಲು ಆ ಮುಂದೆ ನೆಲಬಂಡೆ ಅದಕ್ಕೆ ಟೆಂಕಲು ಕೊತ್ರಲದಲ್ಲು
ಬಿಳೀಕಲ್ಲು ಅದಕ್ಕೆ
109 ಪಡುವಲು ಕಕ್ಕೆಬೋವನಹಲ್ಲಿ ಮಾವಿನಾಯಕನಹಲ್ಲಿಯ ಮುಗ್ಗುಡ್ಡೆಯಲು ಕರಿಯ
ನೇಲಗುಂ
110 ಡು ಆ ಮುಂದೆ ಮಾವಿನಾಯಕನಹಲ್ಲಿ ಹದ್ದಿನಗುಂದಿನ ಮುಗ್ಗುಡ್ಡೆಯಲು
ಚಿಂಚಗಲ್ಲು ಅದಕ್ಕೆ
111 ಬಡಗಲು ಹದ್ದಿನಗುಂಡು ಸಂಗನಕಲ್ಲಿನ ಮುಗ್ಗುಡ್ಡೆಯಲ್ಲು ಬಲ್ಲಾರೇಮಾರ್ಗದ
ಇಂಮ್ಮಗಲ್ಲು ಕ
112 ಲಪೆಗುಟ್ಟರೆ ಮೂರು ಗುಡ್ಡದ ನಡುವಾಗಿ ಹಾಯುವ್ಯದಲ್ಲು ಹಾಲುವರ್ತ್ತಿ ಶೀಲುಗುಂ
ಡು ಆ ಮುಂದೆ ನಿಲು
113 ಗಲ್ಲು ಆ ಮುಂದೆ ಸಂಗನಕಲ್ಲು ಬಲ್ಲಾರಿಯ ಮುಗ್ಗುಡ್ಡೆಯಲ್ಲು ಬಿಳೀಕಡಿಗಲ್ಲು
ಶ್ರೀಧರಗಡ್ಡೆ
114 ಹೊಲಮೇರೆಯ ಹಲ್ಲದ್ದಡದಲ್ಲು ಕಲಪೆಪೊದೆ ಅದಕ್ಕೆ ಬಡಗಲ್ಲು ಆ ಹಲ್ಲದ್ದಡದಲ್ಲು
ಬಿಲೀ
115 ಬಂಡೆ ಅದಕ್ಕೆ ಮೂಡಲು ಕರೀಮೊಟ್ಟೆಯ ಹಾಲುಗುಡಿ ಆ ಮುಂದೆ ಕೆರೆ ಮಧ್ಯವಾಗಿ
ದರ್ಮೆ
116 ತದ ಅರ್ಧಬಾವಿ ಅದಕ್ಕೆ ಈಶಾನ್ಯವಾರೆಯಾಗಿ ನೆಲಬಂಡೆ ಕೆರೆಕೋಡಿಯ ಉಪ್ಪಿ
117 ನಮೂಳೆ ಭೈರೋದೇವನಹಲ್ಲಿ ದಾರಿ ಕಪ್ಪೆಗಲ್ಲು ಭೈರೋದೇವನಹಲಿಯ
ಮುಗುಡ್ಡೆಯಲ್ಲು
118 ಅದಕ್ಕೆ ಟೆಂಕಲು ಬಿಲೀಗುಂಡು ಅದಕ್ಕೆ ಮೂಡಲ್ಲು ಕರೀಗುಂಡುಗಳು|| ಕೃಷ್ಣದೇವ
ಮಹಾ
119 ರಾಯ ಶಾಸನಾನ್ಮಲ್ಲಣಾತ್ಮಜಃ ತ್ವಷ್ಟಾ ಶ್ರೀ ವೀರಣಾಚಾರ್ಯ ಲಿಖಿತ್ವಾನ್ಮು
ಶಾಸನಂ ।
120 ಧಾನಪಾಲನಯೋರ್ಮಧ್ಯೇ ದಾನಾಚ್ಛ್ರೇಯೋನ.ಪಾಲನಂ ದಾನಾತ್ಸರ್ಗಮ
ವಾಪ್ನೋತಿ ಫಾಲ

121 ನಾದಚ್ಯುತಂ ಪದಂ ಸ್ವದತ್ತಾ ದ್ವಿಗುಣಂ ಪುಣ್ಯಂ ಪರದತ್ತಾನುಪಾಲನಂ
ಪರದತ್ತಾಪಹಾ[ರೆ]ಣ

122 ಸ್ವದತ್ತಂ ನಿಷ್ಫಲಂ ಭವೇತ್ । ಸ್ವದತ್ತಾಂ ಪರದತ್ತಾಂ ವಾ ಯೋ ಹರೇತಿ
ವಸುಂಧರಾಂ ಷಷ್ಟಿ

123 ವರ್ಷಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿ ॥ ಏಕೈವ ಭಗಿನೀ ಲೋಕೇ
ಸರ್ವೇಷಾಮೇ

124 ವ ಭೂಭುಜಾಂ ನ ಭೋಜ್ಯಾ ನ ಕರಗ್ರಾಹ್ಯಾ ವಿಪ್ರದತ್ತಾ ವಸುಂಧರಾಂ ॥
ಸಾಮಾನ್ಯೋಯಂ

125 ಧರ್ಮಸೇತುಂ ನೃಪಾಣಾಂ ಕಾಲೇ ಕಾಲೇ ಪಾಲನಿಯೋ ಭವದ್ಭಿಃ ಸರ್ವಾನೇತಾನ್

126 ಭಾವಿನಃ ಪಾರ್ಥಿವೇಂದ್ರಾನ್ ಭೂಯೋ ಭೂಯೋ ಯಾಚತೇ

ರಾಮಚಂದ್ರಃ ಶ್ರೀ ಶ್ರೀ ಶ್ರೀ

ಶ್ರೀ ವಿರುಪಕ್ಷ*

---

*ಇದು ಕನ್ನಡ ಅಕ್ಷರದಲ್ಲಿದೆ,

ಭಾರತೀಯ ಗ್ರಂಥಗಳಲ್ಲಿ ಲೋಹವನ್ನು ಬರವಣಿಗೆಯ ಸಾಧನವಾಗಿ ಉಪಯೋಗಿಸಿದ್ದ ನಿದರ್ಶನಗಳಿವೆ. ಅದಲ್ಲದೆ ಹೇರಳವಾದ ಶಾಸನಗಳು ಲೋಹದ ಮೇಲೆ ಕೆತ್ತಲ್ಪಟ್ಟಿವೆ. ತಕ್ಷಶಿಲೆಯ ಸುತ್ತಮುತ್ತಲಲ್ಲಿನ ಕೆಲವು ಸ್ತೂಪಗಳಲ್ಲಿ ಚಿನ್ನ ಮತ್ತು ಬೆಳ್ಳಿಯ ಪಟ್ಟಿಗಳನ್ನು ಬರವಣಿಗೆಗಾಗಿ ಬಳಸಲಾಗಿದೆ. ಲೋಹಶಾಸನಗಳಲ್ಲಿ ಅತಿಹೆಚ್ಚಾಗಿ ಕಂಡುಬರುವುದು ತಾಮ್ರಶಾಸನಗಳು. ಈ ತಾಮ್ರಶಾಸನಗಳು ಬುದ್ಧನ ಕಾಲದಿಂದಲೂ ಬಳಕೆಯಲ್ಲಿದ್ದುವೆಂದು ಚೀನೀಯಾತ್ರಿಕ ಫಾಹಿಯಾನ್ ಸೂಚಿಸಿದ್ದಾನೆ. ಮೌರ್ಯರ ಕಾಲದಲ್ಲಿ ರಾಜಾಜ್ಞೆಯನ್ನು ತಾಮ್ರದ ಮೇಲೆ ಕೆತ್ತುತ್ತಿದ್ದರೆಂದು ತಿಳಿದುಬರುತ್ತದೆ. ಸರ್ಕಾರಿ ವಿಷಯಗಳಿಗೆ, ತಕ್ಕಂತೆ ಲೋಹವನ್ನು ಕತ್ತರಿಸಿ, ಆದರ ಮೇಲೆ ಬರವಣಿಗೆಯನ್ನು ಕೆತ್ತುತ್ತಿದ್ದರು.

**—ಎಚ್. ಎಲ್. ಎನ್. ಭಾರತಿ***

---

* 'ಪ್ರಾಚೀನ ಹಸ್ತಪ್ರತಿಗಳು,' ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ; ಪು. 5

ಜಿ. ಟಿ. ನಾರಾಯಣರಾವ್

# ಭಾಷಾಂತರ ಮತ್ತು ಶಾಸ್ತ್ರ ಸಾಹಿತ್ಯ

## ಪೀಠಿಕೆ

ಯಾವುದೇ ಭಾಷೆಯಲ್ಲಿ ನಿರೂಪಿತವಾಗಿರುವ ವಿಷಯವನ್ನು ಇನ್ನೊಂದು ಭಾಷೆಯಲ್ಲಿ ಯಥಾವತ್ತಾಗಿ ನಿರೂಪಿಸುವ ಕ್ರಿಯೆಗೆ ಭಾಷಾಂತರ ಎಂದು ಹೆಸರು. ಮೊದಲನೆಯ ಭಾಷೆಯನ್ನು ಮೂಲಭಾಷೆ ಎಂದೂ ಎರಡನೆಯದನ್ನು ಉದ್ದಿಷ್ಟಭಾಷೆ ಎಂದೂ ಕರೆಯುತ್ತೇವೆ. ಉದಾಹರಣೆಗೆ ಸಂಸ್ಕೃತದಲ್ಲಿ ಇರುವ ವಾಲ್ಮೀಕಿ ರಾಮಾಯಣವನ್ನು ತದ್ವತ್ತಾಗಿ ಕನ್ನಡಕ್ಕೆ ಇಳಿಸುವ ಕ್ರಿಯೆ ಭಾಷಾಂತರ ಎನ್ನಿಸಿಕೊಳ್ಳುವುದು. ಇಲ್ಲಿ ಸಂಸ್ಕೃತ ಮೂಲಭಾಷೆ, ಕನ್ನಡ ಉದ್ದಿಷ್ಟಭಾಷೆ. ಗಣಿತದ ಪರಿಭಾಷೆಯಲ್ಲಿ ಹೇಳುವುದಾದರೆ ಮೂಲಭಾಷೆ ಒಂದು ಸಮತಲವನ್ನೂ ಉದ್ದಿಷ್ಟ ಭಾಷೆ ಇನ್ನೊಂದು ಸಮತಲವನ್ನೂ ಸೂಚಿಸುತ್ತವೆ. ಮೊದಲಿನ ಸಮತಲದಲ್ಲಿರುವ ಯಾವುದೇ ಆಕೃತಿಯನ್ನು ಎರಡನೆಯ ಸಮತಲದ ಮೇಲಿನ ಸಂವಾದಿ ಆಕೃತಿಯಾಗಿ ವಿಕ್ಷೇಪಿಸುವ (project) ಕ್ರಿಯೆಯೇ ಭಾಷಾಂತರ.

ಶಾಸ್ತ್ರಸಾಹಿತ್ಯ ಎನ್ನುವ ಸಮಾಸಪದಕ್ಕೆ ಬಹು ವ್ಯಾಪಕಾರ್ಥ ಉಂಟು. ಪ್ರಸಕ್ತ ಪ್ರಬಂಧದಲ್ಲಿ ಇದನ್ನು ನಾನು ಆಧುನಿಕ ವಿಜ್ಞಾನಸಾಹಿತ್ಯಕ್ಕೆ ಮಾತ್ರ ಸೀಮಿತಗೊಳಿಸಬಯಸುತ್ತೇನೆ. ಅಂದರೆ ಆಧುನಿಕ ವಿಜ್ಞಾನವಿಷಯಗಳಾದ ಗಣಿತ ಭೌತ ರಸಾಯನ ಜೀವ ವೈದ್ಯ ಶಿಲ್ಪ ಇವೇ ಮುಂತಾದವು ಈ ಪರಿಧಿ ಒಳಗೆ ಸೇರುವುವು; ಆಯುರ್ವೇದ ಯುನಾನಿ ಮನೋವಿಜ್ಞಾನ ತತ್ತ್ವಶಾಸ್ತ್ರ ಭಾಷಾವಿಜ್ಞಾನ ಅರ್ಥಶಾಸ್ತ್ರ ಮುಂತಾದವು ಹೊರಗೆ ಉಳಿಯುವುವು.

## ವಿಜ್ಞಾನ ಅಂದರೇನು ?

ಪ್ರಪಂಚದ ವಿವಿಧ ವಿದ್ಯಮಾನಗಳಿಗೆ ಕಾರ್ಯ-ಕಾರಣ ಸಂಬಂಧಗಳನ್ನು ಅರಸುವ ಕ್ರಿಯೆಯಲ್ಲಿ ವಿಜ್ಞಾನ ಮೈದಳೆಯುತ್ತದೆ. ಮಳೆ ಬರುವುದು ಏಕೆ, ವಿದ್ಯುತ್ಪ್ರವಾಹ ಅಂದರೇನು, ಸೌರವ್ಯೂಹದ ಆಲೇಖ್ಯ ಹೇಗಿದೆ, ಜೀವಿಗಳಲ್ಲಿ ವಂಶಾಭಿವೃದ್ಧಿ ಹೇಗೆ ನಡೆಯುತ್ತದೆ—ಇವೇ ಮೊದಲಾದ ಪ್ರಶ್ನೆಗಳಿಗೆ ದೊರೆತಿರುವ ಉತ್ತರಗಳು ಕಾರ್ಯ–ಕಾರಣಾನ್ವೇಷಕ ವಿಜ್ಞಾನಕ್ಕೆ ಕೆಲವು ಉದಾಹರಣೆಗಳು. ವಿಜ್ಞಾನದ ಮುನ್ನಡೆಯಲ್ಲಿ ವ್ಯವಸ್ಥಿತ ವೀಕ್ಷಣೆ, ದತ್ತಾಂಶ ಸಂಗ್ರಹ, ಪ್ರಯೋಗ, ಊಹಾಮಂಡನೆ, ಪ್ರಯೋಗದಿಂದ ಇದರ ಸ್ಥಿರೀಕರಣ ಮತ್ತು ಕೊನೆಯಲ್ಲಿ ಸಿದ್ಧಾಂತಮಂಡನೆ ಎಂಬ ಕೆಲವು ಸ್ಪಷ್ಟ ಸೋಪಾನಗಳನ್ನು ಗುರುತಿಸಬಹುದು. ಹೀಗೆ, ವಿಶ್ವ ಒಡ್ಡುವ ಉದ್ದೀಪನೆಗೆ (stimulus) ನಮ್ಮ ಮನಸ್ಸಿನ ಅನುಕ್ರಿಯೆಯ (response)

ಒಂದು ಪ್ರಕಾರ ವಿಜ್ಞಾನ ಆಗುತ್ತದೆ. ಇದೇ ಅನುಕ್ರಿಯೆಯು ಇತರ ಪ್ರಕಾರಗಳೆಂದರೆ ಕಾವ್ಯ, ನೃತ್ಯ, ಸಂಗೀತ, ಚಿತ್ರ, ಮಾನವಿಕಗಳು ಇತ್ಯಾದಿ.

**ವಿಜ್ಞಾನದ ಭಾಷೆ**

ಇಂಥ ಒಂದೊಂದು ಅನುಕ್ರಿಯೆಯೂ ಅಭಿವ್ಯಕ್ತಗೊಳ್ಳುವುದು ಆಯಾ ಅನುಭವಕ್ಕೆ ವಿಶಿಷ್ಟವಾದ ಒಂದು ನಿರೂಪಣ ಮಾಧ್ಯಮದ ಮೂಲಕ. ಇದನ್ನು ವ್ಯಾಪಕವಾಗಿ ಭಾಷೆ ಎಂದು ಕರೆಯಬಹುದು. ಕಾವ್ಯದಲ್ಲಿ ಸಾಹಿತ್ಯ ವಿಶಿಷ್ಟವಾದ ಬಗೆಯಲ್ಲಿ ಏರಕಗೊಂಡಿದ್ದರೆ ಸಂಗೀತದಲ್ಲಿ ಸಾಹಿತ್ಯದ ಜೊತೆಗೆ ಅಥವಾ ಅಲಾಯಿದವಾಗಿ ಸುಮಧುರ ಸ್ವರ ಸಂಯೋಜನೆ ಬೆರೆತಿರುವುದು ; ನೃತ್ಯದ ಭಾಷೆ ಅಭಿನಯ, ಲಯಬದ್ಧ ಕುಣಿತ ಮುಂತಾದವು; ಚಿತ್ರದಲ್ಲಿ ಬಣ್ಣಗಳು ಮಾತಾಡುತ್ತವೆ; ಇತ್ಯಾದಿ. ಇದೇ ರೀತಿ ವಿಜ್ಞಾನಕ್ಕೂ ಸ್ಪಷ್ಟವಾಗಿ ಗುರುತಿಸಿ ಹೆಸರಿಸಬಲ್ಲಂಥ ಒಂದು ಭಾಷೆ ಉಂಟು. ಇದಕ್ಕೆ ವಿಜ್ಞಾನದ ಭಾಷೆ ಎಂದು ಹೆಸರು.

ಆಧುನಿಕ ವಿಜ್ಞಾನವನ್ನು ನಾವು ಕಲಿಯುವುದು, ಕಲಿಸುವುದು ಮತ್ತು ನಿರ್ವಹಿಸುವುದು ಇಂಗ್ಲಿಷ್ ಭಾಷೆಯ ಮೂಲಕ. ಐತಿಹಾಸಿಕ ಕಾರಣಗಳಿಂದಾಗಿ ಇಂದು ಇಂಗ್ಲಿಷಿನಲ್ಲಿ ವಿಜ್ಞಾನದ ಭಾಷೆಗೆ ಶಿಷ್ಟರೂಪ ಬಂದಿದೆ. ಈ ಭಾಷೆಯಲ್ಲಿ ಪ್ರಕಟವಾಗಿರುವ ವಿವಿಧ ವಿಜ್ಞಾನಗ್ರಂಥಗಳನ್ನು ಪರಿಶೀಲಿಸಿದರೆ ಅಲ್ಲಿ ವಿಜ್ಞಾನದ ಭಾಷೆಗೆ ಮೂರು ಸ್ಪಷ್ಟ ಬಾಹ್ಯ ಲಕ್ಷಣಗಳು ಇವೆಯೆಂದು ತಿಳಿಯುವುದು.

1 ವಿವರಣಾತ್ಮಕ, ಅಂದರೆ ವಿಷಯವನ್ನು ವಾಕ್ಯಗಳ ರೂಪದಲ್ಲಿ ಬರೆಯುವುದು.

2 ಪ್ರತೀಕಾತ್ಮಕ, ಅಂದರೆ $\pi$, $e$, $H_2O$, $c$ ಇವೇ ಮೊದಲಾದ ಶಿಷ್ಟ ಪ್ರತೀಕಗಳನ್ನೂ $+$, $-$, $\times$, $\div$ $\rightarrow$, $\wedge$ ಇವೇ ಮೊದಲಾದ ಶಿಷ್ಟ ಚಿಹ್ನೆಗಳನ್ನೂ sin, log, mod ಇವೇ ಮೊದಲಾದ ಶಿಷ್ಟ ಪರಿಕರ್ಮಗಳನ್ನೂ ಬಳಸಿಕೊಂಡು ಭಾವನೆಗಳನ್ನು ಸಂಕ್ಷೇಪವಾಗಿಯೂ ನಿಷ್ಕೃಷ್ಟವಾಗಿಯೂ ನಿರೂಪಿಸುವುದು.

3 ಚಿತ್ರಾತ್ಮಕ, ಅಂದರೆ ಆಲೇಖಗಳು, ರೇಖಾಕೃತಿಗಳು, ಭೂಪಟಗಳು, ಛಾಯಾಚಿತ್ರಗಳು ಮುಂತಾದವನ್ನು ಉಪಯೋಗಿಸಿಕೊಂಡು ವಿಷಯವನ್ನು ಪುಷ್ಟೀಕರಿಸುವುದು.

ಯಾವುದೇ ವಿಜ್ಞಾನ ಪುಸ್ತಕದಲ್ಲಿ ಈ ಮೂರು ಲಕ್ಷಣಗಳೂ ಪರಸ್ಪರ ಪೂರಕ ಮತ್ತು ಪೋಷಕವಾಗಿ ಮೇಳೈಸಿಕೊಂಡಿರುವುವು.

ಸ್ವಲ್ಪ ಆಳಕ್ಕೆ ಇಳಿದರೆ ಇತರ ಕೆಲವು ಲಕ್ಷಣಗಳನ್ನು ಕೂಡ ಗುರುತಿಸಬಹುದು. ಅವು ಸ್ಥೂಲವಾಗಿ ಹೀಗಿವೆ :

1 ಪಾರಿಭಾಷಿಕ ಪದಗಳು ಮತ್ತು ಪದಪುಂಜಗಳು. ಇವು ವಿಶಿಷ್ಟವಾದ ಭೌತ ಪರಿಮಾಣಗಳನ್ನು ಯಾ ವಿದ್ಯಮಾನಗಳನ್ನು ಯಾ ಕಾಲ್ಪನಿಕ ಅಭಿಗ್ರಹೀತಗಳನ್ನು (assumptions) ಪ್ರತಿನಿಧಿಸುತ್ತವೆ. ಉದಾಹರಣೆಗೆ force, artery, chromosome, rotation, radiation ಇತ್ಯಾದಿ. ಇವುಗಳಿಗೆ ವಿಜ್ಞಾನದ ಭಾಷೆಯಲ್ಲಿ ಅಂಕಿತನಾಮಗಳ ಅಂತಸ್ತು ಉಂಟು. force ಇರಬೇಕಾದಲ್ಲಿ power ಬಂದರೆ light ಕಾಣಬೇಕಾದಲ್ಲಿ illumination ಇದ್ದರೆ ಅನರ್ಥವಾದೀತು.

2 ಪ್ರತೀಕಗಳು, ಚಿಹ್ನೆಗಳು ಮತ್ತು ಪರಿಕರ್ಮಿಗಳು. ಇವು ಇನ್ನೂ ಒಂದು ಪಂಕ್ತಿ ಮೇಲೇರಿ ಹೆಚ್ಚಿನ ಭಾವನೆಗಳನ್ನು ಒಳಗೊಂಡಿರುವ ಸೂಚಕಗಳಾಗಿವೆ. $1, \pi, e, i, 0$ ಮೊದಲಾದ ಪ್ರತೀಕಗಳ ಮೇಲೆ sin. cos, sn, cn ಮೊದಲಾದ ಪರಿಕರ್ಮಿಗಳ ಮೇಲೆ ಧೀರ್ಘ ವ್ಯಾಖ್ಯಾನಗಳನ್ನೇ ಬರೆಯಬಹುದು, ಪ್ರತೀಕಗಳ ವಿವಿಧ ಜೋಡಣೆಗಳ ಮೇಲೆ ಪರಿಕರ್ಮಿಗಳು ನಡೆಸುವ ಕ್ರಿಯೆಗಳನ್ನೂ ಅವುಗಳ ಫಲಿತಾಂಶಗಳನ್ನೂ ಸಂಬಂಧಿಸುವ "ಗಾರೆ" ಗಳೇ ಚಿಹ್ನೆಗಳು. ವಿಜ್ಞಾನದ ವಿವಿಧ ಪ್ರತೀಕಾತ್ಮಕ ಉಕ್ತಿಗಳು, ಸಮೀಕರಣಗಳು, ಸೂತ್ರಗಳು ಮುಂತಾದವು ಈ ತೆರನಾಗಿ ಮೈದಳೆಯುವುವು. ಇವೆಲ್ಲವೂ ಹಲವಾರು ಭಾವನೆಗಳ ಸಾರವನ್ನು ವಿಧಿ ನಿಯಮಾನುಸಾರ ತಾರ್ಕಿಕವಾಗಿ ಹಿಡಿದಿಡುತ್ತವೆ. ಶಿಕ್ಷಿತ ಬುದ್ಧಿ ಮಾತ್ರ ಈ ಭಾಷೆಯನ್ನು ಅರಿತೀತು ಅಷ್ಟೆ.

3 ಆಲೇಖಗಳು, ಚಿತ್ರಗಳು, ಭೂಪಟಗಳು ಮೊದಲಾದ ದೃಶ್ಯಸಹಾಯಕಗಳು. ಇವುಗಳ ರೂಪಣೆಯಲ್ಲಿಯೂ ನಿರ್ದಿಷ್ಟ ಉದ್ದೇಶ ಮತ್ತು ಬಿಗಿತನವನ್ನು ಕಾಣಬಹುದು.

ಸಾರಾಂಶವಿಷ್ಟು : ವಿಜ್ಞಾನ ತುಂಬ ಶಿಸ್ತಿನಿಂದ ನಿಷ್ಕೃಷ್ಟತೆಯಿಂದ ಮತ್ತು ಖಚಿತ ಕ್ರಿಯೋದ್ದೇಶದಿಂದ ತನ್ನ ಭಾಷೆಯನ್ನು ಬೆಳೆಸಿಕೊಂಡು ಬಂದಿದೆ.

**ವಿಜ್ಞಾನದ ಭಾಷೆಯ ವ್ಯಕ್ತಿತ್ವ**

ವಿಜ್ಞಾನದ ಚಟುವಟಿಕೆ, ಅಧ್ಯಯನ, ಮಾರ್ಗ, ಫಲಿತಾಂಶ ಎಲ್ಲವೂ ಪೂರ್ತಿ ವಸ್ತುನಿಷ್ಠವಾದವು. ಅಂದರೆ ಜಾತಿ, ಭಾಷೆ, ಜನಾಂಗ, ವೈಯಕ್ತಿಕ ಒಲವು ನಿಲವು ಮುಂತಾದ ಮನುಷ್ಯಕೃತ ದಿಗ್ಬಂಧಗಳಿಂದ ಇವು ಪ್ರಭಾವಿತವಾಗುವುದಿಲ್ಲ. ಹೀಗಾಗಿ ವಿಜ್ಞಾನದ ಭಾಷೆ ಕೂಡ ವಸ್ತುನಿಷ್ಠ ಆಗಿರುವುದು ನಿರೀಕ್ಷಿತವೇ. ಇದರಲ್ಲಿ ನಾವು ವಿಶೇಷವಾದ ಅಂತಾರಾಷ್ಟ್ರೀಯ ಏಕತ್ವವನ್ನು ಕಾಣಬಹುದು. ಉದಾಹರಣೆಗೆ $H_2O$ ಎಂಬ ಪ್ರತೀಕ ಸಮುಚ್ಚಯವನ್ನು ನೋಡಿದ ಯಾವನೇ ವಿಜ್ಞಾನಿ ಇದು ನೀರಿನ ಒಂದು ಅಣುವನ್ನು ಸೂಚಿಸುವುದೆಂದು ಆತನ ಭಾಷೆಯಲ್ಲಿ ಅರ್ಥಮಾಡಿಕೊಳ್ಳುವನು. $E=mc^2$ ಎಂಬ ಸಮೀಕರಣ ಶಕ್ತಿ ದ್ರವ್ಯರಾಶಿ ನಡುವಿನ ಸಂಬಂಧವನ್ನು ನಿರೂಪಿಸುತ್ತದೆ ಎಂಬುದಾಗಿ ಸಕಲ ಜನಾಂಗಗಳ ವಿಜ್ಞಾನಿಗಳೂ ತಿಳಿಯುತ್ತಾರೆ. ಇಲ್ಲಿ ಭಾಷಾಂತರದ ಅಗತ್ಯವಿಲ್ಲ ; ಲಿಪ್ಯಂತರ (ಅಂದರೆ $H_2O$ವನ್ನು ಜ₂ಆ ಎಂಬುದಾಗಿ ಇಲ್ಲವೇ $E=mc^2$ ವನ್ನು ಶ=ದ್ರಾ$^2$ ಎಂಬುದಾಗಿ) ಕೂಡ ಮಾಡಬಾರದು. ವಿಜ್ಞಾನದ ಭಾಷೆಯಲ್ಲಿ, ವಿಶೇಷವಾಗಿ ಅದರ ಪ್ರತೀಕಾತ್ಮಕ ಭಾಷೆಯಲ್ಲಿ, ಅಂತರ್ಗತವಾಗಿರುವ ಈ ಸೌಲಭ್ಯಗಳಿಗೆ ನಾವು ತೆರಬೇಕಾದ ಶುಲ್ಕ ಅದರ ಬಿಗಿತನದಲ್ಲಿ ಅಡಕವಾಗಿದೆ. ಸಾಕಷ್ಟು ಶಿಕ್ಷಣ ಮತ್ತು ಪೂರ್ವಸಿದ್ಧತೆ ಇಲ್ಲದವನಿಗೆ ವಿಜ್ಞಾನದ ಯಾವುದೇ ನಿರೂಪಣೆಯೂ ಪದಗಳ ಕಂತೆಯಾಗಿಯೋ ಚಿತ್ರಲಿಪಿಗಳ ಸಂತೆಯಾಗಿಯೋ ವಕ್ರರೇಖೆಗಳ ಬೊಂತೆಯಾಗಿಯೋ ಕಂಡರೆ ಆಶ್ಚರ್ಯ ಏನೂ ಇಲ್ಲ.

**ವಿಜ್ಞಾನ ಸಾಹಿತ್ಯದ ಭಾಷಾಂತರ – ಐರೋಪ್ಯ ಭಾಷೆಗಳ ನಡುವೆ**

ಆಧುನಿಕ ವಿಜ್ಞಾನ ವಿಶೇಷವಾಗಿ ಪ್ರವರ್ಧಿಸಿರುವ ಪಾಶ್ಚಾತ್ಯ ರಾಷ್ಟ್ರಗಳ ಭಾಷೆಗಳಾದ ಲ್ಯಾಟಿನ್, ಇಂಗ್ಲಿಷ್, ಫ್ರೆಂಚ್, ಜರ್ಮನ್, ರಷ್ಯನ್ ಮೊದಲಾದವುಗಳಲ್ಲಿ ವಿಜ್ಞಾನ ಗ್ರಂಥ

ಗಳು ವಿಪುಲವಾಗಿ ಬೆಳೆದಿವೆ. ಐತಿಹಾಸಿಕವಾಗಿ ಈಚಿಗೆ ಈ ಕ್ಷೇತ್ರವನ್ನು ಪ್ರವೇಶಿಸಿ ಪಾಶ್ಚಾತ್ಯ ರಾಷ್ಟ್ರಗಳೊಡನೆ ಯಶಸ್ವಿಯಾಗಿ ಸ್ಪರ್ಧಿಸುತ್ತಿರುವ ಜಪಾನ್ ಹಾಗೂ ಚೀನಾ ದೇಶಗಳ ಭಾಷೆಗಳಲ್ಲಿಯೂ ವಿಜ್ಞಾನಗ್ರಂಥಗಳು ಅಧಿಕ ಸಂಖ್ಯೆಯಲ್ಲಿ ಪ್ರಕಟವಾಗಿವೆ ಎಂದು ಓದಿದ್ದೇನೆ. ಆರಂಭದಲ್ಲಿ ಈ ದೇಶಗಳು ಪಾಶ್ಚಾತ್ಯ ಭಾಷೆಗಳಿಂದ ತಮ್ಮ ಮಾತೃಭಾಷೆಗಳಿಗೆ ತರ್ಜುಮಿಸಿಕೊಂಡ ವಿಜ್ಞಾನಸಾಹಿತ್ಯದ ಮೇಲೆ ಬಹಳಷ್ಟು ಅಂತುಕೊಂಡಿದ್ದುವು ಎಂಬುದಾಗಿಯೂ ತಿಳಿದಿದ್ದೇನೆ. ಇಂಥ ಅನುವಾದದ ವೇಳೆ ಚೀನ ಜಪಾನ್ ದೇಶಗಳು ಅನುಸರಿಸಿದ ನೀತಿಯಾಗಲಿ ಪಡೆದ ಅನುಭವವಾಗಲಿ ನನಗೆ ಗೊತ್ತಿಲ್ಲ. ಆದರೆ ಐರೋಪ್ಯರಾಷ್ಟ್ರಗಳ ವಿವಿಧ ಭಾಷೆಗಳ ನಡುವೆ ಸಾಹಿತ್ಯದ ಸಮಸ್ತ ಪ್ರಕಾರಗಳ ಭಾಷಾಂತರಗಳನ್ನು ಕುರಿತು ಸಾಕಷ್ಟು ಶಾಸ್ತ್ರೀಯಾಧ್ಯಯನಗಳು ನಡೆದಿವೆ, ಆಕರ ಗ್ರಂಥಗಳೂ ಪ್ರೌಢ ಪ್ರಬಂಧಗಳೂ ಪ್ರಕಟವಾಗಿವೆ. ಇವುಗಳಲ್ಲಿ ವಿಜ್ಞಾನಸಾಹಿತ್ಯವನ್ನು ಕುರಿತಂತೆ ಇರುವ ಉಲ್ಲೇಖಗಳು ತೀರ ಕಡಿಮೆ. ಕಾರಣ, ಇಲ್ಲಿ ವಿಶೇಷ ಸಮಸ್ಯೆ ಆಗಲಿ ಮತಭೇದವಾಗಲಿ ಇಲ್ಲವೆಂಬ ತೀರ್ಮಾನಕ್ಕೆ ಎಲ್ಲರೂ ಬಂದಂತಿದೆ. ಆ ವಿದ್ವಾಂಸರು ಮಂಡಿಸುವ ವಾದದ ಸಾರಾಂಶ ಹೀಗಿದೆ :

ಐರೋಪ್ಯ ಜನ, ಅಂತೆಯೇ ಭಾಷೆಗಳು, ಸಾಂಸ್ಕೃತಿಕವಾಗಿ ಹೆಚ್ಚು ಕಡಿಮೆ ಒಂದೇ ಪರಂಪರೆಗೆ ಸೇರಿದವು. ಅಲ್ಲಿ ಕೊಡು-ಕೊಳು ಕ್ರಿಯೆಗಳು ನಿರಂತರವಾಗಿಯೂ ವ್ಯಾಪಕವಾಗಿಯೂ ನಡೆದುಕೊಂಡೇ ಬಂದಿವೆ. ವಿಜ್ಞಾನದ ಅಭಿವರ್ಧನೆಯಲ್ಲಿ ಈ ರಾಷ್ಟ್ರಗಳೆಲ್ಲವೂ (ಆದ್ದರಿಂದ ಭಾಷೆಗಳೆಲ್ಲವೂ) ಸರಿಸುಮಾರಾಗಿ ಒಂದೇ ಮಟ್ಟದಲ್ಲಿವೆ. ಹೀಗಾಗಿ ಪ್ರತಿಯೊಂದು ರಾಷ್ಟ್ರದಲ್ಲಿ ವಿಕಸಿಸಿರುವ ವಿಜ್ಞಾನಸಾಹಿತ್ಯದಲ್ಲಿಯೂ ಸಾಧಾರಣವಾಗಿ ಒಂದೇ ಬಗೆಯ ಬೆಳವಣಿಗೆಯನ್ನು ಗುರುತಿಸಬಹುದು. ಇದರಿಂದಾಗಿ ಯಾವುದೇ ಐರೋಪ್ಯ ಭಾಷೆಯಿಂದ ಇನ್ನೊಂದು ಐರೋಪ್ಯ ಭಾಷೆಗೆ ವಿಜ್ಞಾನಸಾಹಿತ್ಯದ ಭಾಷಾಂತರ ವಿಶೇಷ ಸಮಸ್ಯೆ ಏನನ್ನೂ ಎದುರೊಡ್ಡದ ಒಂದು ಸುಲಭಕ್ರಿಯೆ ಆಗುತ್ತದೆ. ಪರಿಪೂರ್ಣ ಭಾಷಾಂತರಕ್ಕೆ ನಿದರ್ಶನವಾಗಿ ವಿಜ್ಞಾನಸಾಹಿತ್ಯದ ಭಾಷಾಂತರವನ್ನು ಆ ವಿದ್ವಾಂಸರು ಹೆಸರಿಸುವುದುಂಟು. ಅಲ್ಲಿಗೆ, ಆ ಪರಂಪರೆಗೆ ಇದು ಸರಿ. ಆದರೆ ವರ್ತಮಾನಕಾಲದ ಕರ್ನಾಟಕದತ್ತ ದೃಷ್ಟಿ ಹಾಯಿಸಿದಾಗ ಎದುರಾಗುವ ಸನ್ನಿವೇಶ ಸಮಸ್ಯೆಗಳು ತೀರ ಬೇರೆ ಆದವು. ಅವು ಏನೆಂಬುದನ್ನು ಈಗ ನೋಡೋಣ.

## ಇಂಗ್ಲಿಷಿನಿಂದ ಕನ್ನಡಕ್ಕೆ ಭಾಷಾಂತರ

ನಾವು, ಅಂದರೆ ಕನ್ನಡಿಗರು, ಆಧುನಿಕ ವಿಜ್ಞಾನಕ್ಷೇತ್ರವನ್ನು ಪ್ರವೇಶಿಸುವುದು ಇಂಗ್ಲಿಷ್ ಭಾಷೆಯ ಮೂಲಕ, ನಮ್ಮ ತಾಯ್ನುಡಿಯಾದ ಕನ್ನಡದ ಮೂಲಕ ಅಲ್ಲ. ಕಾರಣ ಸ್ಪಷ್ಟವಾಗಿದೆ : ವಿಜ್ಞಾನಬೋಧನೆ ಚಿಂತನೆ ನಿರ್ಮಾಣ ಯಾವುದೂ ಕನ್ನಡದಲ್ಲಿ ಆಗುತ್ತಿಲ್ಲ, ಹಾಗಾಗಿ ಕನ್ನಡದಲ್ಲಿ ಮೂಲಭೂತ ವಿಜ್ಞಾನ ಸಾಹಿತ್ಯ ಬೆಳೆದಿಲ್ಲ. ಕನ್ನಡದ ಈ ಕೊರತೆಯನ್ನು ನೀಗಿಸಲು ನಮಗೆ ಸದ್ಯದಲ್ಲಿ ಸಾಧ್ಯವಿರುವ ಪ್ರಾಯೋಗಿಕ ಮಾರ್ಗ ಒಂದೇ : ಇಂಗ್ಲಿಷಿನಿಂದ ಕನ್ನಡಕ್ಕೆ ವಿಜ್ಞಾನಸಾಹಿತ್ಯದ ಭಾಷಾಂತರ. (ಇದರ ಆವಶ್ಯಕತೆ ಇದೆಯೇ ? ಇದು ವೃಥಾ ಶ್ರಮ ಅಲ್ಲವೇ ? ಜನತೆಯ ಪೈಕಿ ವಿಜ್ಞಾನ ಕಲಿತು ಆ ಹಾದಿಯಲ್ಲಿ ಮುಂದೆ

ಸಾಗುವ ಕೇವಲ ಅಲ್ಪಸಂಖ್ಯಾತರ ಉಪಯೋಗಕ್ಕಾಗಿ ಇಷ್ಟು ದೊಡ್ಡ ಕಾರ್ಯವನ್ನು ಕೈಗೊಳ್ಳಬೇಕೇ ? ಇಂಗ್ಲಿಷಿನಲ್ಲಿಯೇ ಕಲಿತು ವಿಕಸಿಸುವುದು ಅವರಿಗೂ ಹಿತಕರವಲ್ಲವೇ ? ಇವೇ ಮೊದಲಾದ ಪ್ರಾಮಾಣಿಕ ಪ್ರಶ್ನೆಗಳಿಗೆ ಅಥವಾ ಮೊಂಡುವಾದಗಳಿಗೆ ಸಮಜಾಯಿಷಿ ನೀಡಲು ಇಲ್ಲಿ ಎಡೆ ಇಲ್ಲ. ಆಸಕ್ತರು ಶ್ರೀ ಎ. ಆರ್. ಬದರೀನಾರಾಯಣ ಅಭಿನಂದನ ಗ್ರಂಥ "ಶಿಕ್ಷಣ ಸಂಸ್ಕೃತಿ" ಪುಟ 281–291ರಲ್ಲಿ ಪ್ರಕಟವಾಗಿರುವ "ಜನತೆಯಲ್ಲಿ ವಿಜ್ಞಾನ ಪ್ರಸಾರ" ಎಂಬ ಲೇಖನವನ್ನು ನೋಡಬಹುದು.)

ಪ್ರಸಕ್ತ ಹಿನ್ನೆಲೆಯಲ್ಲಿ ಇಂಗ್ಲಿಷ್ ಮೂಲಭಾಷೆಯೂ ಕನ್ನಡ ಉದ್ದಿಷ್ಟಭಾಷೆಯೂ ಆಗುತ್ತವೆ. ಈ ಸಂಬಂಧ ಯಾವುದೇ ಎರಡು ಐರೋಪ್ಯ ಭಾಷೆಗಳ ನಡುವಿನ ಸಂಬಂಧದಂತೆ ಅಲ್ಲವೇ ಎರಡು ಅಸಮಬಲರ ನಡುವಿನ ವಿಷಮ ಸಂಬಂಧವಾಗುತ್ತದೆ : ಕೊಡುವವನ (ಇಂಗ್ಲಿಷ್) ಕೈ ಯಾವಾಗಲೂ ಮೇಲೆ, ಕೊಳುವವನ (ಕನ್ನಡ) ಕೈ ಯಾವಾಗಲೂ "ಕೀಳೆ". ಇದರ ಕಾರಣಗಳು ಮುಖ್ಯವಾಗಿ ಎರಡು :

1 ಇಂಗ್ಲಿಷ್ ಮತ್ತು ಕನ್ನಡ ಸಾಂಸ್ಕೃತಿಕವಾಗಿ ಯಾವ ಸಂಬಂಧವೂ ಇರದ ಭಾಷೆಗಳು. ಉದಾಹರಣೆಗೆ "ಶಿವಮೊಗ್ಗೆಯ ಜನ ಉದಾರಿಗಳು, ಅತಿಥಿ ಸತ್ಕಾರಪ್ರಿಯರು, ವಿಶಾಲ ಮನಸ್ಕರು, ಬುದ್ಧಿ ಶ್ರೀಮಂತರು" ಎಂಬ ಸರಳ ಕನ್ನಡ ವಾಕ್ಯವನ್ನು ಇಂಗ್ಲಿಷಿನಲ್ಲಿ ಹೇಳಲು ಪ್ರಯತ್ನ ಮಾಡಿ ನೋಡಿ ; ಅಥವಾ "The kindest word in all the world is the unkind word unsaid" ಎಂಬ ಸುಲಭವಾಗಿ ಅರ್ಥವಾಗುವ ಇಂಗ್ಲಿಷ್ ವಾಕ್ಯವನ್ನು ಕನ್ನಡಕ್ಕೆ ತರ್ಜುಮಿಸಲು ಶ್ರಮಿಸಿ ನೋಡಿ, ಆಗ ತಿಳಿಯುತ್ತದೆ ಈ ಹೇಳಿಕೆಯ ಸತ್ಯ.

2 ಆಧುನಿಕ ವಿಜ್ಞಾನ ಮಾಧ್ಯಮವಾಗಿ ಕನ್ನಡ ಏನೇನೂ ಪಳಗಿಲ್ಲ. ಉದಾಹರಣೆಗೆ ಇಂದು ಸಾಮಾನ್ಯ ಪ್ರೌಢಶಾಲೆಯ ಇಂಗ್ಲಿಷ್‌ಮಾಧ್ಯಮ ವಿದ್ಯಾರ್ಥಿಗೂ ಪರಿಚಿತವಾಗಿರುವ ನ್ಯೂಟನ್ನನ ಚಲನೆಯ ತೃತೀಯ ನಿಯಮವನ್ನು ಪರಿಶೀಲಿಸೋಣ :

When two particles exert forces on each other these forces are equal in magnitude and opposite in sense and act along the line joining the particles.

ಇದರ ಕನ್ನಡಾನುವಾದ ಹೀಗಿದೆ :

ಎರಡು ಕಣಗಳು ಪ್ರತಿಯೊಂದೂ ಇನ್ನೊಂದರ ಮೇಲೆ ಬಲಗಳನ್ನು ಬೀರುವಾಗ ಆ ಬಲಗಳು ಪರಿಮಾಣದಲ್ಲಿ ಸಮವಾಗಿಯೂ ದಿಶೆಗಳಲ್ಲಿ ವಿರುದ್ಧವಾಗಿಯೂ ಇರುವುವು ; ಕಣಗಳನ್ನು ಜೋಡಿಸುವ ರೇಖೆಯ ನೇರ ಅವು ವರ್ತಿಸುವುವು.

ಈ ಹೇಳಿಕೆಯಲ್ಲಿ ಅಂತರ್ಗತವಾಗಿರುವ ಭೌತವಿಜ್ಞಾನದ ಪರಿಕಲ್ಪನೆ ತಿಳಿದವರಿಗೆ ಕೂಡ ಕನ್ನಡ ನಿರೂಪಣೆ "ಒಂದು ಥರಾ" ಅನ್ನಿಸುವುದು ಭಾಷಾಂತರದ ದೋಷವೂ ಅಲ್ಲ, ಅವರ ತಪ್ಪೂ ಅಲ್ಲ. ಈ ದಿಶೆಯಲ್ಲಿ ಕನ್ನಡ ಬೆಳೆದಿಲ್ಲವಾದ್ದರಿಂದ ಇಂಥ ಕೃತಕತೆ ಭಾಸವಾಗುತ್ತದೆ. ಪರಿಚಿತ ನೆಲೆಯಿಂದ ಭಿನ್ನವಾದದ್ದು, ಆರಂಭದಲ್ಲಂತೂ, ಕೃತಕವಾಗಿ ತೋರುವುದು ಮನುಷ್ಯ ಸ್ವಭಾವ.

ಆದ್ದರಿಂದ ಆಧುನಿಕ ವಿಜ್ಞಾನಸಾಹಿತ್ಯವನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ಭಾಷಾಂತರಿಸು

ವುದು ನಿಜಕ್ಕೂ ಉದಾಹರಣೆಗೆ, ಲಲಿತಸಾಹಿತ್ಯವನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ಭಾಷಾಂತರಿಸುವುದಕ್ಕಿಂತ ಹೆಚ್ಚು ಕಷ್ಟವಾದದ್ದು ಮತ್ತು ಅಧಿಕ ಪರಿಶ್ರಮವನ್ನು ಬೇಡುವಂತಹದು. ವರ್ತಮಾನ ಕಾಲದ ತನಕ ನಾವು ಈ ಸಮಸ್ಯೆಯನ್ನು ಹೇಗೆ ಎದುರಿಸಿಕೊಂಡು ಬಂದಿದ್ದೇವೆ, ಈ ಸಾಲಿನಲ್ಲಿ ಗಳಿಸಿದ ಅನುಭವ ಏನು ಎಂಬುದನ್ನು ಈಗ ನೋಡೋಣ.

## ವಿಜ್ಞಾನಸಾಹಿತ್ಯದ ವಿಭಾಗಗಳು

ಇಂಗ್ಲಿಷಿನಲ್ಲಿ ವಿಜ್ಞಾನಸಾಹಿತ್ಯವನ್ನು ಸ್ಥೂಲವಾಗಿ ನಾಲ್ಕು ವಿಭಾಗಗಳಾಗಿ ವಿಂಗಡಿಸಬಹುದು :

1 ಸಂಶೋಧನ ಪತ್ರಿಕೆಗಳು. ಸಂಶೋಧನೆ ಮತ್ತು ಪ್ರಯೋಗಗಳಿಂದ ಸ್ಥಿರೀಕೃತವಾದ ಫಲಿತಾಂಶ. ಸಿದ್ಧಾಂತ ಮುಂತಾದವು ಇವುಗಳಲ್ಲಿ ಪ್ರಕಟವಾಗುತ್ತವೆ.

2 ಆಕರ ಗ್ರಂಥಗಳು, ಬೇರೆ ಬೇರೆ ಸಂಶೋಧನಪತ್ರಿಕೆಗಳಲ್ಲಿ ಆಗಿಂದಾಗ ಪ್ರಕಟವಾದ ಫಲಿತಾಂಶಗಳನ್ನು ವಿಜ್ಞಾನದ ವಿವಿಧ ಪ್ರಕಾರಗಳ ರೀತ್ಯ ಜೋಡಿಸಿ ಒಂದೊಂದು ಪ್ರಕಾರಕ್ಕೂ ಪೂರ್ಣಕಾಯವನ್ನು ನೀಡಿ ಬರೆದ ಪುಸ್ತಕಗಳಿವು; ಯಾವುದೇ ನಿರ್ದಿಷ್ಟ ಪಠ್ಯಪಟ್ಟಿಯನ್ನು ಅನುಸರಿಸಿ ರಚಿತವಾದವಲ್ಲ.

3 ಪಠ್ಯಪುಸ್ತಕಗಳು. ಹೆಸರೇ ಸೂಚಿಸುವಂತೆ ಇವು ನಿರ್ದಿಷ್ಟಮಟ್ಟದ ಓದುಗರನ್ನು ಯಾ ನಿರ್ದಿಷ್ಟ ಪಠ್ಯಪಟ್ಟಿಯನ್ನು ಲಕ್ಷ್ಯದಲ್ಲಿ ಇರಿಸಿಕೊಂಡು ರೂಪಿತವಾದಂಥವು.

4 ಜನಪ್ರಿಯ ವಾಙ್ಮಯ. ತೀರ ಸಾಮಾನ್ಯ ವರ್ಗದ ಓದುಗರಿಗೆ ಕೂಡ ವಿಜ್ಞಾನದ ಪರಿಕಲ್ಪನೆಗಳನ್ನೂ ವಿಜ್ಞಾನಿಗಳ ಸಾಧನೆ ಸಿದ್ಧಿಗಳನ್ನೂ ಆತ್ಮೀಯವಾಗಿ ಅರುಹುವ ಮಾಧ್ಯಮವಿದು. ಪುಸ್ತಕಗಳು, ನಿಯತಕಾಲಿಕೆಗಳು, ಇತರ ಪತ್ರಿಕೆಗಳಲ್ಲಿ ಪ್ರಕಟವಾಗುವ ಲೇಖನಗಳು ಇವೇ ಮೊದಲಾದ ರೂಪಗಳಲ್ಲಿ ಈ ವಾಙ್ಮಯ ಜನತೆಯನ್ನು ತಲಪುತ್ತದೆ. ಹೀಗಾಗಿ ಜೀವಂತ ವಿಜ್ಞಾನದಲ್ಲಿ ಜನ ನೇರವಾಗಿ ಭಾಗಿಗಳಾಗುವುದು ಸಾಧ್ಯವಾಗುತ್ತದೆ.

ಸಂಶೋಧನ ಪತ್ರಿಕೆಗಳ ಭಾಷಾಂತರ ಕನ್ನಡಕ್ಕೆ ಆಗಿರುವುದಿಲ್ಲ. ಆಗುವ ಆಗತ್ಯ ಸದ್ಯದಲ್ಲಂತೂ ಇಲ್ಲ. ಉಳಿದ ಮೂರೂ ವಿಭಾಗಗಳ ಸಾಹಿತ್ಯ ಅಲ್ಲಿ ಇಲ್ಲಿ ಎಂಬಂತೆ, ಯಾದೃಚ್ಛಿಕವಾಗಿ, ಅಂದರೆ ಯಾವುದೇ ಸ್ಪಷ್ಟ ಧೋರಣೆ ಅನುಸಾರ ಅಲ್ಲದೆ ಭಾಷಾಂತರಗೊಂಡಿರುವುದನ್ನು ಕಾಣಬಹುದು. ವಿಜ್ಞಾನವಸ್ತುವಿಗೆ ಸಂಬಂಧಪಡದ ಇತರ ಕಾರಣಗಳಿಂದಾಗಿ (ಉದಾಹರಣೆಗೆ ಗ್ರಂಥಸ್ವಾಮ್ಯ, ಭಾಷಾಂತರಕಾರರ ವಿಶಿಷ್ಟ ಆಸಕ್ತಿ, ಇತ್ಯಾದಿ) ಹಲವಾರು ಸಂದರ್ಭಗಳಲ್ಲಿ ಮಾಸಿ ಹೋದ ಪುಸ್ತಕಗಳು, ಅಂದರೆ ಇಂದು ಕೇವಲ ಐತಿಹಾಸಿಕ ಮಹತ್ತ್ವ ಮಾತ್ರ ಇರಬಹುದಾದಂಥವು, ಅನುವಾದಗೊಂಡಿರುವುದನ್ನು ನೋಡುತ್ತೇವೆ. ಈ ಪುಸ್ತಕಗಳ ಪಾಠಗಳನ್ನು ಮೂಲ ಇಂಗ್ಲಿಷಿನ ಸಂವಾದೀ ಪುಸ್ತಕಗಳ ಪಾಠಗಳೊಡನೆ ಹೋಲಿಸಿ ನೋಡುವಾಗ ವಿಜ್ಞಾನಸಾಹಿತ್ಯದ ಭಾಷಾಂತರ ಕನ್ನಡಕ್ಕೆ ಅಷ್ಟೇನೂ ವೈಜ್ಞಾನಿಕವಾಗಿ ನಡೆದಿಲ್ಲ ಎಂಬ ಅಂಶ ವೇದ್ಯವಾಗುವುದು. ಭಾಷಾಂತರದ ನಿಜವಾದ ಸಮಸ್ಯೆ ನಮ್ಮನ್ನು ತಿವಿಯುವುದು ಇಲ್ಲಿಯೇ. ಇದು ಏನು, ಇದಕ್ಕೆ ಪರಿಹಾರ ಹೇಗೆ ಎಂಬುದನ್ನು ಮುಂದಿನ ಆರು ಪರಿಚ್ಛೇದಗಳಲ್ಲಿ ವಿಶದೀಕರಿಸುತ್ತೇನೆ.

**ಭಾಷಾಂತರದ ಸಮಸ್ಯೆಗಳು, ಪರಿಹಾರಗಳು**

1 ಭಾಷಾಂತರಕಾರನಿಗೆ ವಿಷಯ ಪರಿಜ್ಞಾನ ಆಳವಾಗಿ ಇರತಕ್ಕದ್ದು. ಅಲ್ಲದೇ ಮೂಲ ಭಾಷೆಯಾದ ಇಂಗ್ಲಿಷಿನ "ಹಾವಭಾವಗಳನ್ನೂ ಬೆಡಗು ಬಿನ್ನಾಣಗಳನ್ನೂ" ಚೆನ್ನಾಗಿ ಅರ್ಥವಿಸಿ ಆಸ್ವಾದಿಸುವ ಸಾಮರ್ಥ್ಯ ಕೂಡ ಅವನಿಗೆ ಅಗತ್ಯ. ಇಂಥವ ಮಾತ್ರ ಮೂಲ ಲೇಖಕನ ಮನದಾಳಕ್ಕೆ ಇಳಿಯಬಲ್ಲ, ಪರಕಾಯಪ್ರವೇಶ ಮಾಡಬಲ್ಲ, ರಸಸುಖವನ್ನು ಅನುಭವಿಸಬಲ್ಲ. ನನ್ನ ವೃತ್ತಿಯ ವೇಳೆ ದೊರೆತ ಕೆಲವು ಆಣಿಮುತ್ತುಗಳನ್ನು ನೋಡಿ :

(i) The role played by the governor in this machine......
ಈ ಯಂತ್ರದಲ್ಲಿ ರಾಜ್ಯಪಾಲರು ಅಭಿನಯಿಸುವ ಪಾತ್ರ........

(ii) In celestial mechanics......
ಸ್ವರ್ಗೀಯ ಮೆಕಾನಿಕದಲ್ಲಿ........

(iii) Photogeology is the study of......
ದ್ಯುತಿ ಭೂ ವಿಜ್ಞಾನ........ಅಧ್ಯಯನ

(iv) While feeding instructions to the computer......
ಪರಿಗಣಕನಿಗೆ ಉಪದೇಶಗಳನ್ನು ಉಣ್ಣಿಸುವಾಗ........

ವಿಷಯ ಪರಿಜ್ಞಾನ ಇದ್ದವರಿಂದ ಖಂಡಿತ ಇಂಥ ಅಪಚಾರ ಘಟಿಸುತ್ತಿರಲಿಲ್ಲ.

2 ಭಾಷಾಂತರಕಾರನಿಗೆ ಕನ್ನಡ ಭಾಷೆಯ ಮೇಲೆ ಬಿಗಿಯಾದ ಹಿಡಿತ ಇರತಕ್ಕದ್ದು. ಕನ್ನಡ ಈತನ ಮಾತೃಭಾಷೆ ಅಥವಾ ಶಾಲೆ ಕಾಲೇಜುಗಳಲ್ಲಿ ಪ್ರಥಮ ಭಾಷೆ ಎಂಬ ಕಾರಣದಿಂದ ಇಂಥ ಪ್ರಭುತ್ವ ಇವನಿಗೆ ತಂತಾನೆ ಸಿದ್ಧಿಸುವುದಿಲ್ಲ. ಕನ್ನಡವನ್ನು ಇವನು ಶಾಸ್ತ್ರೀಯವಾಗಿ ಕಲಿಯಲೇಬೇಕು. ಅದರ "ಹಾವಭಾವಗಳನ್ನೂ ಬೆಡಗುಬಿನ್ನಾಣಗಳನ್ನೂ" ಇಂಗ್ಲಿಷಿನವುಗಳದ್ದಕ್ಕಿಂತ ಎಷ್ಟೋ ಪಟ್ಟು ಆಳ, ಅಗಲ ಮತ್ತು ಸವುರಾಗಿ ಗ್ರಹಿಸಬಲ್ಲ ಹಾಗೂ ಅವುಗಳಲ್ಲಿ ಪ್ರಯೋಗ ನಡೆಸಬಲ್ಲ ಸೃಷ್ಟಿಶೀಲ ಲೇಖಕ ಈತ ಆಗಿರಬೇಕು. ಇದಕ್ಕೆ ಒಂದು ಉದಾಹರಣೆ ನೋಡಿ :

The simple things that we learn first are the hardest to change later. Whether they are muscular actions or mental concepts they are used again and again until they become part of us. Our bodies or minds have learned to follow a pattern which can be broken only by a conscious effort.

ನಾವು ಮೊದಲಲ್ಲಿ ಕಲಿಯುವ ಅತ್ಯಂತ ಸರಳ ವಿಷಯಗಳೇ ಮುಂದೆ ಬದಲಾಯಿಸಲು ಅತ್ಯಂತ ಕಠಿನವಾದವು. ಸ್ನಾಯುಕ್ರಿಯೆಗಳೇ ಆಗಲಿ ಮಾನಸಿಕ ಪರಿಕಲ್ಪನೆಗಳೇ ಆಗಲಿ ಅವು ನಮ್ಮ ಅಂಶವೇ ಆಗುವ ವರೆಗೂ ಅವನ್ನು ಪುನಃ ಪುನಃ ಉಪಯೋಗಿಸುವೆವು. ನಮ್ಮ ದೇಹಗಳು ಅಥವಾ ಮನಸ್ಸುಗಳು ಒಂದು ಪ್ರರೂಪವನ್ನು ಅನುಸರಿಸಲು ಕಲಿಯುತ್ತವೆ. ಈ ಪ್ರರೂಪವನ್ನು ಪ್ರಜ್ಞಾಪೂರ್ವಕ ಪ್ರಯತ್ನದಿಂದ ಮಾತ್ರ ತುಂಡರಿಸಬಲ್ಲೆವು.

3 ಈ ಮೇಲಿನ ಎರಡು ಶರತ್ತುಗಳೂ ಮಾನ್ಯವಾದುವು ಎನ್ನೋಣ. ಇಂಥ ಒಬ್ಬ ವ್ಯಕ್ತಿ ಪ್ರತ್ಯಕ್ಷ ಭಾಷಾಂತರ ಕಾರ್ಯಕ್ಕೆ ಉದ್ಯುಕ್ತನಾಗುವಾಗ ಬೇರೆಯದೇ ಒಂದು ಸಮಸ್ಯೆ ಅವನಿಗೆ ಎದುರಾಗುತ್ತದೆ: ಪಾರಿಭಾಷಿಕ ಪದಗಳ ಗೊಂದಲ. ಇದು ಏನು ಎಂಬುದನ್ನು ಸ್ಪಷ್ಟ

ಪಡಿಸಲು ಕೆಲವು ಇಂಗ್ಲಿಷ್ ವಾಕ್ಯಗಳನ್ನೂ ಅವುಗಳ ಕನ್ನಡಾನುವಾದಗಳನ್ನೂ ಪರಿಶೀಲಿಸೋಣ

(i) Columbus *discovered* America.
ಕೊಲಂಬಸ್ ಅಮೆರಿಕವನ್ನು ಕಂಡುಹಿಡಿದ.

(ii) Thomas Alva Edison *invented* the phonograph.
ಥಾಮಸ್ ಆಲ್ವ ಎಡಿಸನ್ ಫೋನೊಗ್ರಾಫನ್ನು ಕಂಡುಹಿಡಿದ.

(iii) *Find* the value of $x$ from the following equation.
ಮುಂದಿನ ಸಮೀಕರಣದಿಂದ $x$ ನ ಬೆಲೆ ಕಂಡುಹಿಡಿಯಿರಿ.

(iv) *Calculate* the distance between Shimoga and Mysore.
ಶಿವಮೊಗ್ಗ ಮತ್ತು ಮೈಸೂರು ನಡುವಿನ ದೂರವನ್ನು ಕಂಡುಹಿಡಿಯಿರಿ.

ಈ "ಕಂಡುಹಿಡಿ" ಎನ್ನುವ ಪದ ಕಿವಿಗೆ ಗುಂಡುಬಡಿವುದರ ಜೊತೆಗೆ ಭಾಷಾಂತರಕಾರನಿಗೆ discover, invent, find, calculate ಪದಗಳು ಭಿನ್ನ ಕ್ರಿಯೆಗಳನ್ನು ಅಥವಾ ಭಿನ್ನ ಭೌತಸತ್ಯಗಳನ್ನು ಪ್ರತಿಬಿಂಬಿಸುತ್ತವೆ ಎಂಬ ಅಂಶ ಗೊತ್ತಿಲ್ಲ ಎನ್ನುವುದನ್ನು ಕೂಡ ಸ್ಪಷ್ಟಪಡಿಸುತ್ತದೆ; ಅಥವಾ ಒಂದು ವೇಳೆ ಹಾಗೆ ಗೊತ್ತಿದ್ದರೆ ಸಾಧಾರಣವಾಗಿ ಅವುಗಳಿಗೆ ಬೇರೆ ಬೇರೆ ಕನ್ನಡ ಪದಗಳ ಅವಶ್ಯಕತೆ ಇದೆ ಎಂಬ ಅರಿವು ಅವನಿಗೆ ಮೂಡಿಲ್ಲ ಎಂಬುದಂತೂ ಖರೆ. (ಅಂದಮಾತ್ರಕ್ಕೆ ಕನ್ನಡದ ಒಂದು ಪದ ಇಂಗ್ಲಿಷಿನ ಎರಡು ಪದಗಳಿಗೆ ಸಮಾನಾರ್ಥಕವಾಗಿ ಇರಲೇಬಾರದು ಎಂದೇನೂ ನಾನು ಸೂಚಿಸುತ್ತಿಲ್ಲ, : ಬಿತ್ತು = fell, sow ; ಹರಿ = tear, flow ಇತ್ಯಾದಿ ಅಪವಾದಗಳು ಸಾಕಷ್ಟು ಇವೆ.) ಪಾರಿಭಾಷಿಕ ಪದಗಳ ಗೊಂದಲವನ್ನು ಪರಿಹರಿಸಲು ವ್ಯಾಪಕವಾದ ಹಾಗೂ ವ್ಯವಸ್ಥಿತವಾದ ಏರ್ಪಾಡು ನಡೆಯದಿದ್ದರೆ (ಈ ತನಕ ನಡೆದಿಲ್ಲ) ಒಂದೇ ವಿಜ್ಞಾನ ಪ್ರಕಾರದ ವಿವಿಧ ಗ್ರಂಥಗಳು ಮತ್ತು ಒಂದೇ ಗ್ರಂಥದಲ್ಲಿನ ಬೇರೆ ಬೇರೆ ಪುಟಗಳು ಪಾರಿಭಾಷಿಕ ಪದಗಳ ಹೆಸರಿನಲ್ಲಿ ಹಲವಾರು ವಿಕೃತಿಗಳ ಸಂಗ್ರಹಾಲಯವಾಗುವುದರಲ್ಲಿ ಸಂದೇಹವಿಲ್ಲ. ಇಂಥಲ್ಲಿ ಮೊದಲ ಬಲಿ ಅರ್ಥ. ಭೌತವಿಜ್ಞಾನದ ಒಂದೇ ಅನುವಾದ ಗ್ರಂಥದಲ್ಲಿ force ಎಂಬ ಭೌತಪರಿಕಲ್ಪನೆಯನ್ನು ಬಲ, ಶಕ್ತಿ, ಸಾಮರ್ಥ್ಯ, ತ್ರಾಣ ಎಂಬ ನಾಲ್ಕು ಪದಗಳು ಪ್ರತಿನಿಧಿಸುವ ಉದಾಹರಣೆ ಉಂಟು. ತನ್ನ ಪುಸ್ತಕದ ಪರಿಧಿಯೊಳಗೆ ಸಾಂಗತ್ಯವನ್ನು ಕಾಪಾಡದಿದ್ದುದು ಆ ಲೇಖಕನ ಬೇಜವಾಬ್ದಾರಿಕೆ ನಿಜ. ಆದರೆ ಈ ಸಮಸ್ಯೆ ಇಡೀ ರಾಜ್ಯದ ಮಟ್ಟದಲ್ಲಿ ಪರಿಹಾರವನ್ನು ಬೇಡುತ್ತದೆ. ಇದು ಒದಗುವ ತನಕ, ಅಂದರೆ ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವಂಥ ಒಂದು ಸಾರ್ವತ್ರಿಕ ಅಧಿಕೃತ ವಿಜ್ಞಾನ ಪದಕೋಶ ಸಿದ್ಧವಾಗುವ ತನಕ, ಭಾಷಾಂತರಕಾರ್ಯವನ್ನು ತಡೆಹಿಡಿಯುವುದು ಅಸಾಧ್ಯ ಮತ್ತು ಅನಪೇಕ್ಷಣೀಯವಾದ್ದರಿಂದ ಸದ್ಯದಲ್ಲಿ ಭಾಷಾಂತರಕಾರರು ಅನುಸರಿಸಬಹುದಾದ ಪ್ರಾಯೋಗಿಕ ವಿಧಾನಗಳಿವು :

(i) ಮೂಲಗ್ರಂಥದಲ್ಲಿ ಬರುವ ಸಮಸ್ತ ಪಾರಿಭಾಷಿಕ ಪದಗಳನ್ನೂ ಪದಪುಂಜಗಳನ್ನೂ ಇಂಗ್ಲಿಷ್ ವರ್ಣಮಾಲೆಯ ಅನುಕ್ರಮದಲ್ಲಿ ಪಟ್ಟಿಮಾಡಿ ಅವುಗಳಿಗೆ ಅಲಾಯಿದ ಚೀಟಿಗಳನ್ನು ಬರೆಯಬೇಕು.

(ii) ಭಾರತ ಸರಕಾರ ಪ್ರಕಟಿಸಿರುವ ವಿವಿಧ ವಿಜ್ಞಾನ ಪಾರಿಭಾಷಿಕ ಕೋಶಗಳು ಕನ್ನಡ ವಿಶ್ವಕೋಶದ ಲಭ್ಯ ಸಂಪುಟಗಳು, ಕನ್ನಡದಲ್ಲಿ ಮುಖ್ಯವಾಗಿ ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರಕಟವಾಗಿರುವ ಪ್ರಸಿದ್ಧ ವಿಜ್ಞಾನ ಗ್ರಂಥಗಳು ಮೊದಲಾದವನ್ನು ಅವಲೋಕಿಸಿ ಸಮಾನ ಕನ್ನಡ ಪಾರಿಭಾಷಿಕ ಪದಗಳನ್ನು ಆಯ್ದು ಆಯಾ ಚೀಟಿಯ ಮೇಲೆ ಬರೆಯಬೇಕು.

(iii) ಪ್ರತಿಯೊಂದು ಇಂಗ್ಲಿಷ್ ಪಾರಿಭಾಷಿಕ ಪದಕ್ಕೂ ಸಮಾನವಾದ ಒಂದು ಕನ್ನಡ ಪಾರಿಭಾಷಿಕ ಪದವನ್ನು ಹುಡುಕಲೇಬೇಕು ಯಾ ಸೃಷ್ಟಿಸಲೇಬೇಕು ಎನ್ನುವ ಮತ ಸರ್ವತ್ರ ಸಲ್ಲದು. ಇಂಥ ದುಸ್ಸಾಹಸಕ್ಕೆ ಆರಂಭದಲ್ಲೇ ವೈಫಲ್ಯ ಕಟ್ಟಿಟ್ಟದ್ದು. ಭಾಷಾಂತರಕಾರನ ವಿದ್ವತ್ತು, ಅನುಭವ ಮೊದಲಾದವನ್ನು ಅವಲಂಬಿಸಿ ಒಂದೊಂದು ಹಂತದಲ್ಲಿಯೂ ಶಿಷ್ಟೀಕರಣ ಸಾಧ್ಯವಿದೆ. ಅಂತಾರಾಷ್ಟ್ರೀಯ ಚಲಾವಣೆ ಮತ್ತು ಮನ್ನಣೆ ಪಡೆದಿರುವ ಪಾರಿಭಾಷಿಕ ಪದಗಳು, ಪ್ರತೀಕಗಳು ಮುಂತಾದವನ್ನು ಹಾಗೆಯೇ ಇರಗೊಡಿಸಬೇಕು. ಅವನ್ನು ಕನ್ನಡಿಸುವುದು ವ್ಯರ್ಥ ಶ್ರಮ. ಉದಾಹರಣೆಗೆ thyroid ಎನ್ನುವ ಪದ ನಮ್ಮ ದೇಹದ ಒಂದು ಗ್ರಂಥಿಗೆ ಗ್ರೀಕ್ ಮೂಲದ ಈ ಹೆಸರನ್ನು ನೀಡಿದ ಪ್ರಾಚೀನ ದಿನಗಳಂದು ಗ್ರಂಥಿಯ ಆಕಾರ ಗುರಾಣಿಯಂತೆ ಇದೆ ಎಂದು ಭಾವಿಸಲಾಗಿತ್ತು. ಹೀಗಾಗಿ ಗ್ರೀಕ್‌ನಲ್ಲಿ ಗುರಾಣಿ ಎನ್ನುವ ಅರ್ಥವನ್ನು ಕೊಡುವ ಪದದಿಂದ ಈ ಗ್ರಂಥಿಗೆ thyroid ಎನ್ನುವ ಹೆಸರು ಬಂತು. ಅಂದಮಾತ್ರಕ್ಕೆ ಇಂದು ಕನ್ನಡದಲ್ಲಿ ಇದನ್ನು "ಗುರಾಣಿ ಗ್ರಂಥಿ" ಎಂದಾಗಲಿ "ಗುರಾಣಿಕ" ಎಂದಾಗಲಿ ಹೆಸರಿಸುವುದಾದರೆ ಅದು ಶಬ್ದರಚನೆಯ ದೃಷ್ಟಿಯಿಂದ ಅಹಿತಕರ, ಅರ್ಥದೃಷ್ಟಿಯಿಂದ ತಪ್ಪು ಮತ್ತು ಇತಿಹಾಸ ದೃಷ್ಟಿಯಿಂದ ಹಿನ್ನಡೆ ಆಗುತ್ತದೆ. ತೈರಾಯ್ಡ್ ಎಂಬುದಾಗಿ ಇದನ್ನು ಕನ್ನಡ ಲಿಪಿಯಲ್ಲಿ ಬರೆಯುವುದೇ ಸರಿಯಾದ ಹಾದಿ. ಈ ತೆರನಾದ ಚಿಂತನ ಮಂಥನಗಳಿಂದ ಪಾರಿಭಾಷಿಕ ಪದಗಳ ಸಮಗ್ರಯಾದಿ ಸಿದ್ಧವಾದ ಬಳಿಕ ಮಾತ್ರವೇ ಭಾಷಾಂತರಕಾರ ಕಾರ್ಯೋದ್ಯುಕ್ತನಾಗಬೇಕು. ಮುಂದಿನ ನೌಕಾಯಾನದ ವೇಳೆ ಇಂಥ ಒಂದು ಯಾದಿ ಅವನಿಗೆ ಅದೆಂಥ ಉಪಯುಕ್ತ ನಾವಿಕ ದಿಕ್ಸೂಚಿ ಆಗಬಲ್ಲುದು ಎಂಬುದು ಈ ರೀತಿಯಾಗಿ ದುಡಿದಿರುವ ಎಲ್ಲರಿಗೂ ತಿಳಿದಿದೆ.

4 ಹೀಗೆ ಸರ್ವಸಜ್ಜಿತನಾಗಿ ನಮ್ಮ ಪರಿಣತ ಇಂಗ್ಲಿಷ್ ಹೊಲದಿಂದ ಕನ್ನಡದ ನೆಲಕ್ಕೆ ಜಿಗಿಯಲು ಸಿದ್ಧನಾಗುತ್ತಾನೆ. ಅವನ ಜಿಗಿತ ಇಳಿತಗಳಲ್ಲಿ ಒಟ್ಟಾಗಿ ಐದು ಪ್ರತ್ಯೇಕ ಹಂತಗಳನ್ನು ಗುರುತಿಸಬಹುದು.

(i) ಇಂಗ್ಲಿಷಿನಲ್ಲಿ ವಾಕ್ಯವನ್ನೋ ವಾಕ್ಯಪುಂಜವನ್ನೋ ಓದಿ ಅರ್ಥಲೀನನಾಗುತ್ತಾನೆ. ಈ ಸ್ಥಿತಿಯಲ್ಲಿ ಅವನ ಅನುಭವ ಭಾಷಾತೀತವಾಗಿರುವುದು—ಉತ್ತಮ ಸಂಗೀತ ಕೇಳಿದಾಗ ಸಾಹಿತ್ಯಾತೀತವಾದ ನಾದರಸಾನಂದ ಒದಗುವಂತೆ. ಒಂದು ಉದಾಹರಣೆಯನ್ನು ನೋಡಿ :

A luminous star, of the same density as the earth and whose diameter should be 250 times larger than that of the sun, would not in consequence of its attraction allow any of its rays to arrive at us ; it is therefore possible that the largest luminous bodies in the universe may through this cause be invisible.

ಇಂಗ್ಲಿಷಿನಲ್ಲಿ ಭೌತವಿಜ್ಞಾನವನ್ನು ಅಭ್ಯಸಿಸಿದವರು ಈ ವಾಕ್ಯಪುಂಜವನ್ನು ಓದಿ

ಅರ್ಥವಿಸಿದಾಗ ಅವರ ಮನಸ್ಸಿನಲ್ಲಿ ಒಂದು ಚಿತ್ರ ಅಥವಾ ಭಾವಮಾದರಿ ಮೂಡುತ್ತದೆ. ಇದೊಂದು ವಿಧದ ತುರೀಯಾವಸ್ಥೆ. ಭಾಷಾತೀತವಾದ ಕಲಾತ್ಮಕ ಕ್ರಿಯೆಯಿದು. ಪರಕಾಯ ಪ್ರವೇಶವೆಂದರೆ ಇದೇ.

(ii) ಮುಂದಿನ ಹಂತದಲ್ಲಿ ಅವನು ತನ್ನ ಈ ಮಾನಸಿಕ ಮಾದರಿಗೆ ಅಥವಾ ಅನುಭವಕ್ಕೆ ಪ್ರಜ್ಞಾಪೂರ್ವಕವಾಗಿ ಕನ್ನಡದ ಉಡುಪನ್ನು ತೊಡಿಸಲು ತೊಡಗುತ್ತಾನೆ. ಈಗ ಅವನ ಚಿಂತನೆ ಕನ್ನಡ ಭಾಷೆಯಲ್ಲಿ ಸಾಗಿರುತ್ತದೆ. ವಾಸ್ತವಿಕ ಭಾಷಾಂತರ ಕಾರ್ಯ ಇಲ್ಲಿಗೇ ಮುಗಿದು ಹೋಗುವುದು. ಮಕರಂದ ಜೇನಾಗುವ ಈ ಕ್ರಿಯೆಯಲ್ಲಿ ಭಾವನೆ ಮತ್ತು ಭಾಷೆ ಎರಡೂ ಸಮಶ್ರುತಿಯಲ್ಲಿ ಸಮತಾಳದಲ್ಲಿ ಸ್ಪಂದಿಸುತ್ತಿರುವುವು.

(iii) ಹೀಗೆ ಮಾನಸಿಕವಾಗಿ ಕನ್ನಡದಲ್ಲಿ ಮೈದಳೆದ ಮಾದರಿಯನ್ನು ಅವನೀಗ ಪ್ರತ್ಯಕ್ಷ ಲಿಪಿಗೆ ಇಳಿಸಿ ಅದಕ್ಕೊಂದು ಆಕಾರವನ್ನು ಒದಗಿಸುತ್ತಾನೆ. ಇದೇನಿದ್ದರೂ ಯಾಂತ್ರಿಕ ಕ್ರಿಯೆ, ಸೃಷ್ಟ್ಯಾತ್ಮಕ ಕ್ರಿಯೆ ಅಲ್ಲ. ಆದರೆ ಹಾಗೆಂದು ಇದನ್ನು ಉಡಾಫೆಯಿಂದ ಕಾಣಲಾಗದು, "ಇದೇನು ಮಹಾ" ಎಂದು ಕಡೆಗಣಿಸಬಾರದು. ನೌಕಾಯಾನದಲ್ಲಿ ದಡ ತಲುಪುತ್ತಿದ್ದಂತೆ ಹೆಚ್ಚಿನ ಎಚ್ಚರ ವಹಿಸದಿದ್ದರೆ ಸರ್ವನಾಶ ಖಾತ್ರಿ. ಭಾಷಾಂತರಕಾರನ ಅಗೋಚರ ಅಂತರಂಗದ ಪ್ರಕಟಿತ ರೂಪ ಈ ಬರವಣಿಗೆ. ಇದು ಸರಿಯಾಗಿರದಿದ್ದರೆ ಅಥವಾ ಹೊಲಸಾಗಿದ್ದರೆ ಅವನ ವಿದ್ವತ್ತು ಸಾಧನೆ ಪ್ರತಿಭೆ ಎಲ್ಲವೂ ಹೆಜ್ಜೇನುಗೂಡಿನ ಜೇನಿರಿಗಳಂತೆ ಉಪಯೋಗ್ಯಾಲಭ್ಯವಾಗುವುವು. ಈ ಹಂತದಲ್ಲಿ ನಡೆವ ಪ್ರಕ್ರಿಯೆಗೆ ಉದಾಹರಣೆಯಾಗಿ ಒಂದನೆಯದರಲ್ಲಿ ನಮೂದಿಸಿರುವ ಇಂಗ್ಲಿಷ್ ಭಾಗದ ಕಚ್ಚಾ ಅನುವಾದವನ್ನು ಪರಿಶೀಲಿಸೋಣ :

ಭೂಮಿಯ ಸಾಂದ್ರತೆಯಷ್ಟು ಸಾಂದ್ರತೆ ಇರುವ ಮತ್ತು ಸೂರ್ಯನ ವ್ಯಾಸದ 250 ಪಟ್ಟು ದೊಡ್ಡದಾದ ವ್ಯಾಸವಿರುವ ಒಂದು ಹೊಳೆವ ನಕ್ಷತ್ರ ಅದರ ಆಕರ್ಷಣೆಯ ಪರಿಣಾಮವಾಗಿ ತನ್ನ ಯಾವುದೇ ಕಿರಣವನ್ನೂ ನಮ್ಮೆಡೆಗೆ ಸಾಗಬಿಡದು ; ಈ ಕಾರಣದಿಂದಾಗಿ ವಿಶ್ವದ ಹಿರಿಗಾತ್ರದ ಹೊಳೆವ ವಸ್ತುಗಳು ನಮಗೆ ಅಗೋಚರವಾಗಿಯೇ ಇರಬಹುದು.

(iv) ನಾಲ್ಕನೆಯ ಹಂತದಲ್ಲಿ ಅವನು ಕಚ್ಚಾ ಭಾಷಾಂತರ ಸಾಮಗ್ರಿಯನ್ನು ನಾನಾ ವಿಧದ ಪರೀಕ್ಷೆಗಳಿಗೆ ಒಳಪಡಿಸಿ—ಮುಖ್ಯವಾಗಿ ಮೂಲಪಾಠದೊಡನೆ ಸವಿವರ ತುಲನೆ, ಪಾರಿಭಾಷಿಕ ಪದಗಳ ಶಿಷ್ಟೀಕರಣ, ಪ್ರತೀಕ ಸಮೀಕರಣ ಮುಂತಾದವುಗಳ ತಪಾಸಣೆ—ಮತ್ತೆ ಅದಕ್ಕೆ ಮೆರುಗು ನೀಡಿ ಪೂರ್ಣ ಹಾಗೂ ಸುಂದರ ವಸ್ತುವಾಗಿ ಮಾರ್ಪಡಿಸುತ್ತಾನೆ. ಕಂಬಳಿಹುಳು ಈಗ ಪೂರ್ಣ ಪತಂಗವಾಗಿ ರೂಪಾಂತರಣಗೊಂಡಿರುವುದು. ಇದಕ್ಕೆ ನಿದರ್ಶನವಾಗಿ ಮೂರನೆಯ ಹಂತದಲ್ಲಿ ಬರೆದಿರುವ ಕಚ್ಚಾ ವಸ್ತುವಿನ ಪರಿಷ್ಕೃತ ರೂಪವನ್ನು ನೋಡಿ :

ಭೂಮಿಯಷ್ಟು ಸಾಂದ್ರತೆ ಮತ್ತು ಸೂರ್ಯನಿಗಿಂತ **250** ಮಡಿ ಹಿರಿದಾದ ವ್ಯಾಸವಿರುವ ಮಿನುಗುತಾರೆ ಸ್ವಂತಾಕರ್ಷಣೆಯ ಪರಿಣಾಮವಾಗಿ ತನ್ನ ಒಂದಿನಿತು ಕಿರಣಗಳನ್ನೂ ನಮ್ಮಲ್ಲಿಗೆ ಬರಗೊಡದು ; ವಿಶ್ವದ ಬಲು ದೊಡ್ಡ ಮಿನುಗು ವಸ್ತುಗಳು ಈ ಕಾರಣದಿಂದ ನಮಗೆ ಕಾಣದಿರುವ ಸಾಧ್ಯತೆ ಉಂಟು.

(v) ಕೊನೆಯ ಹಂತದಲ್ಲಿ ಅವನು ಪ್ರತಿಯೊಂದು ಪರಿಚ್ಛೇದವನ್ನೂ ಆಯಾ ಅಧ್ಯಾಯದ ಹಿನ್ನೆಲೆಯಲ್ಲಿ ಮತ್ತು ಪ್ರತಿಯೊಂದು ಅಧ್ಯಾಯವನ್ನೂ ಸಮಗ್ರ ಪುಸ್ತಕದ ಹಿನ್ನೆಲೆಯಲ್ಲಿ ತಾಳೆಮಾಡಿ ತೂಗಿನೋಡಿ ಒರೆಹಚ್ಚಿ ಪ್ರತ್ಯೇಕತನವನ್ನು ಗಟ್ಟಿಮಾಡಿಕೊಳ್ಳು

ಭಾವಶುದ್ಧಿ ಲಯಶುದ್ಧಿ ಎಲ್ಲವನ್ನೂ ಸಾಧಿಸಿ "ಇದೊ ಮುಗಿಸಿ ತಂದಿಹೆನ್" ಎನ್ನುವ ನಿವೇದನ ಭಾವದಿಂದ ಪ್ರಕಟಣೆಗೆ ಒಪ್ಪಿಸುತ್ತಾನೆ. ಮುದ್ರಣದ ವೇಳೆಯಲ್ಲೂ ಇದನ್ನು ಇನ್ನಷ್ಟು ಶುದ್ಧೀಕರಿಸುವುದು ಸಾಧ್ಯ ಎಂಬುದು ಅವನಿಗೆ ತಿಳಿದಿದೆ.

5 ಈ ಪ್ರಕಾರವಾಗಿ ಭಾಷಾಂತರಗೊಂಡು "ಮರುವುಟ್ಟುವಡೆದಂತೆ ಮೂಡಿದ" ಹಸ್ತಪ್ರತಿಯನ್ನು ಸ್ವತಂತ್ರ ತಪಾಸಣೆಗೆ ಅಥವಾ ವಿಮರ್ಶೆಗೆ ಒಳಪಡಿಸುವುದು ಅಗತ್ಯ. ಇದನ್ನು ಮಾಡುವವ ಸಹೃದಯ ಪರಿಣತ ಆಗಿರಬೇಕಾದದ್ದು ಅವಶ್ಯ ಷರತ್ತು. ಏಕೆಂದರೆ ಯಾವ ವಿಜ್ಞಾನ ಗ್ರಂಥವನ್ನಾದರೂ, ಅದು ಸ್ವತಂತ್ರ ರಚನೆಯೇ ಆಗಿರಲಿ, ಓದಿ ತೀರ್ಮಾನ ನೀಡಲು ಇಂಥವನಿಗೆ ಮಾತ್ರ ಸಾಮರ್ಥ್ಯ ಇರುವುದು. ಕನ್ನಡ ಭಾಷೆಯಲ್ಲಿ ಅದು ಇದ್ದ ಮಾತ್ರಕ್ಕೆ ಒಂದು ಪುಸ್ತಕ ಎಲ್ಲ ಕನ್ನಡಿಗರಿಗೂ ಅರ್ಥವಾಗಬೇಕು ಎಂದು ನಿರೀಕ್ಷಿಸುವುದು ಅವೈಜ್ಞಾನಿಕ. ತಪಾಸಣೆಕಾರನ ಪರೀಕ್ಷೆಯಲ್ಲಿ ಉತ್ತೀರ್ಣವಾಗಲು ಭಾಷಾಂತರದಲ್ಲಿ ಇರಬೇಕಾದ ಮುಖ್ಯ ಗುಣಗಳು ಐದು:

(i) ಭಾವಸಮಾನತೆ. ಕನ್ನಡಾನುವಾದ ಇಂಗ್ಲಿಷ್ ಮೂಲವನ್ನು ಓದಿದಾಗ ಆಗುವ ಅನುಭವವನ್ನೇ ಮೂಡಿಸಬೇಕು.

(ii) ಭಾವಸಂವಹನತೆ. ವಾಕ್ಯದಿಂದ ವಾಕ್ಯಕ್ಕೆ ಭಾವದ ಹರಿವು ಸಂತತವಾಗಿರಬೇಕು–ವೀಣೆಯ ಮೆಟ್ಟುಗಳ ಮೇಲೆ ಬೆಟ್ಟುಗಳ ಲೀಲೆ ವಿಚ್ಛಿನ್ನ ಕ್ರಿಯೆಯಾದರೂ ನಾದದ ಸೆಲೆ ಅವಿಚ್ಛಿನ್ನವಾಗಿರುವಂತೆ.

(iii) ಕನ್ನಡತನ. ಒಂದೊಂದು ಭಾಷೆಗೆ ಒಂದೋಂದು ಧಾಟಿ ಅಥವಾ ಜಾಯಮಾನ ಉಂಟು. ಭಾಷಾಂತರವನ್ನು ಓದುವಾಗ ಇದು ಸಹಜ ಕನ್ನಡ ರಚನೆ ಎಂದು ಅನ್ನಿಸಬೇಕು ಕನ್ನಡ ಲಿಪಿ ಮತ್ತು ಪದಗಳಲ್ಲಿ ಹುದುಗಿರುವ ಇಂಗ್ಲಿಷ್ ನಿರೂಪಣೆ ಎಂದಾಗಬಾರದು. ಒಂದು ಉದಾಹರಣೆ ನೋಡಿ :

Every planet moves round the sun in an elliptic orbit with the sun remaining at one of the foci.

ಪ್ರತಿಯೊಂದು ಗ್ರಹವೂ ಸೂರ್ಯನ ಸುತ್ತ ಚಲಿಸುತ್ತದೆ, ಒಂದು ದೀರ್ಘ ವೃತ್ತ ಕಕ್ಷೆಯಲ್ಲಿ, ಸೂರ್ಯ ಇದರ ನಾಭಿಗಳ ಪೈಕಿ ಒಂದರಲ್ಲಿ ಇರುವಂತೆ.

ಈ ಭಾಷಾಂತರದಲ್ಲಿ ಅಕನ್ನಡತನದ ಮೂರಿ ಇರಿಯುತ್ತದೆ, ಇದನ್ನೇ ತಿದ್ದಿ ಈ ಮುಂದಿನಂತೆ ಸರಿಪಡಿಸಬಹುದು :

ಪ್ರತಿಯೊಂದು ಗ್ರಹವೂ ಸೂರ್ಯನ ಸುತ್ತ ದೀರ್ಘವೃತ್ತಕಕ್ಷೆಯಲ್ಲಿ ಚಲಿಸುತ್ತದೆ. ಇದರ ನಾಭಿಗಳ ಪೈಕಿ ಒಂದರಲ್ಲಿ ಸೂರ್ಯ ಇದೆ.

(iv) ಮೂಲದ ಓಜ ಮತ್ತು ಓಘ. ಭಾಷಾಂತರದಲ್ಲಿ ಇವು ಹೇಗೆ ಪಡಿಮೂಡಬೇಕು ಎಂಬುದಕ್ಕೆ ಒಂದು ಉದಾಹರಣೆ ನೋಡಿ :

Although it may seem a rearguard action in an age of speciatisation, in this book we fight to hold mechanics together as a single subject, a single centre to which are drawn the mathemaician, the physicist, the astronomer and the engineer.

ವಿಶೇಷೀಕರಣದ ಒಂದು ಯುಗದಲ್ಲಿ ಇದೊಂದು ಹಿಂಚೂಣಿ ಕ್ರಿಯೆಯಂದು ತೋರ

ಬಹುದಾದರೂ ಈ ಪುಸ್ತಕದಲ್ಲಿ ನಾವು ಬಲವಿಜ್ಞಾನವನ್ನು ಒಂದು ಅಖಂಡ ವಿಷಯವಾಗಿ, ಗಣಿತಜ್ಞ, ಭೌತಜ್ಞ, ಭೂಗೋಳಜ್ಞ ಹಾಗೂ ಎಂಜಿನಿಯರುಗಳನ್ನು ಆಕರ್ಷಿಸುವ ಒಂದು ಪ್ರಬಲ ಕೇಂದ್ರವಾಗಿ ಹಿಡಿದಿಡಲು ಹೋರಾಡುತ್ತೇವೆ.

(v) ವಿಪರ್ಯಯ ಸಮಾನತೆ. ತಪಾಸಣೆಕಾರ ಕನ್ನಡಾನುವಾದದ ಆಯ್ದ ಕೆಲವು ಪರಿಚ್ಛೇದಗಳನ್ನು ಮತ್ತೆ ಸ್ವತಂತ್ರವಾಗಿ ಇಂಗ್ಲಿಷಿಗೆ ಭಾಷಾಂತರಿಸಿ ಇವು ಮೂಲಪರಿಚ್ಛೇದಗಳೊಡನೆ ಎಷ್ಟರಮಟ್ಟಿಗೆ ಹೊಂದುತ್ತವೆ ಎಂಬುದನ್ನು ನೋಡಬಹುದು. ಸಂಪೂರ್ಣ ಹೊಂದಾಣಿಕೆ ಎಂದೂ ಯಾರಿಗೂ ದೊರೆಯದು ; ಆದರೆ ಈ ವಿಪರ್ಯಯ ಭಾಷಾಂತರ ಮೊದಲ ಭಾಷಾಂತರದ ಯತ್ನವನ್ನು ಅರಿಯಲು ಒಳ್ಳೆಯ ಒಂದು ಮಾನಕ ಎನ್ನುವುದರಲ್ಲಿ ಸಂದೇಹವಿಲ್ಲ.

6 ಭಾಷಾಂತರಕಾರ ತನ್ನ ಕೃತಿಯಲ್ಲಿ ಈ ಮುಂದಿನ ಎಂಟು ಮುಖ್ಯ ದೋಷಗಳ ನುಸುಳದಂತೆ ವಿಶೇಷ ಜಾಗರೂಕನಾಗಿರಬೇಕು. ಏಕೆಂದರೆ ಇವುಗಳ ಪೈಕಿ ಯಾವುದೇ ಒಂದು ಕೂಡ ಪ್ರಾಬಲ್ಯವಾಗಿ ಪಸರಿಸಿದ್ದರೆ ಅವರ ಮತ್ತು ಭಾಷಾಂತರಕಾರನ ಮೇಲಿನ ಪ್ರತಿಷ್ಠಾಪನೆಗೆ ಸಮಾಪನವಾಗುತ್ತದೆ. ಈ ಅಸಾಧ್ಯ ಕಾರ್ಯವನ್ನು ಕೈಬಿಟ್ಟು ಬೇರೆ ಸಮರ್ಥರಿಂದ ತರ್ಜುಮೆ ಮಾಡಿಸುವುದೊಂದೇ ಪ್ರಾಯೋಗಿಕ ಮಾರ್ಗ.

(i) ಸಂಕಲನ ದೋಷ : ಮೂಲದಲ್ಲಿ ಇಲ್ಲದುದನ್ನು ಅನುವಾದದಲ್ಲಿ ಸೇರಿಸುವುದು.

(ii) ವ್ಯವಕಲನ ದೋಷ : ಮೂಲದಲ್ಲಿ ಇದ್ದುದನ್ನು ಅನುವಾದದಲ್ಲಿ ಬಿಡುವುದು.

(iii) ಏಕೈಕಮುದ್ರಿ ದೋಷ : ಮೂಲದ ಒಂದು ಪದಕ್ಕೆ ಅನುವಾದದಲ್ಲಿ ಒಂದು ಪದ ಇರಬೇಕು, ಪದಗಳು ಬರುವ ಅನುಕ್ರಮವೂ ಒಂದೇ ಆಗಿರಬೇಕು ಎನ್ನುವ ಮೂರ್ಖ ಶ್ರದ್ಧೆ. ಒಂದು ಉದಾಹರಣೆ ನೋಡಿ :

Why does the mother cling closely to her new-born baby? On the surface, the mother's behaviour looks altruistic, in other words, selfless dedication to her offspring.

ಏಕೆ ತಾಯಿ ಅಂಟಿಕೊಳ್ಳುತ್ತಾಳೆ ನಿಕಟವಾಗಿ ತನ್ನ ನವಜಾತ ಶಿಶುವನ್ನು ? ಮೇಲು ನೋಟಕ್ಕೆ ತಾಯಿಯ ವರ್ತನೆ ಕಾಣುತ್ತದೆ ಪರೋಪಕಾರವಾಗಿ–ಬೇರೆ ಪದಗಳಲ್ಲಿ, ಸ್ವಾರ್ಥ ರಹಿತ ನಿವೇದನೆ ಆಕೆಯ ಕರುಳಕುಡಿಗೆ.

(iv) ನಿಘಂಟಿನ ಅಂಧಾನುಸರಣೆ ದೋಷ : ವಿವೇಕರಹಿತವಾಗಿ (ಭಾಷಾಂತರ ಕಾರ್ಯದಲ್ಲಿ ವಿವೇಕ ಬರುವುದು ವಿಷಯ ಹಾಗೂ ಉಭಯಭಾಷಾ ಪರಿಜ್ಞಾನಗಳಿಂದ ಮಾತ್ರ) ನಿಘಂಟಿನ ಪದಗಳನ್ನು ಆಯ್ದು ಪೋಣಿಸುತ್ತ ಹೋಗುವುದು. ಒಂದು ಉದಾಹರಣೆ ನೋಡಿ :

Each organism reproduces to perpetuate its own kind. This is the primary biological function of all living being.

ಪ್ರತಿಯೊಂದು ಜೀವಿಯೂ ತನ್ನದೇ ಆದ ಕರುಣೆಯನ್ನು ಶಾಶ್ವತೀಕರಿಸಲು ಪುನರುತ್ಪಾದನೆ ಮಾಡುತ್ತದೆ. ಇದು ಬದುಕಿರುವ ಎಲ್ಲ ಜೀವಿಗಳ ಪ್ರಾಥಮಿಕ ಜೈವಿಕ ಹಬ್ಬ.

(v) ಅನ್ವಯ ದೋಷ : ಮೂಲದಲ್ಲಿ ಅಪಾನ್ವಯ ಮಾಡುವುದರಿಂದ ಘಟಿಸುವ ಅಪಚಾರ. ಒಂದು ಉದಾಹರಣೆಗಳನ್ನು ನೋಡಿ :

(a) All summer long Mendel spent his time...
ಇಡೀ ಬೇಸಗೆ ನೀಳಕಾಯುದ ಮೆಂಡಲ್ ತನ್ನ ವೇಳೆಯನ್ನು...

(b) In serving science and business, the mathematics of probability has attained a status far above its origins, which were slightly on the suspect side.

ವಿಜ್ಞಾನ ಮತ್ತು ವಾಣಿಜ್ಯ ಅಷ್ಟೇನೂ ಸಾಚಾ ಕ್ಷೇತ್ರಗಳು ಆಗಿಲ್ಲದಿದ್ದಾಗ ಸಂಭಾವ್ಯತಾ ಗಣಿತ ಅವುಗಳಿಗೆ ಸೇವೆ ಒದಗಿಸಿ ತನ್ನ ಮೂಲ ಅಂತಸ್ತಿಗಿಂತ ಅದೆಷ್ಟೋ ಪಟ್ಟು ಹೆಚ್ಚಿನ ಅಂತಸ್ತನ್ನು ಪಡೆಯಿತು.

which were slightly on the suspect side ಎಂಬ ಗುಣವಾಚಕೋಪವಾಕ್ಯ origins ಪದಕ್ಕೆ ಅನ್ವಯವಾಗುತ್ತದೆ. ಎಂಬ ಅಂಶ ಈ "ಅಪೂರ್ವ" ಭಾಷಾಂತರಕಾರನಿಗೆ ಹೊಳೆಯದಿದ್ದುದರ ಕಾರಣ ಪ್ರಾಯಶಃ ಎರಡು : ಇಂಗ್ಲಿಷ್ ಭಾಷೆ ಸರಿಯಾಗಿ ತಿಳಿಯದಿರುವುದು, ವಿಷಯ ಪರಿಜ್ಞಾನ ಸಾಕಷ್ಟು ಇಲ್ಲದಿರುವುದು.

(vi) ಅರ್ಥದೋಷ : ಪದಗಳ ಸಾಂದರ್ಭಿಕಾರ್ಥವನ್ನು ಸರಿಯಾಗಿ ಗ್ರಹಿಸದಿರುವುದು. ಯಾವುದೇ ಭಾಷೆಯಲ್ಲಿ "ಒಂದು ಪದ = ಒಂದು ಅರ್ಥ" ಎನ್ನುವ ಸರಳ ಸಂಬಂಧ ಇಲ್ಲ. ಇನ್ನು ಯಾವುದೇ ಎರಡು ಭಾಷೆಗಳ ನಡುವೆ "ಒಂದರ ಒಂದು ಪದ = ಇನ್ನೊಂದರ ಒಂದು ಪದ" ಎನ್ನುವ ಸರಳ ಸಂಬಂಧವೂ ಇಲ್ಲ. ಇಂಗ್ಲಿಷಿನಲ್ಲಿ power ಎನ್ನುವ ಪದಕ್ಕೆ ವಿಜ್ಞಾನದಲ್ಲೇ ಕನಿಷ್ಠ ಪಕ್ಷ ಮೂರು ಭಿನ್ನಾರ್ಥಗಳಿವೆ :

(a) The power of a point with respect to a circle
(b) Horse power
(c) Electric power generation

ಆದ್ದರಿಂದ ಭಾಷಾಂತರದ ವೇಳೆ ಇಂಗ್ಲಿಷ್ ಪದ ಹಾಗೂ ಪದಪುಂಜಗಳ ಸಾಂದರ್ಭಿಕಾರ್ಥವನ್ನು ಸರಿಯಾಗಿ ಗ್ರಹಿಸಿ ಮುಂದುವರಿಯುವುದು ಅತ್ಯವಶ್ಯ. ಪರಿಚ್ಛೇದ 1ರಲ್ಲಿನ ನಾಲ್ಕು ಉದಾಹರಣೆಗಳನ್ನು ಮಗುದೊಮ್ಮೆ ಗಮನಿಸುವುದು ಅಪೇಕ್ಷಣೀಯ.

(vii) ಜಾಯಮಾನ ದೋಷ : ಭಾಷಾಂತರದಲ್ಲಿ ಕನ್ನಡತನದ ಗೈರುಹಾಜರಿ. ಕನ್ನಡದಲ್ಲಿ ಯೋಚನೆ ಮಾಡಿ ಕನ್ನಡದಲ್ಲಿ ಗಟ್ಟಿಯಾಗಿ ನುಡಿದು ತರುವಾಯ ಬರೆಯಲು ತೊಡಗುವುದರಿಂದ ಈ ದೋಷಕ್ಕೆ "ಶಾಂತಿ" ಮಾಡಬಹುದು. ಜೀವಂತ ಕನ್ನಡ ಸಾಹಿತ್ಯದಲ್ಲಿ ಆಳವಾದ ಆಸಕ್ತಿ, ಪ್ರವೇಶ ಮತ್ತು ಯಶಸ್ವಿಯಾಗಿ ಕೈ ಆಡಿಸಬಲ್ಲ ಸಾಮರ್ಥ್ಯ ತೀರ ಆವಶ್ಯಕ.

(viii) ಪಾರಿಭಾಷಿಕ ಪದ ದೋಷ : ಒಂದೇ ಭಾಷಾಂತರದಲ್ಲಿ ಒಂದು ಇಂಗ್ಲಿಷ್ ಪಾರಿಭಾಷಿಕ ಪದಕ್ಕೆ ಹಲವು ಕನ್ನಡ ಪದಗಳು ಬರುವಿಕೆ. ಇದಕ್ಕೆ ಪರಿಹಾರವೇನು ಎಂಬುದನ್ನು ಈ ಹಿಂದೆ ಚರ್ಚಿಸಲಾಗಿದೆ.

## ಒಂದು ಸಂದೇಹ

ಈ ತನಕದ ಸೂತ್ರರೂಪೀ ವಿಶ್ಲೇಷಣೆಯನ್ನು ಓದಿದ ನಿಮ್ಮಲ್ಲಿ ಒಂದು ಭಾವನೆ ಸಹಜವಾಗಿ ಸ್ಫುರಿಸಿರಬಹುದು : ಆದರ್ಶ ಸನ್ನಿವೇಶದಲ್ಲಿ ಇದು ಸರಿಹೋದೀತೋ ಏನೋ, ಸದ್ಯ ಅತಿ ತುರ್ತಾಗಿ ಕನ್ನಡದಲ್ಲಿ ಆಧುನಿಕ ವಿಜ್ಞಾನ ಸಾಹಿತ್ಯದ ಭಾಷಾಂತರ ಮೈದಳೆಯು ಬೇಕಾಗಿದೆ ; ಇಲ್ಲಿ ನಾವು ತುಂಬ ಜಿಗಿ ಯಾ ಜಿಗುಟಾದರೆ ತಪ್ಪು ಹುಡುಕಲು ಕೂಡ ಭಾಷಾಂತರ ಯಾವುದೂ ದೊರೆಯಲಾರದು ; ಆದ್ದರಿಂದ ಅಲ್ಪ ಸ್ವಲ್ಪ ರಿಯಾಯತಿಯಿಂದ ಸಾಧಾರಣ ದರ್ಜೆಯವನ್ನು ಮಂಜೂರು ಮಾಡಿ ಕ್ರಮೇಣ ಪರಿಪೂರ್ಣತೆ ಎಡೆಗೆ ಮುಂದುವರಿಯುವುದು ಸಾಧು ಅಲ್ಲವೇ ?

ಈ ಪ್ರಶ್ನೆಗೆ ನನ್ನ ಉತ್ತರವಿದು. ಇವೆಲ್ಲ ಸಂದೇಹ ಆತಂಕಗಳೂ ನಾನು ಚರ್ಚೆಗೆ ಎತ್ತಿಕೊಂಡಿರುವ ವಿಷಯದ ವಿವೇಚನೆಗೆ ಸಂಬಂಧಪಡದವು, ಇಂಗ್ಲಿಷಿನಲ್ಲಿ ಹೇಳುವ ಹಾಗೆ extra-academic. ಆದರೂ ಒಂದು ಎಚ್ಚರಿಕೆಯ ಮಾತು ಹೇಳಬಯಸುತ್ತೇನೆ. ಐತಿಹಾಸಿಕ ಕಾರಣಗಳಿಂದ ಕನ್ನಡ ಈ ತನಕ ಆಧುನಿಕ ವಿಜ್ಞಾನದ ಮಾಧ್ಯಮವಾಗಿ ಪಳಗಿರುವುದಿಲ್ಲ. ಸಮರ್ಥರ ಶಾಸ್ತ್ರೀಯ ಕೃಷಿಯಿಂದ ಕ್ರಮೇಣ ಈ ಪಳಗುವಿಕೆ ಸಾಧಿತವಾಗಬೇಕೇ ವಿನಾ ಬೇರೆ ಯಾವುದೇ ಒಳ ಯಾ ಧಿಡೀರ್ ಕ್ರಮಗಳಿಂದ ಅಲ್ಲ. ಇದನ್ನು ಗಂಭೀರವಾಗಿ ಗಮನಿಸಿ ಅರಿತು ವೈಜ್ಞಾನಿಕವಾಗಿ ಕಾರ್ಯೋದ್ಯುಕ್ತರಾದೆವೋ ಕನ್ನಡ ಖಂಡಿತ ಸರ್ವಾಂಗ ಸುಂದರವಾಗಿ ಮೈತುಂಬಿ ವಿಕಸಿಸುತ್ತದೆ. ಹಾಗಲ್ಲದೇ ಭಾವುಕತೆ ರಾಗ ಭಾವಗಳಿಗೆ ಮನಸೋತು ಸಾಕಷ್ಟು ಹಣವನ್ನೂ ಪ್ರಕಟಣ ವ್ಯವಸ್ಥೆಯನ್ನೂ ಒದಗಿಸಿ "ಭಾಷಾಂತರಗಳು ಮೈದಳೆಯಲಿ" ಎಂಬುದಾಗಿ ಸುಗ್ರೀವಾಜ್ಞೆ ಹೊರಡಿಸಿದೆವೋ "ಪೆಟ್ಟಕ್ಕೆ ಹೊನ್ನುಂಟು ಅಚ್ಚುಸಾಲೆಗಳುಂಟು ಕಚ್ಚಡವ ಪೇರಿಡಲು ಪತ್ರಾಯ ಹಿರಿದುಂಟು" ಎಂಬುದಂತೂ ತಿಳಿದದ್ದೇ. ವೈಜ್ಞಾನಿಕ ವಿಧಾನ ಸ್ವತಃ ವಿಜ್ಞಾನಕ್ಕಿಂತಲೂ ವಿಜ್ಞಾನಸಾಹಿತ್ಯ ಭಾಷಾಂತರಕ್ಕೆ ಅತ್ಯಗತ್ಯ, ಅನಿವಾರ್ಯ ಕೂಡ.

## ಮುಕ್ತಾಯ

ಕೊನೆಯದಾಗಿ ಒಂದು ಮಾತನ್ನು ಹೇಳಬಯಸುತ್ತೇನೆ. ಈ ಲೇಖನದ ಆರಂಭದಲ್ಲಿ ಭಾಷಾಂತರ ಎನ್ನುವುದು ಮೂಲ ಸಮತಲದಲ್ಲಿರುವ ಒಂದು ಆಕೃತಿಯನ್ನು ಉದ್ದಿಷ್ಟ ಸಮತಲದ ಮೇಲಿನ ಸಂವಾದೀ ಆಕೃತಿಯಾಗಿ ವಿಕ್ಷೇಪಿಸುವ ಕ್ರಿಯೆ ಎಂಬುದಾಗಿ ಹೇಳಿದ್ದು ಸರಿಯಷ್ಟೆ. ಇವೆರಡು ಸಮತಲಗಳೂ ಭಿನ್ನ ಭಾಷೆಗಳನ್ನು ಪ್ರತಿನಿಧಿಸುವುದರಿಂದ ಇವನ್ನು ಬದಲಾಯಿಸುವುದು ಸಾಧ್ಯವಾಗದು. ಆದ್ದರಿಂದ ನಮ್ಮ ವಿಕ್ಷೇಪಿತಾಕೃತಿ ಮೂಲಾಕೃತಿಯ ವಿಕೃತರೂಪ ಆಗದಿರಬೇಕಾದರೆ ವಿಕ್ಷೇಪಣವನ್ನು ಸಮರ್ಥವಾಗಿಯೂ ಸಮರ್ಪಕವಾಗಿಯೂ ನಿರ್ವಹಿಸುವುದೊಂದೇ ಯೋಗ್ಯವಾದ ಹಾದಿ. ಭಾಷಾಂತರಕಾರ ಮೂಲ ಲೇಖಕನ ವಿಶ್ವಾಸವನ್ನು ಉಳಿಸಿಕೊಳ್ಳಬೇಕು, ಉದ್ದಿಷ್ಟ ಓದುಗನ ಕೃತಜ್ಞತೆಗೆ ಪಾತ್ರನಾಗಬೇಕು.

ಎನ್. ಪ್ರಭುಸ್ವಾಮಿ

# ಭಾರತದಲ್ಲಿ ಖಾದ್ಯ ತೈಲಗಳ ಉತ್ಪನ್ನ ಮತ್ತು ಸರಬರಾಜು

ಆಹಾರ ಧಾನ್ಯಗಳನ್ನು ಬಿಟ್ಟರೆ ಖಾದ್ಯ ತೈಲಗಳು ಸಾಮಾನ್ಯ ಭಾರತೀಯನ ಜೀವನಕ್ಕೆ ಸಂಬಂಧಿಸಿದಂತೆ ಪ್ರಬಲ ಪರಿಣಾಮ ಉಂಟುಮಾಡುವುವು. ಸಾಮಾನ್ಯ ಭಾರತೀಯ ಉಪಯೋಗಿಸುವ ಅನುಭೋಗಿ ವಸ್ತುಗಳ ಪೈಕಿ ಖಾದ್ಯ ತೈಲಗಳು ಗಮನಾರ್ಹ ಪರಿಮಾಣದಲ್ಲಿರುತ್ತವೆ. ಈ ಒಂದು ವರ್ಷದಲ್ಲಿ ಖಾದ್ಯ ತೈಲಗಳ ಬೆಲೆಗಳು ಮುಗಿಲು ಮುಟ್ಟುವ ಮಟ್ಟಕ್ಕೆ ಹೋಗಿವೆ. ಆದಾಗ್ಯೂ ಸಾಕಷ್ಟು ಪ್ರಮಾಣದಲ್ಲಿ ಖಾದ್ಯ ತೈಲಗಳ ಸರಬರಾಜು ಆಗುತ್ತಿಲ್ಲ. ತುಪ್ಪವೆಂದು ಅನೇಕ ಭಾರತೀಯರ ಮನೆಗಳಲ್ಲಿ ಉಪಯೋಗಿರುತ್ತಿರುವ ವನಸ್ಪತಿ ಮಾರುಕಟ್ಟೆಯಿಂದ ಅದೃಶ್ಯವಾಗಿದೆ. ಇದರ ಪರಿಣಾಮವಾಗಿ ಅನೇಕ ಭಾರತೀಯರು ಖಾದ್ಯತೈಲಗಳ ಉಪಯೋಗವನ್ನು ಮಿತಗೊಳಿಸಿದ್ದಾರೆ. ಮಾರುಕಟ್ಟೆಯಲ್ಲಿ ಅವುಗಳಿಗಿರುವ ಅಧಿಕ ಬೆಲೆ ಕೊಡಲಾರದೆ ನಿಸ್ಸಹಾಯಕ ಪರಿಸ್ಥಿತಿಯನ್ನು ಸಾಮಾನ್ಯ ಜನರು ಅನುಭವಿಸುತ್ತಿದ್ದಾರೆ. 1950ರಲ್ಲಿ ಭಾರತದಲ್ಲಿದ್ದ ಪರಿಸ್ಥಿತಿಯೊಡನೆ ಇಂದಿನ ಪರಿಸ್ಥಿತಿಯನ್ನು ಹೋಲಿಸಿದರೆ ನಮ್ಮ ದೇಶ ಎಂಥ ಸಮಸ್ಯೆಯನ್ನು ಎದುರಿಸುತ್ತಿದೆ ಎಂಬುದು ತಿಳಿದು ಬರುತ್ತದೆ. 1950ರಲ್ಲಿ ಭಾರತ ಖಾದ್ಯತೈಲಗಳನ್ನು ರಫ್ತು ಮಾಡುವ ಶಕ್ತಿ ಹೊಂದಿತ್ತು.

ಭಾರತೀಯರು ಪ್ರಮುಖವಾಗಿ ನಾಲ್ಕು ರೀತಿಯ ಖಾದ್ಯತೈಲಗಳನ್ನು ಬಳಸುತ್ತಾರೆ. ಅವು ಯಾವುವೆಂದರೆ : 1 ಕಡಲೆಕಾಯಿ ಎಣ್ಣೆ, 2 ಸಾಸಿವೆ ಎಣ್ಣೆ, 3 ಎಳ್ಳೆಣ್ಣೆ ಮತ್ತು 4 ಕೊಬ್ಬರಿ ಎಣ್ಣೆ. ಕಡಲೆಕಾಯಿ ಬೆಳೆಯುವುದರಲ್ಲಿ ಭಾರತ ಮೊದಲನೆಯ ಸ್ಥಾನ ಪಡೆದಿದೆ. ಸಾಸಿವೆ ಮತ್ತು ಎಳ್ಳು ಬೆಳೆಯುವುದರಲ್ಲಿ ಎರಡನೆಯ ಸ್ಥಾನ ಪಡೆದಿದೆ. ತೀರಪ್ರದೇಶಗಳಲ್ಲಿ ತೆಂಗಿನಮರಗಳನ್ನು ಬೆಳೆಸುತ್ತಾರೆ. ತೀರಪ್ರದೇಶಗಳಲ್ಲಿ ವಾಸಿಸುವ ಜನರು ಮಾತ್ರ ಕೊಬ್ಬರಿ ಎಣ್ಣೆಯನ್ನು ಖಾದ್ಯ ತೈಲವನ್ನಾಗಿ ಉಪಯೋಗಿಸುವರು. ಕಳೆದ ಕೆಲವು ವರ್ಷಗಳಿಂದ ತೆಂಗಿಗೆ ಬಂದು ರೀತಿಯ ರೋಗ ತಗಲುತ್ತಿರುವುದರಿಂದ ತೆಂಗಿನಕಾಯಿ ಉತ್ಪಾದನೆ ಹೆಚ್ಚದೆ ಒಂದೇ ಮಟ್ಟದಲ್ಲಿದೆ.

ಕೋಷ್ಟಕ 1ರಲ್ಲಿ ಕಾಣಿಸಿರುವಂತೆ ನಮ್ಮದೇಶದಲ್ಲಿ ವಿವಿಧ ರೀತಿಯ ಎಣ್ಣೆ ಬೀಜಗಳು ಉತ್ಪಾದನೆಯಾಗುತ್ತವೆ. ನಮ್ಮ ದೇಶದಲ್ಲಿ ಬೆಳೆಯುವ ಎಣ್ಣೆ ಬೀಜಗಳ ಪೈಕಿ ಸೇಕಡ 72 ರಷ್ಟು ಕಡಲೆಕಾಯಿ ಆಗಿದೆ. ರೇಪ್ ಬೀಜಗಳ ಮತ್ತು ಸಾಸಿವೆಯ ಉತ್ಪಾದನೆ ಸೇಕಡ 21 ರಷ್ಟು ಮತ್ತು ಎಳ್ಳಿನ ಉತ್ಪಾದನೆ ಸೇಕಡ 6ರಷ್ಟು ಇದೆ.

ಕೋಷ್ಟಕ 1*

ಎಣ್ಣೆ ಬೀಜಗಳ ಉತ್ಪಾದನೆ ಮತ್ತು ಅವು ಬೆಳೆಯುವ ಪ್ರದೇಶದ ವಿಸ್ತೀರ್ಣ

| ವರ್ಷ | ಎಣ್ಣೆ ಬೀಜಗಳ ಉತ್ಪಾದನೆ (ಸಾವಿರ ಟನ್‌ಗಳಲ್ಲಿ) | | | | | ಎಲ್ಲ ತರಹ ಎಣ್ಣೆಬೀಜಗಳ ಒಟ್ಟು ಉತ್ಪಾದನೆ | | | | |
|---|---|---|---|---|---|---|---|---|---|---|
| | ಕಡಲೆಕಾಯಿ | ಸಾಸುವೆ ಮತ್ತು ರೇಪ್ ಬೀಜಗಳು | ಎಳ್ಳು | ನಾರಗಸೆ | ಹರಳು | ವಿಸ್ತೀರ್ಣ (ಸಾವಿರ ಹೆಕ್ಟೇರುಗಳಲ್ಲಿ) | | ಉತ್ಪಾದನೆ (ಸಾವಿರ ಟನ್‌ಗಳಲ್ಲಿ) | | ಪ್ರತಿ ಹೆಕ್ಟೇರಿನ ಉತ್ಪಾದನೆ (ಕಿ.ಜಿ.ಗಳಲ್ಲಿ) |
| 1948–49 | 2,984 | 767 | 350 | 445 | 111 | 9678 | .... | 4,657 | .... | 481 |
| 1950–51 | 3,481 | 762 | 445 | 367 | 103 | 10,727 | .... | 5,158 | .... | 481 |
| 1955–56 | 3,862 | 860 | 467 | 420 | 125 | 12,085 | .... | 5,734 | .... | 474 |
| 1960–61 | 4,812 | 1,347 | 318 | 398 | 107 | 13,770 | .... | 6,982 | .... | 507 |
| 1965–66 | 4,230 | 1,276 | 425 | 335 | 80 | 14,928 | .... | 6,346 | .... | 425 |
| 1966–67 | 4,411 | 1,228 | 416 | 260 | 110 | 14,994 | .... | 6,425 | .... | 429 |
| 1967–68 | 5,731 | 1,568 | 445 | 438 | 121 | 15,677 | .... | 8,303 | .... | 530 |
| 1968–69 | 4,475 | 1,572 | 415 | 352 | 111 | 14,584 | .... | 6,925 | .... | 475 |
| 1969–70 | 5,130 | 1,564 | 488 | 469 | 123 | 14,812 | .... | 7,734 | .... | 522 |
| 1970–71 | 6,111 | 1,975 | 562 | 474 | 136 | 15,418 | .... | 9,289 | .... | 601 |
| 1971–72 | 6,180 | 1,433 | 449 | 530 | 154 | 16,033 | .... | 8,746 | .... | 546 |
| 1972–73 | 3,924 | 1,853 | 355 | 439 | 136 | 14,683 | .... | 6,708 | .... | 458 |

**The Oils and Oilseeds Journal*, July 1973

ಎಣ್ಣೆ ಬೀಜಗಳನ್ನು ಬೆಳೆಯುವ ಭೂಮಿಯ ವಿಸ್ತೀರ್ಣ ಹೆಚ್ಚಾಗಿರುವುದರಿಂದ ಎಣ್ಣೆ ಬೀಜಗಳ ಒಟ್ಟು ಉತ್ಪಾದನೆ ಹೆಚ್ಚಾಗಿದೆ ಎಂದು ಕೋಷ್ಟಕ 1ರಿಂದ ಕಂಡುಬರುತ್ತದೆ. ಆದರೆ ಪ್ರತಿ ಹೆಕ್ಟೇರ್ ಭೂಮಿಯಿಂದ ದೊರೆಯುವ ಉತ್ಪನ್ನವಂತೂ ತಳಮಟ್ಟದಲ್ಲಿದೆ. ಅಮೆರಿಕದಲ್ಲಿ 1ಹೆಕ್ಟೇರಿಗೆ 1,980 ಕೆಜಿ., ಪಾಕಿಸ್ತಾನದಲ್ಲಿ 1,480 ಕೆಜಿ. ಕಡಲೆಕಾಯಿ ಬೆಳೆದರೆ, ನಮ್ಮ ದೇಶದಲ್ಲಿ ಕೇವಲ 770 ಕೆಜಿ.ಗಳಷ್ಟು ಮಾತ್ರ ಬೆಳೆಯುತ್ತಿದ್ದೇವೆ.

ಗುಜರಾತ್, ಆಂಧ್ರ ಪ್ರದೇಶ, ತಮಿಳು ನಾಡು, ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳು ಕಡಲೆಕಾಯಿ ಬೆಳೆಯುವ ಪ್ರಮುಖ ರಾಜ್ಯಗಳು. ಸಾಸಿವೆ ಮತ್ತು ರೇಪ್ ಬೀಜಗಳನ್ನು ಬೆಳೆಯುವುದರಲ್ಲಿ ಉತ್ತರ ಪ್ರದೇಶ ಅಗ್ರಸ್ಥಾನ ಪಡೆದಿದೆ. 1970–71ರಲ್ಲಿ ಭಾರತದಲ್ಲಿ ಬೆಳೆದ ಸಾಸಿವೆ ಮತ್ತು ರೇಪ್ ಬೀಜಗಳ ಪೈಕಿ ಸೇ. 85ರಷ್ಟು ಉತ್ತರ ಪ್ರದೇಶದಲ್ಲಿ ಬೆಳೆಯಿತು. ಎಳ್ಳನ್ನು ಬೆಳೆಯುವುದರಲ್ಲಿ ರಾಜಸ್ಥಾನ, ಒರಿಸ್ಸ, ಮಧ್ಯ ಪ್ರದೇಶ, ಗುಜರಾತ್, ಆಂಧ್ರ ಪ್ರದೇಶ ಮತ್ತು ಉತ್ತರ ಪ್ರದೇಶ ಪ್ರಮುಖ ರಾಜ್ಯಗಳಾಗಿವೆ.

ಆಹಾರ ಧಾನ್ಯಗಳ ಉತ್ಪಾದನೆಯ ದೃಷ್ಟಿಯಿಂದ 1971ರಲ್ಲಿ ಭಾರತಕ್ಕೆ ಅದೃಷ್ಟ ಬಂತು. ಆಹಾರ ಧಾನ್ಯಗಳೊಂದಿಗೆ ಎಣ್ಣೆ ಬೀಜಗಳ ಉತ್ಪಾದನೆಯೂ ಅಧಿಕಗೊಂಡಿತು. ಆದರೆ 1971–72ರಲ್ಲಿ ಪರಿಸ್ಥಿತಿ ಬದಲಾಯಿಸಿತು. ಗುಜರಾತ್, ಮಹಾರಾಷ್ಟ್ರ, ಆಂಧ್ರ ಪ್ರದೇಶ ಮತ್ತು ಕರ್ನಾಟಕ ರಾಜ್ಯಗಳು ಅಭಾವ ಪರಿಸ್ಥಿತಿಗೆ ಒಳಗಾದುದರಿಂದ ಎಣ್ಣೆ ಬೀಜಗಳ ಉತ್ಪಾದನೆ ಕುಸಿಯಿತು. ಇದುವರೆಗೆ ಎಣ್ಣೆ ಬೀಜಗಳನ್ನು ಬೆಳೆಯುವ ಪ್ರದೇಶ ವಿಸ್ತಾರಗೊಳ್ಳುತ್ತಿದ್ದುದರಿಂದ ಎಣ್ಣೆ ಬೀಜಗಳ ಒಟ್ಟು ಉತ್ಪಾದನೆಯಲ್ಲಿ ಪ್ರಗತಿ ಕಾಣುತ್ತಿತ್ತು. ಆದರೆ ಜನಸಂಖ್ಯೆಯ ಬೆಳವಣಿಗೆಗೆ ಅನುಗುಣವಾಗಿ ಎಣ್ಣೆ ಬೀಜಗಳ ಉತ್ಪಾದನೆ ಹೆಚ್ಚಾಗಲಿಲ್ಲ. ಅದರ ಪರಿಣಾಮವಾಗಿ ತಲಾ ಪ್ರಜೆಗೆ ದೊರೆಯುತ್ತಿದ್ದ ಖಾದ್ಯ ತೈಲ ಮತ್ತು ವನಸ್ಪತಿಯ ಪ್ರಮಾಣ. ಕೋಷ್ಟಕ 2ರಲ್ಲಿ ಕಂಡುಬರುವಂತೆ ಕುಸಿಯಿತು.

ಕೋಷ್ಟಕ 2*

**ತಲಾ ಪ್ರಜೆಗೆ ದೊರೆಯುತ್ತಿದ್ದ ಖಾದ್ಯ ತೈಲಗಳು ಮತ್ತು ವನಸ್ಪತಿ**

| ವರ್ಷ | ಖಾದ್ಯ ತೈಲಗಳು | ವನಸ್ಪತಿ | ದೊರೆಯುತ್ತಿದ್ದ ಒಟ್ಟು ಮೇದಸ್ಸು |
|---|---|---|---|
| | (ಕೆಜಿ) | (ಕೆಜಿ) | (ಕೆಜಿ) |
| 1950–51 | 2.7 | — | — |
| 1955–56 | 2.5 | 0.7 | 3.2 |
| 1960–61 | 3.2 | 0.8 | 4.0 |
| 1961–62 | 3.2 | 0.7 | 3.9 |
| 1963–64 | 2.7 | 0.8 | 3.5 |
| 1964–65 | 3.6 | 0.8 | 3.4 |

*ಆಧಾರ : ಅದೇ

| | | | |
|---|---|---|---|
| 1965–66 | 2.6 | 0.8 | 3.4 |
| 1966–67 | 2.5 | 0,7 | 3.2 |
| 1967–68 | 3.2 | 0.8 | 4.0 |
| 1968–69 | 2.4 | 0.9 | 3.3 |
| 1969–70 | 2.8 | 0.9 | 3.7 |
| 1970–71 | 3.3 | 1.0 | 4.3 |
| 1971–72 | 2.9 | 1.1 | 4.0 |
| 1972–73 | 2.0 | 1.0 | 3.0 |

ಪ್ರಪಂಚದಲ್ಲಿ ದೊರೆಯುವ ಸರಾಸರಿ ಮೇದಸ್ಸು ತಲಾ ಪ್ರಜೆಗೆ 20 ಕಿಜಿ. ಆದರೆ, ಭಾರತದಲ್ಲಿ 1972–73ರಲ್ಲಿ 3 ಕಿಜಿ. ಗಳಷ್ಟು ಮಾತ್ರ ಇತ್ತು. 1972–73ರಲ್ಲಿ ಭಾರತದ ಪ್ರಮುಖ ಕಡಲೆಕಾಯಿ ಬೆಳೆಯುವ ರಾಜ್ಯಗಳಲ್ಲಿ ಒಟ್ಟು ಕಡಲೆಕಾಯಿ ಬೆಳೆ ನಾಶವಾಯಿತು. ದೇಶದ ಒಟ್ಟು ಕಡಲೆಕಾಯಿ ಬೆಳೆಯ ಪೈಕಿ ಸೇ. 40ರಷ್ಟು ಗುಜರಾತಿನಲ್ಲಿ ಆಗುತ್ತದೆ. 1971–72ರಲ್ಲಿ ಗುಜರಾತ್‌ನಲ್ಲಿ 15.4 ಲಕ್ಷ ಟನ್‌ಗಳಷ್ಟು ಕಡಲೆಕಾಯಿ ಬೆಳೆಯಿತು. ಆದರೆ 1972–73 ರಲ್ಲಿ ಕೇವಲ 3 ಲಕ್ಷ ಟನ್‌ಗಳಷ್ಟು ಕಡಲೆಕಾಯಿ ಬೆಳೆಯಿತು. ಗುಜರಾತಿನಲ್ಲಿ ಸೌರಾಷ್ಟ್ರ ಪ್ರದೇಶ ಕಡಲೆಕಾಯಿ ಬೆಳೆಗೆ ಹೆಸರುವಾಸಿಯಾಗಿದೆ. ಆದರೆ ಆ ಪ್ರದೇಶದಲ್ಲಿದ್ದ ಕಡಲೆಕಾಯಿ ಬೆಳೆಯೆಲ್ಲ ಸಂಪೂರ್ಣವಾಗಿ ನಾಶವಾಯಿತು. ಇದೇ ರೀತಿ ಇತರ ರಾಜ್ಯಗಳಲ್ಲೂ ಕೆಳಗೆ ತೋರಿಸಿರುವಂತೆ ಕಡಲೆಕಾಯಿ ಉತ್ಪಾದನೆ ಕುಸಿಯಿತು.

| | ಆಂಧ್ರ ಪ್ರದೇಶ | ಕರ್ನಾಟಕ | ಮಹಾರಾಷ್ಟ್ರ |
|---|---|---|---|
| 1971–72 | 11.6 ಲಕ್ಷ ಟನ್ | 6.84 ಲಕ್ಷ ಟನ್ | 4.68 ಲಕ್ಷ ಟನ್ |
| 1972–73 | 7.5 ,, ,, | 4.89 ,, ,, | 2.00 ,, ,, |

ಜನಸಂಖ್ಯೆಯ ಬೆಳವಣಿಗೆಯ ಪರಿಣಾಮವಾಗಿ ಖಾದ್ಯ ತೈಲಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಆದರೆ ಆಗಿಂದಾಗ್ಗೆ ಉಂಟಾಗುವ ಅಭಾವ ಪರಿಸ್ಥಿತಿಯ ಪರಿಣಾಮವಾಗಿ ಕಡಲೆಕಾಯಿ ಉತ್ಪಾದನೆ ಕಡಿಮೆಯಾಗುತ್ತಿದೆ. ಪ್ರತಿ ಹೆಕ್ಟೇರಿನಲ್ಲಿ ಬೆಳೆಯುವ ಕಡಲೆಕಾಯಿ ಪ್ರಮಾಣವನ್ನು ಅಧಿಕಗೊಳಿಸಿದ ಹೊರತು ದೇಶದಲ್ಲಿರುವ ಖಾದ್ಯತೈಲಗಳ ಸಮಸ್ಯೆ ಬಗೆಹರಿಸಲು ಸಾಧ್ಯವಿಲ್ಲ ಎಂದು ಸರ್ಕಾರ ಮನಗಂಡಿದೆ. ನೀರಾವರಿಯ ಸಹಾಯದಿಂದ ಬೆಳೆಯುವ ಎಲ್ಲ ರೀತಿಯ ಎಣ್ಣೆ ಬೀಜಗಳು ಒಟ್ಟು ಉತ್ಪಾದನೆಯ ಸೇ. 7ರಷ್ಟು ಮಾತ್ರ ಆಗುತ್ತವೆ. ಉಳಿದ ಭಾಗದ ಎಣ್ಣೆ ಬೀಜಗಳು ಖುಷ್ಕಿ ಭೂಮಿಯಲ್ಲಿ ಬೆಳೆಯುತ್ತವೆ. ಅನೇಕ ವರ್ಷಗಳ ವರೆಗೆ ನಮ್ಮ ದೇಶದಲ್ಲಿ ಈ ಖುಷ್ಕಿ ಭೂಮಿಗೆ ನೀರಾವರಿ ಒದಗಿಸಲು ಸಾಧ್ಯವಿಲ್ಲ. ಆದ್ದರಿಂದ ಹೊಸ ರೀತಿಯ ವ್ಯವಸಾಯ ವಿಧಾನಗಳನ್ನು ಜಾರಿಗೆ ತರಲು ಸರ್ಕಾರ ನಿರ್ಧರಿಸಿದೆ.

70 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಧಿಕ ಪರಿಮಾಣದಲ್ಲಿ ಎಣ್ಣೆ ಬೀಜಗಳ ಬೆಳೆ ಪಡೆ

ಯುವ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರ ಕೈಗೊಂಡಿದೆ. ಇದರ ಪೈಕಿ 20 ಲಕ್ಷ ಹೆಕ್ಟೇರು ಪ್ರದೇಶವನ್ನು ಕಡಲೆಕಾಯಿ ಬೆಳೆಗೆ ಮೀಸಲಾಗಿರಿಸಲಾಗಿದೆ. ಬೇಸಗೆಯಲ್ಲಿ ದಕ್ಷಿಣದ ರಾಜ್ಯಗಳಲ್ಲಿ ಗದ್ದೆಗಳಲ್ಲಿ ಕಡಲೆಕಾಯಿ ಬೆಳೆ ತೆಗೆಯುವುದು ಕೇಂದ್ರ ಸರ್ಕಾರದ ನೀತಿಯಾಗಿದೆ. ಬೇಸಗೆಯಲ್ಲಿ ಸ್ವಲ್ಪ ನೀರು ಹಾಯಿಸಿ ಗದ್ದೆಗಳಲ್ಲಿ ಕಡಲೆಕಾಯಿ ಬೆಳೆದರೆ ಮಾಮೂಲು ಪಡೆಯುವ ಬೆಳೆಯ ಎರಡೂವರೆಯಷ್ಟನ್ನು ಪಡೆಯಬಹುದೆಂಬುದು ವೈಜ್ಞಾನಿಕವಾಗಿ ತಿಳಿದುಬಂದಿದೆ. ಒಂದು ಹೆಕ್ಟೇರ್ ಪ್ರದೇಶದಲ್ಲಿ ಬತ್ತ ಬೆಳೆಯಬೇಕಾದರೆ ಗದ್ದೆಗೆ ಎಷ್ಟು ನೀರು ಹಾಯಿಸಬೇಕೋ, ಅಷ್ಟೇ ನೀರನ್ನು ಉಪಯೋಗಿಸಿಕೊಂಡು ಮೂರು ಹೆಕ್ಟೇರ್ ಪ್ರದೇಶದಲ್ಲಿ ಕಡಲೆಕಾಯಿ ಬೆಳೆ ತೆಗೆಯಬಹುದೆಂಬ ತೀರ್ಮಾನಕ್ಕೆ ಬರಲಾಗಿದೆ. ಜೊತೆಗೆ ಬೇಸಗೆಯಲ್ಲಿ ಮಾರುಕಟ್ಟೆಯಲ್ಲಿ ಎಣ್ಣೆಗೆ ಬೇಡಿಕೆ ಅಧಿಕವಾಗುತ್ತದೆ. ಆಗ ಕಡಲೆಕಾಯಿ ಬೆಳೆಯುವುದರಿಂದ ಅಧಿಕ ಬೇಡಿಕೆಯನ್ನು ಪೂರೈಸಬಹುದಾಗಿದೆ. ಇವೆಲ್ಲವನ್ನು ಗಣನೆಗೆ ತೆಗೆದುಕೊಂಡು ತುಂಗಭದ್ರಾ, ಹಿರಾಕುಡ್ ಮತ್ತು ನಾಗಾರ್ಜುನಸಾಗರ ಅಣೆ ಕಟ್ಟುಗಳಿಗೆ ಹೊಂದಿಕೊಂಡಿರುವ ಅಚ್ಚುಕಟ್ಟು ಪ್ರದೇಶಗಳಲ್ಲಿ ಕಡಲೆಕಾಯಿಯನ್ನು ಬೇಸಗೆ ಬೆಳೆಯಂತೆ ಬೆಳೆಯುವ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಈ ಪ್ರದೇಶಗಳಲ್ಲಿರುವ ಕೆಂಪುಮಣ್ಣು ಬೇಸಗೆಯಲ್ಲಿ ಬತ್ತದ ಬೆಳೆಗಿಂತ ಕಡಲೆಕಾಯಿ ಬೆಳೆಗೆ ಅತ್ಯುತ್ತಮವಾದ್ದು ಎಂದು ತಿಳಿದುಬಂದಿದೆ.

ಮೇಲ್ಕಂಡ ಕ್ರಮಗಳಿಂದಲೇ ದೇಶದಲ್ಲಿ ಮುಂದೆ ಉಂಟಾಗುವ ಖಾದ್ಯ ತೈಲಗಳ ಅಭಾವವನ್ನು ಹೋಗಲಾಡಿಸಲು ಸಾಧ್ಯವಿಲ್ಲವೆಂಬುದನ್ನು ಮನಗಂಡು ಸರ್ಕಾರ ಖಾದ್ಯ ತೈಲಗಳ ಉತ್ಪಾದನೆ ಹೆಚ್ಚಿಸಲು ಹೊಸ ಮೂಲಗಳಿಂದ ಖಾದ್ಯ ತೈಲಗಳನ್ನು ಪಡೆಯುವ ಯೋಜನೆಯನ್ನು ಆರಂಭಿಸಿದೆ.

ಸೋಯಾ ಅವರೆಯ ಉತ್ಪಾದನೆಯನ್ನು ಭಾರತದಲ್ಲಿ ಆಚರಣೆಗೆ ತಂದು ಅದರಿಂದ ಎಣ್ಣೆ ಪಡೆಯುವುದರ ಜೊತೆಗೆ ಭಾರತೀಯರ ಆಹಾರದಲ್ಲಿರುವ ಪೌಷ್ಟಿಕಾಂಶದ ಕೊರತೆಯನ್ನು ಹೋಗಲಾಡಿಸಲು ಪ್ರಯತ್ನ ಕೈಗೊಳ್ಳಲಾಗಿದೆ. ಸೋಯಾ ಅವರೆಯಲ್ಲಿ ಶೇ 20ರಷ್ಟು ಎಣ್ಣೆಯ ಅಂಶ ಮತ್ತು ಶೇ 40ರಷ್ಟು ಸಸಾರಜನಕ ಅಂಶ ಇವೆ. ಭಾರತೀಯರಿಗೆ ಆವಶ್ಯಕವಾದ ಬಿ ಅನ್ನಾಂಗ ಸೋಯಾ ಅವರೆಯಿಂದ ದೊರೆಯುತ್ತದೆ. 12 ಕೆಜಿ. ಹಾಲು, 6 ಕೆಜಿ. ಅಕ್ಕಿ, 3.5 ಕೆಜಿ. ಮೊಟ್ಟೆಗಳು ಮತ್ತು 2 ಕೆಜಿ. ಮಾಂಸವನ್ನು ಉಪಯೋಗಿಸಿದಾಗ ದೊರೆಯುವಷ್ಟು ಸಸಾರಜನಕ ಅಂಶ ಒಂದು ಕೆಜಿ. ಸೋಯಾ ಅವರೆ ಹಿಟ್ಟನ್ನು ಉಪಯೋಗಿಸುವುದರಿಂದ ದೊರೆಯುತ್ತದೆ ಎಂದು ವಿಜ್ಞಾನಿಗಳು ತಿಳಿಸುತ್ತಾರೆ. ಭಾರತೀಯರು ಇದನ್ನು ಸುಲಭ ಬೆಲೆಯಲ್ಲಿ ಪಡೆದು ತಮ್ಮ ಪೌಷ್ಟಿಕಾಂಶದ ಕೊರತೆ ಹೋಗಲಾಡಿಸಿಕೊಳ್ಳಬಹುದೆಂಬುದು ಅನೇಕ ವಿಜ್ಞಾನಿಗಳ ಅಭಿಪ್ರಾಯವಾಗಿದೆ. ಇದನ್ನು ಮನಗಂಡು ವನಸ್ಪತಿ ಉತ್ಪಾದಕರು ಸೋಯಾ ಅವರೆಯ ಎಣ್ಣೆಯನ್ನು ಬಳಸಲಾರಂಭಿಸಿದ್ದಾರೆ. ವನಸ್ಪತಿ ಉತ್ಪಾದಕರ ಬೇಡಿಕೆ ಪೂರೈಸಲು ಈ ಕೆಳಗೆ ಕಾಣಿಸಿರುವ ಮೌಲ್ಯದಷ್ಟು ಸೋಯಾ ಅವರೆ ಎಣ್ಣೆಯನ್ನು ಆಮದು ಮಾಡಿಕೊಳ್ಳಲಾಯಿತು.

## ಸೋಯಾ ಅವರೆ ಎಣ್ಣೆ ಆಮದು

| ವರ್ಷ | ಮೌಲ್ಯ |
|---|---|
| 1969–70 | 14.66 ಲಕ್ಷ ರೂ |
| 1970–71 | 22.70 ,, ,, |
| 1971–72 | 18.77 ,, ,, |
| 1972–73 | 5.02 ,, ,, |

ಮಧ್ಯ ಪ್ರದೇಶ, ಉತ್ತರ ಪ್ರದೇಶ, ಮಹಾರಾಷ್ಟ್ರ ಮತ್ತು ಗುಜರಾತು ರಾಜ್ಯಗಳಲ್ಲಿ ಸೋಯಾ ಅವರೆ ಉತ್ಪಾದನೆಯನ್ನು ಪ್ರೋತ್ಸಾಹಿಸಲು ಕೇಂದ್ರ ಸರ್ಕಾರ ಈ ಅಂಶಗಳನ್ನು ಕಾರ್ಯಗತಗೊಳಿಸಿದೆ : 1 1971–72ರಲ್ಲಿ 4 ಲಕ್ಷ ಹೆಕ್ಟೇರ್ ಭೂಮಿಯನ್ನು ಸೋಯಾ ಅವರೆ ಉತ್ಪಾದನೆಗೆ ಅಳವಡಿಸುವ ಕಾರ್ಯ ಆರಂಭಿಸಿತು. 2 ಉತ್ತಮ ದರ್ಜೆಯ ಸೋಯಾ ಅವರೆ ಬೀಜಗಳನ್ನು ಬಿತ್ತುವವರಿಗೆ ಸೇ. 25ರಷ್ಟು ಸಹಾಯಧನ ಕೊಡುವ ಏರ್ಪಾಡು ಮಾಡಿತು. ಆದರೆ ಕೊಡುವ ಸಹಾಯ ಧನ 1 ಕ್ವಿಂಟಲ್‌ಗೆ 60ರೂ. ಮೀರಿರಬಾರದೆಂದು ನಿಗದಿಗೊಳಿಸಲಾಗಿದೆ. 3 ಸೋಯಾ ಅವರೆ ಗಿಡಗಳನ್ನು ಕ್ರಿಮಿಕೀಟಗಳಿಂದ ರಕ್ಷಿಸಲು ಉಪಯೋಗಿಸುವ ಕ್ರಿಮಿನಾಶಕಗಳ ವೆಚ್ಚದ ಸೇ. 25ರಷ್ಟನ್ನು ಸಹಾಯ ಧನ ರೂಪದಲ್ಲಿ ಕೊಡಲಾಗುವುದು. 4 ತಾಂತ್ರಿಕ ಸಲಹೆ ನೀಡಲು ಆವಶ್ಯಕವಾದ ಸಿಬ್ಬಂದಿಯನ್ನು ಒದಗಿಸಲಾಗಿದೆ. 5 ಸೋಯಾ ಅವರೆ ಬೆಳೆ ಪ್ರದರ್ಶನವನ್ನು ರೈತರು ಕೈಗೊಂಡರೆ 500 ರೂಪಾಯಿಗಳ ವರೆಗೆ ಸಹಾಯ ಧನ ಕೊಡಲಾಗುವುದು.

ವಿವಿಧ ರಾಜ್ಯಗಳಲ್ಲಿ ಯಾವ ಯಾವ ಭಾಗದಲ್ಲಿ ಸೋಯಾ ಅವರೆ ಬೆಳೆ ಕೈಗೊಂಡರೆ ಲಾಭದಾಯಕವಾಗಿದೆ ಎಂಬುದನ್ನು ಗುರುತಿಸಲು ಮತ್ತು ಅಧಿಕ ಇಳುವರಿ ಕೊಡುವ ಸೋಯಾ ಅವರೆ ತಳಿಗಳನ್ನು ಕಂಡುಹಿಡಿಯಲು ಈ ಸಂಸ್ಥೆಗಳು ಸಂಶೋಧನೆ ನಡೆಸುವಂತೆ ಏರ್ಪಾಡು ಮಾಡಲಾಗಿದೆ :

1 ಜವಾಹರಲಾಲ್ ನೆಹರು ಕೃಷಿ ವಿಶ್ವವಿದ್ಯಾಲಯ, ಜಬ್ಬಲ್‌ಪುರ, ಮಧ್ಯ ಪ್ರದೇಶ
2 ಗೋವಿಂದ ವಲ್ಲಭ ಪಂತ್ ಕೃಷಿ ವಿಶ್ವವಿದ್ಯಾಲಯ, ಪಂತ್ ನಗರ, ಉತ್ತರ ಪ್ರದೇಶ
3 ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು
4 ಅಖಿಲಭಾರತ ಕೃಷಿ ಸಂಶೋಧನ ಸಂಸ್ಥೆ, ದೆಹಲಿ
5 ಕಲ್ಯಾಣಿ ವಿಶ್ವವಿದ್ಯಾಲಯ, ಪಶ್ಚಿಮ ಬಂಗಾಳ
6 ಗುಜರಾತ್ ಕೃಷಿ ವಿಶ್ವವಿದ್ಯಾಲಯ, ಗುಜರಾತ್
7 ಪಂಜಾಬ್ ಕೃಷಿ ವಿಶ್ವವಿದ್ಯಾಲಯ, ಲೂಧಿಯಾನ
8 ವಿಜ್ಞಾನಗಳ ಅಭಿವೃದ್ಧಿ ಸಾಧಿಸಲು ರೂಪಿಸಿಕೊಂಡಿರುವ ಮಹಾರಾಷ್ಟ್ರ ಮಂಡಳಿ, ಪುಣೆ

ಸೋಯಾ ಅವರೆ ಉತ್ಪಾದನೆಯ ಜೊತೆಗೆ ಸೂರ್ಯಕಾಂತಿ ಬೀಜಗಳ ಉತ್ಪಾದನೆಗೂ ತೀವ್ರ ಗಮನ ಕೊಡಲಾಗಿದೆ. ಏಕೆಂದರೆ ಸೂರ್ಯಕಾಂತಿ ಬೀಜವನ್ನು ಬೆಳೆದರೆ ಪ್ರತಿ ಎಕರೆಯಲ್ಲೂ ಸೋಯಾ ಅವರೆ ಬೆಳೆಗಿಂತ ಅಧಿಕ ಬೆಳೆ ಪಡೆಯಬಹುದಾಗಿದೆ. ಅಲ್ಲದೆ ಸೋಯಾ ಅವರೆಯಿಂದ ಪಡೆಯಬಹುದಾದ ಪರಿಮಾಣಕ್ಕಿಂತಲೂ ಅಧಿಕ ಪ್ರಮಾಣದಲ್ಲಿ ಎಣ್ಣೆಯನ್ನು ಸೂರ್ಯಕಾಂತಿ ಬೀಜಗಳಿಂದ ಪಡೆಯಬಹುದಾಗಿದೆ. ರಷ್ಯಾ, ಬಲ್ಗೇರಿಯಾ, ರುಮೇನಿಯಾ, ಉರುಗ್ವೆ, ದಕ್ಷಿಣ ಆಫ್ರಿಕಾ, ತುರ್ಕಿ, ಅರ್ಜೆಂಟೀನಾ ಮತ್ತು ಚಿಲಿ ದೇಶಗಳಲ್ಲಿ ಸೂರ್ಯಕಾಂತಿ ಬೀಜಗಳಿಂದ ಎಣ್ಣೆ ಉತ್ಪಾದಿಸುವುದು ಮಹತ್ವದ ಸ್ಥಾನ ಪಡೆದಿದೆ. ಪ್ರಪಂಚದ ಒಟ್ಟು ಉತ್ಪಾದನೆಯ (ಸೂರ್ಯಕಾಂತಿ ಬೀಜಗಳು) ಪೈಕಿ ರಷ್ಯಾ ಒಂದೇ ಸೇಕಡ 80ರಷ್ಟು ಒದಗಿಸುತ್ತದೆ. ಉತ್ಕೃಷ್ಟವಾದ ಖಾದ್ಯತೈಲವನ್ನು ಸೇಕಡ 45–50ರ ಪ್ರಮಾಣದಲ್ಲಿ ಸೂರ್ಯಕಾಂತಿ ಬೀಜಗಳಿಂದ ಪಡೆಯಬಹುದು ಎಂದು ತಿಳಿದುಬಂದ ಮೇಲೆ ನಾಲ್ಕು ರೀತಿಯ ಸೂರ್ಯಕಾಂತಿ ಗಿಡಗಳ ತಳಿಗಳನ್ನು ರಷ್ಯದಿಂದ ತರಿಸಿ ಇಂಡಿಯದಲ್ಲಿ ಅವು ಯಾವ ರೀತಿ ಫಲ ನೀಡುತ್ತವೆ ಎಂದು ಪ್ರಾಯೋಗಿಕವಾಗಿ ಪರೀಕ್ಷಿಸಲಾಯಿತು. ಅವುಗಳಿಂದ ಉತ್ತಮ ಫಲ ಪಡೆಯಬಹುದೆಂಬ ಭರವಸೆ ದೊರೆತ ಮೇಲೆ 1971–72ರಲ್ಲಿ 900 ಹೆಕ್ಟೇರ್ ಪ್ರದೇಶದಲ್ಲಿ ಮೊದಲು ಸೂರ್ಯಕಾಂತಿ ಬೀಜಗಳನ್ನು ಬೆಳೆಯುವ ಯೋಜನೆಯನ್ನು ಕೇಂದ್ರ ಸರ್ಕಾರ ಕೈಗೊಂಡಿತು.

ಸರ್ಕಾರ ಯೋಜನೆ ಕೈಗೊಂಡ ಅನಂತರ ಅದರ ಪರಿಣಾಮಗಳು ಹೀಗೆ ಕಂಡುಬಂದಿವೆ: (1) ತಮಿಳುನಾಡು, ಆಂಧ್ರಪ್ರದೇಶ ಮತ್ತು ಕರ್ಣಾಟಕ ರಾಜ್ಯಗಳಲ್ಲಿ ರೈತರು ಸೂರ್ಯಕಾಂತಿ ಬೆಳೆಗೆ ಪ್ರೋತ್ಸಾಹದಾಯಕವಾದ ಬೆಂಬಲ ನೀಡಿದ್ದಾರೆ. (2) ಈ ರಾಜ್ಯಗಳಲ್ಲಿ ವರ್ಷದ ಎಲ್ಲಾ ಕಾಲಗಳಲ್ಲಿಯೂ ಸೂರ್ಯಕಾಂತಿ ಬೆಳೆ ಮಾಡಬಹುದಾಗಿದೆ. (3) ಮಳೆಯ ಆಶ್ರಯದಿಂದ ಈ ಬೆಳೆ ಮಾಡಬಹುದು. (4) ಅಭಾವ ಪರಿಸ್ಥಿತಿಯನ್ನು ತಡೆದುಕೊಳ್ಳುವ ಶಕ್ತಿ ಸೂರ್ಯಕಾಂತಿ ಗಿಡಗಳಿಗಿದೆ. (5) ಉಳಿದ ಬೆಳೆಗಳನ್ನು ಕೈಬಿಡದೆ, ಭೂಮಿ ಖಾಲಿ ಬೀಳುವ ಸಮಯದಲ್ಲಿ ಸೂರ್ಯಕಾಂತಿಯನ್ನು ಬೆಳೆಯಬಹುದಾಗಿದೆ. (6) ಅತ್ಯಲ್ಪ ಮಳೆ ಬೀಳುವ ಪ್ರದೇಶಗಳಲ್ಲಿ ಕಡಲೆಕಾಯಿ ಬೆಳೆಯುವ ಹಾಗಿಲ್ಲ. ಆದರೆ ಅಂತಹ ಪ್ರದೇಶಗಳಲ್ಲೂ ಸೂರ್ಯಕಾಂತಿ ಬೆಳೆಯಬಹುದು. (7) ಒಂದು ಹೆಕ್ಟೇರ್ ಪ್ರದೇಶದಲ್ಲಿ ವ್ಯವಸಾಯ ಮಾಡಲು 10 ಕೆಜಿ. ಸೂರ್ಯಕಾಂತಿ ಬೀಜಗಳನ್ನು ಬಿತ್ತಿದರೆ ಸಾಕು. ಆದರಿಂದ 1 ಟನ್ ಉತ್ಪಾದನೆ ಪಡೆಯಬಹುದು (8) ಉಳಿದ ಎಣ್ಣೆ ಬೀಜಗಳ ಉತ್ಪಾದನೆಯೊಡನೆ ಹೋಲಿಸಿದಾಗ ಪ್ರತಿ ಹೆಕ್ಟೇರಿನಿಂದಲೂ ಅಧಿಕ ಸೂರ್ಯಕಾಂತಿಯ ಉತ್ಪಾದನೆ ಪಡೆಯಬಹುದಾಗಿದೆ. ಅಲ್ಲದೆ ಉತ್ಪಾದನೆಯ ವೆಚ್ಚವೂ ಕಡಿಮೆ.

ಮೇಲ್ಕಂಡ ಅಂಶಗಳು ಕಂಡುಬಂದಮೇಲೆ ಕೇಂದ್ರ ಸರ್ಕಾರ ಸೂರ್ಯಕಾಂತಿ ಬೆಳೆಯನ್ನು ಇತರ ರಾಜ್ಯಗಳಲ್ಲೂ ಜನಪ್ರಿಯಗೊಳಿಸಲು ಯತ್ನಿಸುತ್ತಿದೆ. ಮಹಾರಾಷ್ಟ್ರ ಮತ್ತು ಗುಜರಾತು ರಾಜ್ಯಗಳಲ್ಲಿ ಪ್ರಕ್ಕಟಿಯಾಗಿ ಸೂರ್ಯಕಾಂತಿ ಬಿತ್ತನೆ ಬೀಜಗಳನ್ನು ರೈತರಿಗೆ ಹಂಚಿ ಅವರು ತಮ್ಮ ಜಮೀನುಗಳಲ್ಲಿ ಬೆಳೆಯುವಂತೆ ಪ್ರೋತ್ಸಾಹಿಸಲಾಗುತ್ತಿದೆ. 1975 76ರ ಕೊನೆಯ ವೇಳೆಗೆ 6.5 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಸೂರ್ಯಕಾಂತಿ ಬೆಳೆ ಬೆಳೆಸುವ ಯೋಜನೆಯನ್ನು ಕೇಂದ್ರ

ಸರ್ಕಾರ ಆರಂಭಿಸಿದೆ. ಕೋಷ್ಟಕ 3 ರಲ್ಲಿ ಕಂಡುಬರುವಂತೆ ಸೂರ್ಯಕಾಂತಿ ಬೆಳೆ ಯೋಜನೆಯನ್ನು ವಿವಿಧ ರಾಜ್ಯಗಳಲ್ಲಿ ಆರಂಭಿಸಲಾಗಿದೆ.

## ಕೋಷ್ಟಕ 3

| | ವಿಸ್ತೀರ್ಣ–ಹೆಕ್ಟೇರ್‌ಗಳಲ್ಲಿ | | |
|---|---|---|---|
| ರಾಜ್ಯಗಳು | 1973–74 | 1974–75 | 1975–76 |
| ಆಂಧ್ರ ಪ್ರದೇಶ | 80,000 | 1,20,000 | 1,40,000 |
| ತಮಿಳು ನಾಡು | 1,20,000 | 1,80,000 | 2,00,000 |
| ಕರ್ನಾಟಕ | 50,000 | 70,000 | 80,000 |
| ಗುಜರಾತ್ | 30,000 | 50,000 | 60,000 |
| ಮಹಾರಾಷ್ಟ್ರ | 40,000 | 60,000 | 80,000 |
| ಮಧ್ಯ ಪ್ರದೇಶ | — | 10,000 | 15,000 |
| ಉತ್ತರ ಪ್ರದೇಶ | — | 10,000 | 15,000 |
| ಪಶ್ಚಿಮ ಬಂಗಾಳ | — | 20,000 | 40,000 |
| ಇತರ ರಾಜ್ಯಗಳು | — | 10,000 | 20,000 |
| ಮೊತ್ತ | 3,20,000 | 5,30,000 | 6,50,000 |

ಆಧಾರ : ಕೋಷ್ಟಕ 1 ರಲ್ಲಿ ಕಾಣಿಸಿರುವಂತೆ

ನಮ್ಮ ದೇಶದಲ್ಲಿ ಖಾದ್ಯ ತೈಲಗಳಿಗೆ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ಉತ್ಪಾದನೆಯನ್ನು ಹೆಚ್ಚಿಸುವುದರೊಂದಿಗೆ, ತೈಲಗಳ ಉತ್ಪಾದನೆಯಲ್ಲಿ ಆಗುತ್ತಿರುವ ಅಪವ್ಯಯವನ್ನು ತಡೆಗಟ್ಟುವುದು ಅತ್ಯಾವಶ್ಯಕವಾಗಿದೆ. ಎಣ್ಣೆ ಬೀಜಗಳನ್ನು ಹಾಳುಮಾಡದೆ ಅವುಗಳಿಂದ ಪರಮಾವಧಿ ಇಳುವರಿ ಪಡೆಯುವುದು ನಮ್ಮ ಪ್ರಮುಖ ಕರ್ತವ್ಯವಾಗಿದೆ. ಗಾಣಗಳಿಂದ ಮತ್ತು ಎಣ್ಣೆ ತೆಗೆಯುವ ಸಣ್ಣ ಯಂತ್ರಗಳಿಂದ ಎಣ್ಣೆ ತೆಗೆಯುವಾಗ ಸಾಕಷ್ಟು ಪ್ರಮಾಣದಲ್ಲಿ ಎಣ್ಣೆ ಹಾಳಾಗುತ್ತದೆ. ನಮ್ಮ ದೇಶದಲ್ಲಿ ವಾರ್ಷಿಕವಾಗಿ 38 ಲಕ್ಷ ಟನ್‌ಗಳಷ್ಟು ಹಿಂಡಿ, ಎಣ್ಣೆ ತೆಗೆಯುವಾಗ ದೊರೆಯುತ್ತದೆ. ಅವುಗಳಲ್ಲಿ ಇನ್ನೂ ಸೇಕಡ 8 ರಿಂದ 12 ಭಾಗದಷ್ಟು ಎಣ್ಣೆ ಅಂಶ ಉಳಿದುಕೊಂಡಿರುತ್ತದೆ. ಶಾಸ್ತ್ರೀಯ ದೃಷ್ಟಿಯಿಂದ ನೋಡಿದರೆ ಹಿಂಡಿಯಲ್ಲಿ ಸೇಕಡ 3ಕ್ಕಿಂತ ಹೆಚ್ಚಿನ ಎಣ್ಣೆ ಅಂಶ ಇರಬಾರದು. ಪುರಾತನ ಮತ್ತು ಸವೆದು ಹೋಗಿರುವ ಎಣ್ಣೆ ತೆಗೆಯುವ ಸಣ್ಣ ಯಂತ್ರಗಳನ್ನು ಮತ್ತು ಗಾಣಗಳನ್ನು ನಮ್ಮ ದೇಶದಲ್ಲಿ ತೆಗೆದು ಹಾಕುವುದು ಒಂದು ದೊಡ್ಡ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಯಾಗಿದೆ.

ಹಿಂಡಿಯಲ್ಲಿ ಉಳಿದಿರುವ ಎಣ್ಣೆಯ ಅಂಶ ಪಡೆಯಲು ಕೇಂದ್ರ ಸರ್ಕಾರ ಆಧುನಿಕ ಯಂತ್ರಗಳ ಸ್ಥಾಪನೆಯನ್ನು ಪ್ರೋತ್ಸಾಹಿಸಿತು. ಅದರ ಪರಿಣಾಮವಾಗಿ 30 ಲಕ್ಷ ಟನ್ ಹಿಂಡಿಯನ್ನು

ಅರೆಯುವ ಸಾಮರ್ಥ್ಯವುಳ್ಳ 125 ಆಧುನಿಕ ಯಂತ್ರಗಳನ್ನು ದೇಶದ ವಿವಿಧ ಭಾಗಗಳಲ್ಲಿ ಸ್ಥಾಪಿಸಲಾಯಿತು. ಆದರೆ ಈ ಕಾರ್ಖಾನೆಗಳಿಗಿರುವ ಸಾಮರ್ಥ್ಯದ ಪೈಕಿ ಸೇಕಡ 50 ರಷ್ಟು ಮಾತ್ರ ಉಪಯೋಗಿಸಲ್ಪಡುತ್ತಿದೆ. ಏಕೆಂದರೆ ಹಿಂಡಿಯ ಸರಬರಾಜಿನಲ್ಲಿ ವಿಪರೀತ ಅವ್ಯವಸ್ಥೆಯಿದೆ. ದೇಶದಲ್ಲಿ ದೊರೆಯುವ 38 ಲಕ್ಷ ಟನ್ ಹಿಂಡಿ ಪೈಕಿ ಕೇವಲ 16 ರಿಂದ 20 ಲಕ್ಷ ಟನ್‌ಗಳಷ್ಟು ಮಾತ್ರ ಹಿಂಡಿ ಅರೆಯುವ ಕಾರ್ಖಾನೆಗಳಿಗೆ ಸರಬರಾಜಾಗುತ್ತದೆ. ಉಳಿದುದನ್ನು ದನದ ಮೇವು ಅಥವಾ ಗೊಬ್ಬರವನ್ನಾಗಿ ಉಪಯೋಗಿಸಲಾಗುತ್ತಿದೆ. ದನದ ಮೇವು ಅಥವಾ ಗೊಬ್ಬರವಾಗಿ ಉಪಯೋಗಿಸಲ್ಪಡುತ್ತಿರುವ ಹಿಂಡಿಯಿಂದ 1 ಲಕ್ಷ ಟನ್‌ಗಳಷ್ಟು ಎಣ್ಣೆ ಪಡೆಯಬಹುದಾಗಿದೆ. ಇದು ಈಗ ಯಾವ ಪ್ರಯೋಜನವೂ ಇಲ್ಲದೆ ಹಾಳಾಗುತ್ತಿದೆ. ಪಶು ಸಂಗೋಪನ ಇಲಾಖೆಗೆ ಸಂಬಂಧಿಸಿದ ತಜ್ಞರ ಪ್ರಕಾರ ಎಣ್ಣೆಯ ಅಂಶ ಇರುವ ಹಿಂಡಿಯನ್ನು ಮೇವಾಗಿ ಕೊಡಬೇಕಾಗಿಲ್ಲ. ಸಂಪೂರ್ಣವಾಗಿ ಎಣ್ಣೆಯನ್ನು ತೆಗೆದುಕೊಂಡಮೇಲೆ ಉಳಿಯುವ ಎಣ್ಣೆ ಅಂಶವಿಲ್ಲದ ಹಿಂಡಿಯಲ್ಲೂ ಪ್ರಾಣಿಗಳಿಗೆ ಆವಶ್ಯಕವಾದ ಪೌಷ್ಟಿಕಾಂಶವಿದೆ. ಆದುದರಿಂದ ರೈತರಿಗೆ ಈ ವಿಷಯದಲ್ಲಿ ತಿಳಿವಳಿಕೆ ಕೊಡುವುದು ಆವಶ್ಯಕವಾಗಿದೆ. ಹಿಂಡಿಯಲ್ಲಿ ವ್ಯರ್ಥವಾಗಿ ಹೋಗುತ್ತಿರುವ ಎಣ್ಣೆಯನ್ನು ಖಾದ್ಯ ತೈಲವನ್ನಾಗಿ ಉಪಯೋಗಿಸಿಕೊಳ್ಳುವುದು ನಮ್ಮ ಜನರ ಆದ್ಯಕರ್ತವ್ಯವಾಗಿದೆ.

ವಿಜ್ಞಾನಿಗಳು ತಮ್ಮ ಸಂಶೋಧನೆಯ ಫಲವಾಗಿ ಹತ್ತಿಬೀಜದ ಎಣ್ಣೆ ಉತ್ತಮ ಖಾದ್ಯತೈಲವೆಂದು ನಿರ್ಧರಿಸಿದ್ದಾರೆ. 1950-51ರಲ್ಲಿ ಇಂಡಿಯಾದಲ್ಲಿ ಹತ್ತಿ ಬೀಜದ ಎಣ್ಣೆ ಉತ್ಪಾದನೆಯೆ ಇರಲಿಲ್ಲವೆನ್ನಬಹುದು. ಆದರೆ ಈಗ 1.4 ರಿಂದ 1.5 ದಶ ಲಕ್ಷ ಟನ್‌ಗಳಷ್ಟು ಹತ್ತಿಬೀಜ ಅರೆಯುವ ಸಾಮರ್ಥ್ಯವುಳ್ಳ ಯಂತ್ರಗಳಿವೆ. ದೇಶದಲ್ಲಿ ಪ್ರತಿ ವರ್ಷ ಸುಮಾರು 20 ಲಕ್ಷ ಟನ್‌ಗಳಷ್ಟು ಹತ್ತಿಬೀಜ ದೊರೆಯುತ್ತದೆ. ಆಧುನಿಕ ರೀತಿಯಲ್ಲಿ ಯಂತ್ರಗಳನ್ನು ಉಪಯೋಗಿಸಿಕೊಂಡು ಹತ್ತಿ ಬೀಜದ ಎಣ್ಣೆಯನ್ನು ತಯಾರಿಸಲು ಏರ್ಪಾಡು ಮಾಡಿದರೆ 3.2 ಲಕ್ಷ ಟನ್‌ಗಳಷ್ಟು ಹತ್ತಿ ಬೀಜದ ಎಣ್ಣೆ ದೊರೆಯುತ್ತದೆ. ಅದನ್ನು ಖಾದ್ಯ ತೈಲವನ್ನಾಗಿ ಬಳಸಬಹುದು. ಈಗಾಗಲೇ ಈ ಎಣ್ಣೆಯನ್ನು ವನಸ್ಪತಿ ತಯಾರಿಕೆಯಲ್ಲಿ ಬಳಸಲಾಗುತ್ತಿದೆ. ಕೇಂದ್ರಸರ್ಕಾರ ಇದಕ್ಕೆ ಪ್ರೋತ್ಸಾಹ ನೀಡುತ್ತಿದೆ. ವನಸ್ಪತಿ ತಯಾರಕರು ಹೆಚ್ಚು ಹೆಚ್ಚಾಗಿ ಹತ್ತಿಬೀಜದ ಎಣ್ಣೆ ಉಪಯೋಗಿಸಿಕೊಂಡರೆ ಅವರು ಕೊಡಬೇಕಾದ ಅಬ್ಕಾರಿ ಸುಂಕದಲ್ಲಿ ರಿಯಾಯಿತಿ ಕೊಡಲಾಗುವುದು ಎಂದು ಕೇಂದ್ರ ಸರ್ಕಾರ ಪ್ರಕಟಿಸಿದೆ.

ಅಕ್ಕಿ ತೌಡಿನಿಂದ ತಯಾರಿಸಿದ ಎಣ್ಣೆಯನ್ನು ಜಪಾನ್ ಮತ್ತು ಅಮೆರಿಕ ದೇಶಗಳಲ್ಲಿ ಖಾದ್ಯ ತೈಲವನ್ನಾಗಿ ಉಪಯೋಗಿಸುವುದು ಬಳಕೆಗೆ ಬಂದಿದೆ. ತೌಡಿನಲ್ಲಿ ಸೇಕಡ 15 ರಿಂದ 25ರಷ್ಟು ಎಣ್ಣೆ ಅಂಶ ಇದೆ ಎಂಬುದು ಗೊತ್ತಾಗಿದೆ. ಭಾರತದಲ್ಲಿರುವ ಅಕ್ಕಿ ಗಿರಣಿಗಳು ಸಣ್ಣವು. ಜೊತೆಗೆ ತೌಡಿನಿಂದ ಎಣ್ಣೆ ತೆಗೆಯುವ ಯಂತ್ರಗಳನ್ನು ಅವು ಹೊಂದಿಲ್ಲ. ಆದುದರಿಂದ ಸಾಬೂನು ತಯಾರಕರು ಮಾತ್ರ ಸ್ವಲ್ಪ ಮಟ್ಟಿಗೆ ತೌಡನ್ನು ಉಪಯೋಗಿಸಿಕೊಳ್ಳುತ್ತಾರೆ. ಉಳಿದ ತೌಡು ದನದ ಮೇವಾಗಿ ಉಪಯೋಗಿಸಲ್ಪಡುತ್ತಿದೆ. ದೇಶದಲ್ಲಿ ಉತ್ಪತ್ತಿಯಾಗುವ 30 ಲಕ್ಷ ಟನ್ ಅಕ್ಕಿ ತೌಡಿನ ಪೈಕಿ ಕೇವಲ 3 ಲಕ್ಷ ಟನ್‌ಗಳಷ್ಟನ್ನು ಎಣ್ಣೆ ತೆಗೆಯಲು ಉಪಯೋಗಿಸಲಾಗುತ್ತಿದೆ. ಅದರಿಂದ 50 ಸಾವಿರ ಟನ್‌ಗಳಿಗಿಂತಲೂ ಕಡಿಮೆಯಾಗಿ ಎಣ್ಣೆ

ಪಡೆಯಲಾಗುತ್ತಿದೆ. ನಮ್ಮ ದೇಶದಲ್ಲಿ ದೊರೆಯುವ ತೌಡಿನಿಂದ ಸುಮಾರು 3 ಲಕ್ಷ ಟನ್‌ಗಳಷ್ಟು ಉಪಯುಕ್ತವಾದ ಎಣ್ಣೆ ಪಡೆಯಬಹುದಾಗಿದೆ. ಅಕ್ಕಿ ಗಿರಣಿಗಳನ್ನು ನವೀಕರಿಸಿ ಅವುಗಳು ತೌಡಿನಿಂದ ಎಣ್ಣೆ ತೆಗೆಯುವ ಏರ್ಪಾಡುಮಾಡಿದರೆ, ಆ ಎಣ್ಣೆಯನ್ನು ಕೈಗಾರಿಕಾ ವಸ್ತುಗಳ ಉತ್ಪಾದನೆಯಲ್ಲಿ ಉಪಯೋಗಿಸಿಕೊಳ್ಳಬಹುದು. ಆಗ ಕೈಗಾರಿಕೆಗಳು ಉಪಯೋಗಿಸಿಕೊಳ್ಳುತ್ತಿರುವ ಉಳಿದ ಖಾದ್ಯತೈಲಗಳಿಗೆ ಬೇಡಿಕೆ ಕಡಿಮೆಯಾಗಿ ಅವು ಸಾಮಾನ್ಯ ಜನರ ಉಪಯೋಗಕ್ಕೆ ದೊರೆಯುತ್ತವೆ.

ದೇಶದಲ್ಲಿರುವ ಬಹುಪಾಲು ಜನರಿಗೆ ಅಧಿಕ ಬೆಲೆಯ ಕಾರಣ ತುಪ್ಪ ಮತ್ತು ಬೆಣ್ಣೆ ಕೊಳ್ಳುವ ಸಾಮರ್ಥ್ಯವಿಲ್ಲ. ಅನೇಕರು ವನಸ್ಪತಿಯನ್ನು ತುಪ್ಪವನ್ನಾಗಿ ಬಳಸಲಾರಂಭಿಸಿದ್ದಾರೆ. ಆಹಾರ ವಸ್ತುಗಳನ್ನು ಪರಿಷ್ಕರಣ ಮಾಡುವ ಕೈಗಾರಿಕೆಗಳ ಪೈಕಿ ವನಸ್ಪತಿಯ ಉತ್ಪಾದನೆ ಭಾರತದಲ್ಲಿ ಎರಡನೆ ದೊಡ್ಡ ಕೈಗಾರಿಕೆಯಾಗಿ ಬೆಳೆದಿದೆ. ಸುಮಾರು 14 ಲಕ್ಷ ಟನ್‌ಗಳಷ್ಟು ವನಸ್ಪತಿ ಉತ್ಪಾದನೆ ಮಾಡುವ ಶಕ್ತಿ ನಮ್ಮ ದೇಶದಲ್ಲಿದೆ. ಆದರೆ ಅನೇಕ ಸಲ ವನಸ್ಪತಿ ತಯಾರಿಸುವ ಕಾರ್ಖಾನೆಗಳು ತಮ್ಮ ಸಂಪೂರ್ಣ ಸಾಮರ್ಥ್ಯ ಬಳಸಿಕೊಳ್ಳಲಾರದೆ ಹೋಗಿವೆ. ಏಕೆಂದರೆ ಅವಕ್ಕೆ ಸಾಕಷ್ಟು ಪ್ರಮಾಣದಲ್ಲಿ ಕಡಲೆಕಾಯಿ ಎಣ್ಣೆ, ಸೋಯಾ ಅವರೆ ಎಣ್ಣೆ, ಸೂರ್ಯಕಾಂತಿ ಬೀಜದ ಎಣ್ಣೆ, ಹತ್ತಿ ಬೀಜದ ಎಣ್ಣೆ ಮತ್ತು ಎಳ್ಳೆಣ್ಣೆ ದೊರೆಯುತ್ತಿಲ್ಲ. ಇದರಿಂದ ವನಸ್ಪತಿ ತಯಾರಿಕೆ ಕಡಿಮೆ ಆಗಿದೆ. ಜೊತೆಗೆ ಬೆಲೆ ಉನ್ನತ ಮಟ್ಟದಲ್ಲಿದೆ. ವನಸ್ಪತಿ ತಯಾರಿಕೆಯ ವೆಚ್ಚದಲ್ಲಿ ಸೇಕಡ 80 ಭಾಗ ಖಾದ್ಯ ತೈಲಗಳ ಬಳಕೆಯಿಂದ ಉಂಟಾಗುತ್ತದೆ. ಅದರ ಪರಿಣಾಮವಾಗಿ, ವನಸ್ಪತಿಗೆ ಬೇಡಿಕೆ ಇದ್ದರೂ, ವನಸ್ಪತಿ ತಯಾರಕರು ಬೆಲೆ ಇಳಿಸಿ ಜನಸಾಮಾನ್ಯರ ಕೊಳ್ಳುವ ಶಕ್ತಿಗನುಸಾರವಾಗಿ ವನಸ್ಪತಿ ಸರಬರಾಜು ಮಾಡುವ ಸಾಮರ್ಥ್ಯಹೊಂದಿಲ್ಲ.

ಆದುದರಿಂದ ನಮ್ಮ ದೇಶದ ಈಗಿನ ಆವಶ್ಯಕತೆಯನ್ನು ಪೂರೈಸಬೇಕಾದರೆ ಖಾದ್ಯತೈಲಗಳ ಉತ್ಪಾದನೆಯನ್ನು ಹೆಚ್ಚಿಸುವುದೊಂದೆ ಮಾರ್ಗವಾಗಿದೆ. ಖಾದ್ಯತೈಲಗಳ ಉತ್ಪಾದನೆ ಹೆಚ್ಚಬೇಕಾದರೆ ಎಣ್ಣೆಬೀಜಗಳ ಬೆಳೆ ಹೆಚ್ಚಾಗಬೇಕು. ಆದುದರಿಂದ ವ್ಯವಸಾಯ ಕ್ಷೇತ್ರದಲ್ಲಿ ಎಣ್ಣೆ ಬೀಜಗಳ ಬೆಳೆಗೆ ಆದ್ಯತೆ ಕೊಡುವುದು ಅತ್ಯಾವಶ್ಯಕ.

ವಿ. ಎನ್. ಶೇಷಗಿರಿರಾವ್

# ಅನುಭಾವ

'ಅನುಭಾವ' ಅಥವಾ ಮಿಸ್ಟಿಸಿಸಂ (Mysticism) ಎಂಬ ಪದಕ್ಕೆ ಅನೇಕ ಅರ್ಥಗಳಿವೆ. ಬೇರೆಬೇರೆ ಶಾಸ್ತ್ರಗಳಲ್ಲಿ, ವಿಚಾರಗಳಲ್ಲಿ ಬೇರೆಬೇರೆ ಅರ್ಥವನ್ನು ಈ ಪದಕ್ಕೆ ಕೊಡಲಾಗಿದೆ. ಮಾಯ, ಮಂತ್ರ, ಹಗಲುಕನಸು, ಪವಾಡ, ಅಮಲೇರಿಕೆ, ಸ್ತಂಭನ, ಮೋಹಿನೀ ವಿದ್ಯೆ ಮುಂತಾದವುಗಳು 'ಅನುಭಾವ' ಪದಕ್ಕೆ ಪರ್ಯಾಯವಾಗಿ ಹೇಳುವ ಸಾಮಾನ್ಯ ಅರ್ಥಗಳು. "ತಪ್ಪು ಅಧ್ಯಾತ್ಮಶಾಸ್ತ್ರ" (Bad Metaphysics) ಎಂಬ ತಪ್ಪು ಅರ್ಥವನ್ನೂ[1] ಈ ಪದಕ್ಕೆ ಕೊಡಲಾಗಿದೆ.

ಆದರೆ 'ಅನುಭಾವ' ದ ನೈಜವಾದ ಅರ್ಥವನ್ನು ಇಲ್ಲಿ ಮೊದಲು ತಿಳಿಯುವುದು ಅತ್ಯಾವಶ್ಯಕ. 'ಅನುಭಾವ' ಅಥವಾ 'ಮಿಸ್ಟಿಸಿಸಮ್'ನ ನೈಜವಾದ ಅರ್ಥವನ್ನು ಮೇಲೆ ಹೇಳಿದ ಯಾವುದೇ ಸಾಮಾನ್ಯ ಅರ್ಥವೂ ತಿಳಿಸಲು ಅಸಮರ್ಥವಾಗಿದೆ ; ಅಷ್ಟೇಕೆ, ಮೇಲೆ ಹೇಳಿದ ಯಾವ ಅರ್ಥವೂ ಇಲ್ಲಿ ವಿವರಿಸಿರುವ 'ಅನುಭಾವ'ಕ್ಕೆ ಅನ್ವಯವಾಗುವುದಿಲ್ಲ. 'ಅನುಭಾವ'ವನ್ನು ವಿಚಾರಮಾಡುವುದಕ್ಕೆ ಮುಂಚೆ ಈ ಅಂಶವನ್ನು ಸ್ಪಷ್ಟವಾಗಿ ಮನದಲ್ಲಿ ಹಿಡಿದಿಡಬೇಕು. ಅನುಭಾವದ ನೈಜ ಹಾಗೂ ಸ್ಪಷ್ಟವಾದ ಅರ್ಥವನ್ನು ಓದುಗರಿಗೆ ತಿಳಿಸುವಲ್ಲಿ ಅಂಡರ್ ಹಿಲ್ ಎಂಬ ಲೇಖಕಿ ತುಂಬ ಹೆಣಗಿದ್ದಾರೆ.[2]

ಈ ಜಗತ್ತಿನಲ್ಲಿ ಮೈದಾಳಿರುವ ದೈವಿಕ ನಿಯಮಗಳನ್ನು ಶ್ರದ್ಧಾಭಕ್ತಿಗಳಿಂದ ಮನನ ಮಾಡಿ ಅವನ್ನು ನಿತ್ಯಜೀವನದ ಆಧಾರ ಸೂತ್ರಗಳನ್ನಾಗಿ ಮಾಡಿಕೊಂಡು ತನ್ಮೂಲಕ ಆವಿರ್ಭವಿಸುವ ದಿವ್ಯಾನಂದದಲ್ಲಿ ಮುಳುಗಿ ತನ್ನ ಅಲ್ಪತನವನ್ನೂ ಮರೆತು ಪರಮಾತ್ಮಸಾಯುಜ್ಯವನ್ನು ಪಡೆಯುವುದೇ ಅನುಭಾವ. ಶುದ್ಧ ಆಧ್ಯಾತ್ಮಿಕ ಜೀವನಶಾಸ್ತ್ರವೇ 'ಅನುಭಾವ'[3]. ಇದೇ ಅನುಭಾವದ ಯುಕ್ತ ಅರ್ಥ. ಈ ಅರ್ಥವನ್ನು ಇತರ ಸಾಮಾನ್ಯ ಹಾಗೂ ತಪ್ಪು ಅರ್ಥಗಳಿಂದ ಪ್ರತ್ಯೇಕಿಸಿಕೊಳ್ಳಬೇಕು.

ಹೀಗೆ ಸರ್ವಶಕ್ತವೂ ಸರ್ವಜ್ಞವೂ, ಮಹಾಚೇತನವೂ ಆದ ದೇವರೇ ಅನುಭಾವಿಯ ಸ್ಫೂರ್ತಿಯ ನೆಲೆ; ಪ್ರೇಮತತ್ತ್ವದ ಮಹಾಮೇರು, ಪ್ರೇಮವೇ ಅನುಭಾವಿಯ ಜೀವ ಸರ್ವಸ್ವ.

---

1 ನೋಡಿ : E. Underhill ; *Mysticism* (Methuen & Co. Ltd. 1926), ಪೀಠಿಕೆ, ಪು. 10

2 ಅದೇ, ಪೀಠಿಕೆ

3 ಅದೇ, ಪು. 10

ಭಗವಂತ ಏಕ, ಪ್ರೇಮಪೂರಿತ, ಕೃಪಾಪರಿಪೂರ್ಣ, ಜಾತಿಕುಲಲಿಂಗಭೇದ ಇಲ್ಲದೆ ಎಲ್ಲರಿಗೂ ಒಲಿಯುವವನು. ಪ್ರೇಮಸ್ವರೂಪಿಯಾದ ಪರಮಾತ್ಮನಲ್ಲಿ ತನ್ಮಯರಾಗಿ ತಮ್ಮ ಅಲ್ಪತನವನ್ನು ಮರೆತು ಆನಂದಸಾಗರದ ಆಳದಲ್ಲಿ ಮುಳುಗಿ, ಅದರಿಂದ ಉಂಟಾಗುವ ಮಹದಾನಂದವನ್ನು ಆಸ್ವಾದಿಸಿರಿ. ಜೀವನದ ಹಾದಿಯನ್ನು ತಿದ್ದಿಕೊಳ್ಳಿ ; ಲೌಕಿಕ ಪ್ರೇಮವನ್ನು ದೈವೀ ಪ್ರೇಮವನ್ನಾಗಿ ಉದಾತ್ತೀಕರಿಸಿ. ಸಕಲ ಕಲ್ಯಾಣಗುಣ ಪರಿಪೂರ್ಣನೂ ಆನಂದಸ್ವರೂಪನೂ ದಯಾರ್ದ್ರಹೃದಯನೂ ಕೋಮಲನೂ ಸುಕುಮಾರನೂ ಸುಂದರನೂ ಸತ್ಯನೂ ಜ್ಞಾನಸ್ವರೂಪಿಯೂ ಆದ ಪರಮಾತ್ಮನ ಪಾದಪದ್ಮಗಳ ಆಸರೆಯಲ್ಲಿ ಬದುಕಿ ದೈವತ್ವಕ್ಕೆ ಏರಿ–ಎಂಬುದೇ ಅನುಭಾವಿಗಳ ದಿವ್ಯಬೋಧೆ.

ಈ ಪರಮ ಪವಿತ್ರವಾದ ಪ್ರೀತಿಯ ವಸ್ತು ಕ್ರೈಸ್ತಧರ್ಮದ ದೇವರಾಗಿರಬಹುದು ; ವಿಶ್ವಾತ್ಮಕವಾದದ ವಿಶ್ವಾತ್ಮನಾಗಿರಬಹುದು ; ಅಥವಾ ತತ್ತ್ವಶಾಸ್ತ್ರದ ಪರಬ್ರಹ್ಮವಾಗಿರಬಹುದು. ನಾವು ಏನು ಬೇಕಾದರೂ ಇರಬಹುದು. ಇಂಥ ದೇವರೊಡನೆ ಭಾವಾತ್ಮಕವಾದ ಐಕ್ಯವೇ "ಅನುಭಾವ" ಎಂದು ಅಂಡರ್‌ಹಿಲ್ ಬರೆಯುತ್ತಾರೆ.[4]

ದೈವದೊಡನೆ ಐಕ್ಯ ಎಂಬುದನ್ನು ವಿಚಾರದಲ್ಲಿ ಇಲ್ಲವೆ ಶುಷ್ಕ ಚರ್ಚೆಯಲ್ಲಿ ಅಥವಾ ಬರೀ ಬುದ್ಧಿಯ ಸ್ತರದಲ್ಲಿ ಸಿಲ್ಲಿಸದೆ ಅನುಭವದಲ್ಲಿ ಕಂಡುಕೊಳ್ಳಬೇಕು. ಇದು ಅನುಭಾವದಲ್ಲಿ ಬಹು ಮುಖ್ಯವಾದ ಅಂಶ.[5]

ಅನುಭಾವದಲ್ಲಿ ದೇವರು ಸ್ವಯಂಸಿದ್ಧ ತತ್ತ್ವ. 'ದೇವರಿದ್ದಾನೆಯೇ' ಎಂಬ ಶಂಕೆಗೆ ಅಲ್ಲಿ ಎಳ್ಳಷ್ಟೂ ಅವಕಾಶವಿಲ್ಲ. 'ದೇವರಿದ್ದಾನೋ ಇಲ್ಲವೊ ಎಂಬುದನ್ನು ವಿಚಾರಿಸಬೇಕು,' ಎಂಬ ತಾತ್ತ್ವಿಕನ ಸಂದೇಹಕ್ಕೆ ಅನುಭಾವಿ ಗಹಗಹಿಸಿ ನಗುತ್ತಾನೆ. 'ಎಲೈ ಭ್ರಾತೃ, ದೇವರಿರುವುದು ನೀನಿರುವಷ್ಟೇ ಸತ್ಯ. ನಾನು ನಿನ್ನನ್ನು ನೋಡುತ್ತಿರುವಂತೆಯೇ ದೇವರನ್ನೂ ನೋಡಿದ್ದೇನೆ,' ಎಂದು ಕೆಚ್ಚೆದೆಯಿಂದ ಅನುಭಾವಿ ಸಿಂಹನಾದ ಮಾಡುತ್ತಾನೆ.

ಶಾಂತವೂ ಅನಂತವೂ ಆದ ಒಂದು ತತ್ತ್ವವಿದೆ. ಅದೇ ದೇವರು. ಅದನ್ನು ಮೊದಲು ನಂಬಿ. ನಿಮ್ಮ ಸ್ವಾರ್ಥಪರ ಆಶೆಆಮಿಷಗಳನ್ನೆಲ್ಲ ಬದಿಗಿರಿಸಿ. ನಿಮ್ಮ ನಿಸ್ವಾರ್ಥ ಆಸೆಗಳ ನೆಲೆ ಪ್ರೇಮವಾಗಲಿ ; ಆ ಪ್ರೇಮ ಇತರ ಸೋದರ ಮಾನವರ ಆಶೋತ್ತರಗಳನ್ನು ಬಿಂಬಿಸಲಿ ; ಆಗ ನೀವು ತಪ್ಪಾಗಿ ತಿಳಿದುಕೊಂಡಿರುವ ಬಂಧನವನ್ನು ಮುರಿದು ಪಾರಾಗುವಿರಿ, ಸ್ವತಂತ್ರರಾಗುವಿರಿ ಎಂದು ಅನುಭಾವಿಗಳು ಲೋಕೋದ್ಧಾರಕ ಮಾತುಗಳನ್ನು ಆಡುತ್ತಾರೆ. ಅನುಭಾವದ ಗುಣಲಕ್ಷಣಗಳನ್ನು ಈ ರೀತಿ ವಿವರಿಸಬಹುದು.

1 ಅನಿರ್ವಚನೀಯತೆ : ತನಗಿಂತ ಭಿನ್ನವಾದ,[6] ಅತೀತವಾದ ಸತ್ಯವಾದ ದೇವರನ್ನು ಸಾಕ್ಷಾತ್ಕರಿಸಿಕೊಂಡ ಅನುಭಾವಿಗಳು ಪರಮಾನಂದವನ್ನು ಅನುಭವಿಸಿದರೂ ಆ

---

[4] ಅದೇ, ಪೀಠಿಕೆ, ಪು. 10

[5] ಅದೇ, ಪೀಠಿಕೆ, ಪು. 10

[6] ನೋಡಿ : Rudolf Otto, *The India of the Holy* (Oxford Uni. Press 1926), Trans : J.W. Harvey. ಪು. 29–30, 'The Wholly Other'

ಅನುಭವವನ್ನು ಸಂಪೂರ್ಣವಾಗಿ ವ್ಯಕ್ತಪಡಿಸಲು ಅಸಾಧ್ಯವೆಂದೂ ಮಾತಾಗಲಿ ಭಾಷೆಯಾಗಲಿ ಒಂದು ಅಸಮರ್ಥ ಉಪಕರಣವೆಂದೂ ಸ್ಪಷ್ಟವಾಗಿ ಒಪ್ಪಿಕೊಳ್ಳುತ್ತಾರೆ. ತಾವು ಹೇಳುವ ಅನುಭವವನ್ನು ಇತರರೂ ಅನುಭವಿಸಿಯೇ ತೀರಬೇಕೆಂದೂ ಆಗಲೇ 'ಅನುಭಾವ' ಎಂದರೆ ಏನೆಂಬುದು ಗೊತ್ತಾಗುವುದೆಂದೂ ನಿಷ್ಕಲ್ಮಷ ಹೃದಯದಿಂದ ತಿಳಿಸುತ್ತಾರೆ. ಈ ದಿವ್ಯಾನಂದ ವನ್ನು ಅಭಿವ್ಯಕ್ತಪಡಿಸುವುದರಲ್ಲಿ ಅಡಗಿರುವ ಕಷ್ಟವನ್ನು ಲೌಕಿಕ ಉದಾಹರಣೆಗಳನ್ನು ಕೊಡುವು ದರ ಮೂಲಕ ವ್ಯಕ್ತಪಡಿಸುತ್ತಾರೆ : ಪ್ರಣಯ ಪ್ರಣಯಿಗೆ ತಿಳಿಯುವುದೇ ಹೊರತು ಹಸಿಗೂಸಿ ಗೇನು ತಿಳಿದೀತು ? ಮಾವಿನ ಹಣ್ಣಿನ ರುಚಿಯನ್ನು ಸವಿದವನೇ ಬಲ್ಲ; ಮಾವಿನ ಹಣ್ಣಿಗೇ ಅಪರಿಚಿತನಾದವನು ಮಾವಿನ ಹಣ್ಣಿನ ರುಚಿಯನ್ನು ಎಂತು ಬಲ್ಲ? ಒಂದು ವೇಳೆ ಮಾವಿನ ಹಣ್ಣು ಹಾಗಿತ್ತು ಹೀಗಿತ್ತು ರುಚಿಯಾಗಿತ್ತು ಎಂದು ವರ್ಣಿಸಿದರೆ ಮಾವಿನ ಹಣ್ಣಿನ ಗಂಧ ರಸ ರೂಪಗಳನ್ನೇ ಕಾಣದವನ (ಅಂದರೆ ಮಾವಿನಹಣ್ಣಿನ ಅನುಭವ ಇಲ್ಲದವನ) ಮನಃಸ್ಥಿತಿಯನ್ನು ಯಾರಾದರೂ ಊಹಿಸಬಹುದು. ಕತ್ತೆ ಬಲ್ಲುದೆ ಕಸ್ತುರಿಯ ಪರಿಮಳವ ? ಬಂಜೆ ಬೇನೆಯನರಿ ಯುವಳೆ? ಎಂದು ಶಿವಶರಣೆಯಾದ ಅಕ್ಕಮಹಾದೇವಿ ಅನುಭಾವಿಯಲ್ಲದವನ ಮನಃಸ್ಥಿತಿಯನ್ನು ಬಹಳ ಚೆನ್ನಾಗಿ ವ್ಯಕ್ತಪಡಿಸುತ್ತಾಳೆ.

ಅನೇಕ ವೇಳೆ ಅನುಭಾವಿ ತನ್ನ ಅನುಭವದ ಪ್ರಖರತೆಯನ್ನು ತಡೆಯಲಾಗದೆ ವಿರೋಧಾ ಭಾಸದ ಮಾತುಗಳನ್ನು ಆಡುತ್ತಾನೆ. ಒಂದು ಬಗೆಯ ಅದಮ್ಯ ಶಕ್ತಿ ಅನುಭಾವಿಯಲ್ಲಿ ಆವಿರ್ಭವಿಸುತ್ತದೆ. ತನ್ನಲ್ಲಿ ಉರಿಯುತ್ತಿರುವ ದೈವಿಕ ಬೆಂಕಿ ತಾನು ತನ್ನ ಅನುಭವವನ್ನು ವ್ಯಕ್ತ ಪಡಿಸದಿದ್ದರೆ ತನ್ನನ್ನು ಸುಟ್ಟುಹಾಕೀತು, ಎಂದು ಅನುಭಾವಿ ತನ್ನ ಅನುಭವವನ್ನು ವ್ಯಕ್ತ ಪಡಿಸಬೇಕಾಗಿ ಬರುವ ಅನಿವಾರ್ಯತೆಯನ್ನು ತೋಡಿಕೊಳ್ಳುತ್ತಾನೆ.[7] ಆ ಅನುಭವವನ್ನು ವ್ಯಕ್ತ ಪಡಿಸಲು ಅವನು ಸಂಜ್ಞೆ ಮತ್ತು ಚಿಹ್ನೆಗಳನ್ನು ಒಳಗೊಂಡ ಪದ್ಯಮಾಧ್ಯಮವನ್ನೋ ಸಂಗೀತ ಮಾಧ್ಯಮವನ್ನೊ ಅವಶ್ಯಕವಾಗಿ ಆಶ್ರಯಿಸಬೇಕಾಗುತ್ತದೆ.[8] ಅನುಭಾವಿ ತಾನು ಅನುಭವಿಸಿದ ದಿವ್ಯಾನಂದವನ್ನು ಇತರರಿಗೆ ತಿಳಿಸಲು ಪ್ರಯತ್ನ ಪಡುವುದು ಹುಟ್ಟು ಕುರುಡನಿಗೆ ಬಣ್ಣವನ್ನು ಬೋಧಿಸಲು ಪ್ರಯತ್ನ ಪಡುವಷ್ಟೇ ಕಷ್ಟ. ಅಂದರೆ ಇಷ್ಟು ಹೇಳಿದ ಹಾಗಾಯಿತು. ಅನುಭಾವದ ತೀವ್ರತೆ, ಪ್ರಖರತೆ ಹಾಗೂ ಆಳವನ್ನು ವ್ಯಕ್ತಪಡಿಸಲು ಅನುಭಾವಿ ಉಪಯೋಗಿಸುವ ಭಾಷೆ ಯುಕ್ತವಾದ ಮಾಧ್ಯಮವಲ್ಲ. ಆದರೂ ಅವನ ಬಾಯಿಂದ ಬರುವ ವಿರೋಧಾಭಾಸದ ಉಕ್ತಿಗಳು, ಸಂಜ್ಞೆ, ಸಂಗೀತ ಇತ್ಯಾದಿಗಳು ಆತ ಅನುಭವಿಸಿದ ಅನುಭವವನ್ನು ಸೂಚಿಸುವ ಕೈಮರಗಳಿದ್ದಂತೆ ; ಅವೇ ಆತನ ಅನುಭವದ ಆಳವಲ್ಲ.

2 ಪ್ರಜ್ಞಾಸ್ಥಿತಿ : ಅನುಭಾವಿ ತಾನು ಅನುಭವಿಸಿದ ಪರಮಾನಂದವನ್ನು ಸಂಪೂರ್ಣ ವಾಗಿ ಭಾಷೆಯ ಮೂಲಕ ವ್ಯಕ್ತಪಡಿಸಲು ಅಸಮರ್ಥನಾದರೂ ತನಗಾದ ಅನುಭವ ಬರೀ ಭ್ರಮೆ, ಹಗಲುಕನಸು ಎಂದು ತಿಳಿಯುವುದಿಲ್ಲ. ತನಗಾದ ಅನುಭವ ಶುದ್ಧ ಅನುಭವ, ಭಗವಂತನ ಇಚ್ಛೆ ಮತ್ತು ಅನುಮತಿಯಿಂದಲೇ ಅದು ದೊರೆತಿದ್ದು, ಎಂದು ಖಂಡಿತವಾಗಿ ನಂಬಿರುತ್ತಾನೆ.

---

[7] ಅಂಡರ್‌ಹಿಲ್, ಪೂರ್ವೋಕ್ತ ಪು. 24

[8] ಅದೇ, ಪು. 95

ಅದರಲ್ಲಿ ಅವನಿಗೆ ಎಳ್ಳಷ್ಟೂ ಸಂಶಯವಿರುವುದಿಲ್ಲ. ತನಗಾದ ಅನುಭವ ಸೂರ್ಯಪ್ರಕಾಶದಷ್ಟು ಸುಸ್ಪಷ್ಟ ಹಾಗೂ ಖಂಡಿತ. ತಾನು ತನಗಿಂತ ಭಿನ್ನವಾದ ಶಕ್ತಿಯ ತೋಳ ತೆಕ್ಕೆಯಲ್ಲಿ ತನ್ನನ್ನೇ ಮರೆತದ್ದು, ಪ್ರೇಮಸಾಗರ ತನ್ನಲ್ಲಿ ಉಕ್ಕಿ ಹರಿದಿದ್ದು ಇವನ್ನು ಮರೆಯುವುದಾಗಲಿ, ಅನುಭವಿಸಿದ್ದೇ ಸುಳ್ಳು ಎಂದು ಕೈಕೊಡವಿಕೊಳ್ಳುವುದಾಗಲಿ, ಅವನ ಜಾಯಮಾನಕ್ಕೆ ಒಪ್ಪದು. ತನ್ನ ಪ್ರತಿಯೊಂದು ಅಂಗದ ಚಲನೆಗೆ ಆ ಶಕ್ತಿಯೇ ಕಾರಣ ಎಂಬ, ಆ ಶಕ್ತಿಯ ಅಧಿಕಾರವಾಣಿಯನ್ನು ನಿರಾಕರಿಸಲಸಮರ್ಥವಾದ ಸ್ಥಿತಿಯನ್ನೇ ವಿಲಿಯಂ ಜೇಮ್ಸ್ ಪ್ರಜ್ಞಾಸ್ಥಿತಿ ಎಂದು ಕರೆಯುತ್ತಾನೆ.[9]

3 ಅಶಾಶ್ವತತೆ : ಅನುಭಾವಿಯ ದಿವ್ಯಾನಂದ ಬಹಳ ಕಾಲ ಇರುವುದಿಲ್ಲ. ಅದು ಸುಮಾರು ಅರ್ಧ ಅಥವಾ ಒಂದು ಗಂಟೆ ಅಥವಾ ಹೆಚ್ಚೆಂದರೆ ಎರಡು ಗಂಟೆಗಳ ಕಾಲ ಮಾತ್ರ ಇರುತ್ತವೆ. ಆಮೇಲೆ ಅದು ವಿರಳವಾಗಿ, ಕ್ರಮೇಣ ಮಾಯವಾಗುತ್ತದೆ. ಹೀಗೆ ಈ ದಿವ್ಯಾನಂದ ಬಹಳ ಕಾಲ ಮುಂದುವರಿಯದೆ ಇರುವುದರಿಂದಲೇ, ವಿಲಿಯಂ ಜೇಮ್ಸ್, ಅನುಭಾವದ ಈ ಗುಣಲಕ್ಷಣವನ್ನು ಅಶಾಶ್ವತತೆ ಅಥವಾ ಕ್ಷಣಿಕತೆ ಎಂದು ಕರೆಯುತ್ತಾನೆ.[10] ಅನುಭಾವಿ ಅನುಭವಿಸುವ ದಿವ್ಯಾನಂದ ಕ್ಷಣಿಕವಾದರೂ, ಅದರ ಪ್ರಭಾವ ತಾನು ಬದುಕಿರುವ ಕಡೆಯ ತನಕ ಅಚ್ಚಳಿಯದೆ ಹಾಗೇ ಇರುತ್ತದೆ. ಈ ಪ್ರಭಾವದಿಂದಲೇ ಅವನು ತನ್ನ ಭವಿಷ್ಯವನ್ನು ರೂಪಿಸಿಕೊಳ್ಳುತ್ತಾನೆ. ಇಂಥ ಅನುಭವ ಪುನರಾವೃತ್ತಿ ಆಗಬಹುದು ಅಥವಾ ಆಗದಿರಬಹುದು. ಆದರೆ ಅದರ ಪ್ರಭಾವದ ಅಪ್ಪುಗೆಯಿಂದ ಅವನು ಬಿಡಿಸಿಕೊಳ್ಳಲಾರ.

4 **ಜಡತ್ವ ಅಥವಾ ಅಪ್ರವರ್ತಕತೆ** : ಜೇಮ್ಸ್ ಅನುಭಾವದ ನಾಲ್ಕನೆಯ ಗುಣವನ್ನು ಜಡತ್ವ ಎಂದು ಕರೆಯುತ್ತಾನೆ.[11] ಅನುಭಾವಿ ದಿವ್ಯಾನಂದವನ್ನು ಪಡೆಯಲು ಸಾಧ್ಯವಾದ್ದು ದೈವೀ ಶಕ್ತಿ ಅವನನ್ನಾರಿಸಿಕೊಂಡಿದ್ದರಿಂದ. ಆ ಪರಮಾನಂದವನ್ನು ಪಡೆಯುವಲ್ಲಿ ಅವನ ಪ್ರಯತ್ನ ಮುಖ್ಯತಃ ಗೌಣ. ದೈವೀಶಕ್ತಿಯ ಸತ್ಪ್ರೇರಣೆ ಇಲ್ಲದೆ ಹುಲ್ಲುಕಡ್ಡಿಯೂ ಅಲುಗಾಡದು. ಹಾಗೆಯೇ ಪರಮಾನಂದವನ್ನು ಪಡೆಯುವಲ್ಲಿ ಅವನ ಪ್ರಯತ್ನಕ್ಕಿಂತ ದೈವೀ ಶಕ್ತಿಯ ಸತ್ಪ್ರೇರಣೆ ವರ್ಣಿಸಲು ಅಸದಳ. ಈ ಅರ್ಥದಲ್ಲಿ ತನ್ನ ಪ್ರಯತ್ನಗಳೆಲ್ಲ ನಿಷ್ಕ್ರಿಯವಾದವು ಎಂದು ಅನುಭಾವಿ ತಿಳಿಯುತ್ತಾನೆ.

ಇಲ್ಲಿ ಒಂದು ಅಂಶವನ್ನು ಗಮನಿಸಬೇಕು. ಅನುಭಾವಿ ತಾನು ಅನುಭಾವಿ ಆಗುವುದಕ್ಕೆ ಮುಂಚೆ ಅನುಭಾವದ ಬಗ್ಗೆ ಉಪೇಕ್ಷೆಯಿಂದ ಇರುತ್ತಾನೆ, ಉದಾಸೀನನಾಗಿರುತ್ತಾನೆ ಎಂದು 'ಜಡತ್ವ' ಪದಕ್ಕೆ ಅರ್ಥ ಮಾಡಬಾರದು. ತಾನು ಆ ಪರಮಾನಂದದ ಅನುಭವವನ್ನು ಪಡೆಯಲು ಆಯಾ ಧರ್ಮದಲ್ಲಿ ನಿಶ್ಚಯ ಮಾಡಿರುವ ಅನುಷ್ಠಾನ ಮಾರ್ಗವನ್ನು ಅನುದಿನವೂ ಆಚರಿಸುತ್ತಿದ್ದರೂ ಆ ಪರಾಶಕ್ತಿಯ ದಯೆ ತನ್ನಮೇಲೆ ಬೀಳದಿರಬಹುದು. ಈ ದೃಷ್ಟಿಯಿಂದ ತಾನು ಆಚರಿಸುವ ಧಾರ್ಮಿಕ ಕಟ್ಟುಪಾಡುಗಳೆಲ್ಲ ನಿಷ್ಕ್ರಿಯವಾದವೆಂದು ಅರ್ಥವೇ ಹೊರತು ತಾನು ನಿರ್ಲಕ್ಷನೆಂದಾಗಲಿ, ಯಾವ ಆಚರಣೆಯನ್ನೂ

---

[9] ನೋಡಿ: ವಿಲಿಯಂ ಜೇಮ್ಸ್, *The Varieties of Religious experience* (The Modern Library), ಪು. 371

[10] ಅದೇ, ಪು. 372

[11] ಅದೇ, ಪು. 372

ಮಾಡದೆ ಉಂಡಾಡಿಯಂತೆ ಇರುತ್ತಾನೆಂದಾಗಲಿ ಅರ್ಥವಲ್ಲ.

5 **ಐಕ್ಯಭಾವ:** ಅನುಭಾವ ಧರ್ಮದ ಇನ್ನೊಂದು ವಿಶಿಷ್ಟ ಲಕ್ಷಣ ಐಕ್ಯಭಾವ.[12] ಈ ಅನುಭವದಲ್ಲಿ ಭಿನ್ನತೆ ಎಂಬುದಕ್ಕೆ ಸ್ವಲ್ಪವೂ ಅವಕಾಶವಿಲ್ಲ. ನಾವು ನಮ್ಮ ಅಹಂಕಾರ ಪ್ರಪಂಚದಲ್ಲಿ ಕಾಣುವ ಮನುಷ್ಯ ಮನುಷ್ಯರ ನಡುವಿನ ವ್ಯತ್ಯಾಸ, ಪ್ರಾಣಿ ಮತ್ತು ಮನುಷ್ಯರ ನಡುವಿನ ವ್ಯತ್ಯಾಸ, ಪ್ರಾಣಿಗಳು–ಕ್ಷುದ್ರಜಂತುಗಳ ನಡುವಿನ ವ್ಯತ್ಯಾಸ, ಶ್ರೇಷ್ಠ–ನಿಕೃಷ್ಟ ಭಾವ ಇವಕ್ಕೆ ಅನುಭಾವದಲ್ಲಿ ಎಡೆಯಿಲ್ಲ. ಆತನಿಗೆ ಎಲ್ಲಾ ಜೀವಿಗಳೂ ಒಂದೇ ಎಂಬ ದಿವ್ಯ ಬೋಧೆಯುಂಟಾಗಿರುತ್ತದೆ. ಅನುಭಾವಿ ಎಲ್ಲ ವಸ್ತುಗಳಲ್ಲಿರುವ ತತ್ತ್ವ ಒಂದೇ (ದೇವರು) ಹಾಗೂ ಒಂದೇ ತತ್ತ್ವ ಎಲ್ಲ ವಸ್ತುಗಳಲ್ಲೂ ಇವೆ ಎಂದು ಪ್ರಬಲವಾಗಿ ನಂಬಿರುತ್ತಾನೆ. 'ಅದ್ವೈತ' ಭಾವ ಅಚಲ ಹಾಗೂ ಧೃಢವಾಗಿ ಆತನಲ್ಲಿ ನೆಲೆನಿಂತಿರುತ್ತವೆ.

6 **ಕಾಲಪ್ರಜ್ಞೆ ಇಲ್ಲದಿರುವಿಕೆ :** ಅನುಭಾವಿ ತಾನು ದೈವೀಶಕ್ತಿಯ ಪ್ರಭಾವಕ್ಕೊಳಗಾಗಿರುವಾಗ ಕಾಲದ ಪ್ರಜ್ಞೆಯನ್ನು ಕಳದುಕೊಂಡಿರುತ್ತಾನೆ.[13] ಸಾಮಾನ್ಯ ಜನರು ಕಾಲವನ್ನು ಭೂತ, ವರ್ತಮಾನ ಹಾಗೂ ಭವಿಷ್ಯತ್ ಎಂದು ವಿಭಾಗಮಾಡಿಕೊಂಡು ಕಾರ್ಯತತ್ಪರರಾದರೆ, ಅನುಭಾವಿಗಳಿಗೆ ಈ ವಿಭಾಗವೇ ಇಲ್ಲ. ಅವರಿಗೆ 'ಎಲ್ಲವೂ ಈಗಲೇ' ಎಂಬ ಅನುಭವವಾಗುತ್ತವೆ.

7 **ಅಹಂಭಾವ ನಿಜವಾದ ಆತ್ಮನಲ್ಲ :** ವ್ಯವಹಾರದಲ್ಲಿ 'ನಾನು' 'ನನ್ನದು' ಇತ್ಯಾದಿ ಸ್ವಾರ್ಥಪರ ಭಾವಗಳಿಂದ ಮಾನವರು ವ್ಯವಹಾರ ಮಾಡುತ್ತಾರೆ, 'ಅಹಂಪ್ರಜ್ಞೆ' ವ್ಯವಹಾರ ಕಾಲದಲ್ಲಿ ಎಲ್ಲೆಲ್ಲೂ ಕಂಡುಬರುತ್ತದೆ. ಆದರೆ ಈ 'ಅಹಂಪ್ರಜ್ಞೆ' ಅಂತಿಮ ಸತ್ಯವಲ್ಲ. ಅಂತಿಮ ಸತ್ಯ 'ನಾನು', 'ನನ್ನದು' ಮುಂತಾದ ಸ್ವಾರ್ಥಪರ ಭಾವನೆಗಳನ್ನು ಮೀರಿದ್ದು ಎಂಬುದು ಅನುಭಾವಿಯ ದೃಢ ನಂಬಿಕೆ.

8 **ಪ್ರತಿಭಾನ ಅಥವಾ ಅಂತರ್‌ಬೋಧೆ :** ಅನುಭಾವದ ಮತ್ತೊಂದು ವಿಶಿಷ್ಟ ಅಂಶವೆಂದರೆ, ಶುಷ್ಕತರ್ಕಕ್ಕೆ ಬೆನ್ನು ತಿರುಗಿಸುವುದು.[14] ಜೀವನ ಎಂಬುದು ತರ್ಕಕ್ಕಿಂತ ಮಿಗಿಲಾದ್ದು. ಬುದ್ಧಿ ಅಥವಾ ರೀಸನ್ ಒಂದೇ ಜೀವನದ ಅಂತರಾಳದ ಅಳತೆಗೋಲಲ್ಲ. ಬುದ್ಧಿಯನ್ನು ಮೀರಿದ, ಬುದ್ಧಿಗೆ ತಳಪಾಯವಾದ ಅಂತರ್‌ಬೋಧೆ ಅಥವಾ ಪ್ರತಿಭಾನ ಎಂಬ ಶ್ರೇಷ್ಠಮಟ್ಟದ

---

[12] ನೋಡಿ : ಬಟ್ರ್ರಂಡ್ ರಸಲ್, *Mysticism and Logic and other Essays* (George Allen & Unwin Ltd.), ಪು. 10, ಹಾಗೂ Rudalf Otto, *The Idea of the Holy* (Oxford Uni. Press, 1926), Trans : J. W. Harvey, ಪು. 22

[13] ಅದೇ, ಪು, 10

[14] ಅದೇ ಪು. 9

[15] Rudolf Otto : *The Idea of the Holy* (Oxford University Press, 1926) Trans. : Harvey, ಪು.22

ಜ್ಞಾನ ಉಂಟು. ಈ ಪ್ರತಿಭಾನವನ್ನುಳಿದು ಇನ್ನೊಂದು ಪ್ರಮಾಣವಿಲ್ಲ. ಪ್ರತಿಭಾನ ದೋಷರಹಿತವಾದ್ದು. ಅದರ ದಿವ್ಯಬೋಧೆ ಸರ್ವಸಮ್ಮತವಾದ್ದು. ಪ್ರತಿಭಾನವನ್ನು ಪರೀಕ್ಷಿಸುವ ಅಥವಾ ಒರೆಪಚ್ಚುವ ಕಾರ್ಯ ಬುದ್ಧಿಯ ಸಾಮರ್ಥ್ಯಕ್ಕೆ ಮೀರಿದ್ದು. ಪ್ರತಿಭಾನ ದೋಷರಹಿತವಾದ್ದರಿಂದ ಅದನ್ನು ಪರೀಕ್ಷಿಸಬೇಕೆಂಬುದೇ ಹುಚ್ಚು ಕೆಲಸ ಹಾಗೂ ಮೂಢತನ. ಬುದ್ಧಿ ಪದರಪದರವಾಗಿ ವಸ್ತುಗಳನ್ನು ವಿಭಾಗಿಸುತ್ತಾ ಅವುಗಳ ಜ್ಞಾನವನ್ನು ಕೊಡುವುದರಲ್ಲಿ ಸಮರ್ಥವಾಗಿದೆಯೇ ಹೊರತು, ವಸ್ತುವಿನ ಅಂತರಾಳವನ್ನು ಪ್ರವೇಶಿಸುವ ಸಾಮರ್ಥ್ಯ ಅದಕ್ಕಿಲ್ಲ. ಆ ಸಾಮರ್ಥ್ಯ ಪ್ರತಿಭಾನದ ವಿನಾ ಮತ್ತೊಂದು ಜ್ಞಾನಮಾರ್ಗಕ್ಕಿಲ್ಲ. ಪ್ರತಿಭಾನದ ಶ್ರೇಷ್ಠತೆಯನ್ನು ತೋರಿಸುವಲ್ಲಿ ಉಮರ್ ಖಯ್ಯಾಂ ಬುದ್ಧಿವಂತರೆನಿಸಿಕೊಂಡ ವರನ್ನು, ಒಂದು ದಾರಿಯಿಂದ ಬಂದು ಪುನಃ ಅದೇ ದಾರಿಯಲ್ಲಿ ಮರಳಿ ಬಂದ ಮೂರ್ಖರು, ಎನ್ನುವಷ್ಟರ ಮಟ್ಟಿಗೆ ಕರ್ಕಶವಾಗಿ ನುಡಿದಿದ್ದಾನೆ.

9 **ಅನಿಷ್ಟ ನಿರಾಕರಣೆ** : ಪ್ರಪಂಚವೆಲ್ಲವೂ ದೈವೀಶಕ್ತಿಯಿಂದ ತುಂಬಿತುಳುಕುತ್ತಿದೆ ಯೆಂದು ಅನುಭಾವಿ ಅಚಲವಾಗಿ ನಂಬಿರುವುದರಿಂದ, ಪ್ರಪಂಚದಲ್ಲಿ ಅನಿಷ್ಟವಿದೆ, ಪಾಪವಿದೆ ಎಂಬುದನ್ನು ಹೃದಯಪೂರ್ವಕವಾಗಿ ಒಪ್ಪಿಕೊಳ್ಳಲಾರ. ಅನಿಷ್ಟ ಎಂಬುದು ಬರಿಯ ಭ್ರಮೆ ಯಷ್ಟೆ. ಅದು ಭ್ರಮೆಯಾಗಿ ಕಾಣಲು ಕಾರಣವೆಂದರೆ ಕತ್ತರಿಶಕ್ತಿಯಿಂದ ಕೆಲಸಮಾಡುವ ಬುದ್ಧಿ. ಬುದ್ಧಿಯ ಈ ಛಿದ್ರ ಶಕ್ತಿಯನ್ನು ನಿಯಂತ್ರಿಸಿದಾಗ ಪ್ರಪಂಚದಲ್ಲಿ ಅನಿಷ್ಟವೇ ಇಲ್ಲ ಎಂಬುದು ಅಂತರ್ಬೋಧೆಗೆ ಗೋಚರಿಸುತ್ತದೆ ಎಂದು ತಿಳಿಯುವ ಅನುಭಾವಿ ಪ್ರಪಂಚ ದುಷ್ಟಮಯ ವಾಗಿದೆ ಎಂಬುದನ್ನು ನಿರಾಕರಿಸುತ್ತಾನೆ.[16]

ಅನುಭಾವದ ಈ ಗುಣಲಕ್ಷಣಗಳಿಗೆ ಅಂಡರ್‌ಹಿಲ್ ಇನ್ನೂ ಕೆಲವನ್ನು ಸೇರಿಸಿ ಜೇಮ್ಸ್ ಹೇಳುವ ಚತುರ್ವಿಧ ಲಕ್ಷಣದ ಬಗ್ಗೆ ಅಸಂತೃಪ್ತಿಯನ್ನು ವ್ಯಕ್ತಪಡಿಸುತ್ತಾರೆ[17].

10 ಅನುಭಾವ ಮುಖ್ಯತಃ ಅನುಷ್ಠಾನಯೋಗ್ಯ ಹಾಗೂ ಕ್ರಿಯಾತ್ಮಕ. ಜೇಮ್ಸ್ ಹೇಳಿದಂತೆ, ಅದು ನಿಷ್ಕ್ರಿಯವಾದ್ದಲ್ಲ. ಅನುಭಾವ ಬರೀ ಮಾತಿನ ಅಥವಾ ವಿಚಾರದ ಇಂದ್ರಜಾಲವಲ್ಲ ; ಅದು ಒಣಚರ್ಚೆಯಲ್ಲ ; ಕೆಲಸಕ್ಕೆ ಬಾರದ ಹರಟೆಯಲ್ಲ ; ಅದು ಪರಿಪೂರ್ಣ ಜೀವನದ ಆನಂದದ ಬುಗ್ಗೆ ಸ್ಫೂರ್ತಿಯ ಸೆಲೆ, ಉಗಮಸ್ಥಾನ.[18]

11 ಅನುಭಾವ ಅತೀತವಾದ್ದು ಹಾಗೂ ಆಧ್ಯಾತ್ಮಿಕವಾದ್ದು.[19] ಅನುಭಾವ ಅಭಿಮತವಲ್ಲ ; ತತ್ತ್ವಜ್ಞಾನವಲ್ಲ ; ಅನುಷ್ಠಾನ ಯೋಗ್ಯವೂ ಪ್ರಾಯೋಗಿಕವೂ ಅದ್ದು; ಅಪರೋಕ್ಷಜ್ಞಾನ ; ಊಹೆ ಅಥವಾ ಅನುಮಾನವಲ್ಲ.

---

[16] ಬರ್ಟ್ರಂಡ್ ರಸೆಲ್, *Mysticism and Logic and other Essays* ಪು. 10–11

[17] ಅಂಡರ್‌ಹಿಲ್, *Mysticism* (Methuen & Co. Ltd., London), P. 95

[18] ಅದೇ, ಪು. 96

[19] ಅದೇ, ಪು. 96

12 ಅನುಭಾವದ ಬಹುಮುಖ್ಯ ಲಕ್ಷಣ ಹಾಗೂ ಮಾರ್ಗ ಪ್ರೇಮ. ಪ್ರೇಮ ಇಲ್ಲಿ ಸ್ವಾರ್ಥವಲ್ಲ. ದಿವ್ಯ ಪ್ರೇಮದೆಡೆಗೆ ನಮ್ಮನ್ನು ನಡೆಸುವುದು ಹೃದಯವೇ ಹೊರತು ಬುದ್ಧಿ ಅಲ್ಲ. ಅನುಭಾವಿ ಯಾವ ಆಸೆ ಆಮಿಷಗಳನ್ನೂ ಮುಂದೊಡ್ಡುವುದಿಲ್ಲ ; ಯಾವ ಭೌತಿಕ ಸುಖಸಾಧನಗಳನ್ನೂ ಪಡೆಯಲಿಚ್ಛಿಸುವುದಿಲ್ಲ.[20] ದೈವೀ ಶಕ್ತಿ ಒಂದು ಬಗೆಯ ಅತಿಮಾನುಷ ಶಕ್ತಿ, ಕಲೆಯ ರಸಪೂರ್ಣ ಜೀವನದ ಮೂಲಶಕ್ತಿ.

## 2

ಇದುವರೆಗೂ ಅನುಭಾವದ ಗುಣಲಕ್ಷಣಗಳನ್ನು ತಿಳಿದೆವು. ಇನ್ನು ಅನುಭಾವಿ ಪಾಲಿಸಬೇಕಾದ ಮಾರ್ಗ ಯಾವುದು ಎಂಬುದನ್ನು ವಿಶದಪಡಿಸಬೇಕು.

ಅನುಭಾವಿ ಪರಮಾನಂದದ ಸುಖವನ್ನು ಅನುಭವಿಸಲು ಪ್ರತಿಯೊಂದು ಧರ್ಮದಲ್ಲೂ ಒಂದೊಂದು ಮಾರ್ಗವನ್ನು ತೋರಿಸಿದೆ. ಉದಾಹರಣೆಗೆ ವೀರಶೈವ ದರ್ಶನದ ಷಟ್‌ಸ್ಥಲ ಸಿದ್ಧಾಂತ, ವೈದಿಕದರ್ಶನದ 'ಯೋಗ', ಇಸ್ಲಾಮ್ ಧರ್ಮದ 'ಫನಾ', ಕ್ರೈಸ್ತಧರ್ಮದ 'ಶೋಧನ–ದರ್ಶನ–ಸಂಗಮ' ಮಾರ್ಗ ಇತ್ಯಾದಿ.

ಅನುಭಾವ ಮಾರ್ಗದ ಪ್ರಥಮ ಹಂತ ಶೋಧನ. ಸಾಧಕ ಇಲ್ಲಿ ಆತ್ಮ ವಿಮರ್ಶೆಗೆ ಒಳಗಾಗುತ್ತಾನೆ. ನೂರಾರು ಕಲ್ಮಷಗಳ ತಾಯಿಬೇರಾದ ಮನಸ್ಸಿನ ಸ್ವಚ್ಛತೆ ಅವನು ಮೊದಲು ಮಾಡಬೇಕಾದ ಕಾರ್ಯ. ಅಸೂಯೆ, ಅಶಾಂತಿ, ದುರಾಲೋಚನೆ, ಸ್ವಾರ್ಥ, ದುಷ್ಕೃತ್ಯವನ್ನೆಸಗಬೇಕೆಂಬ ತುಚ್ಛ ಸ್ವಭಾವ, ರಾಗ, ದ್ವೇಷ ಮುಂತಾದ ದುರ್ಗುಣಗಳನ್ನು ಒಂದೊಂದಾಗಿ ಮನಸ್ಸಿನಿಂದ ಬೇರುಸಹಿತ ಕಿತ್ತೆಸೆಯುವುದು ಶೋಧನ ಮಾರ್ಗದ ಬಹುಮುಖ್ಯ ಕಾರ್ಯ. ಹೀಗೆ ಮನಸ್ಸನ್ನು ಸ್ವಚ್ಛವಾದ ಕನ್ನಡಿಯಂತೆ ಮಾಡಿಟ್ಟುಕೊಳ್ಳಲು ಸಾಧಕ ಶೋಧನ ಮಾರ್ಗದಲ್ಲಿ ತನ್ನಲ್ಲಿ ತಾನು ಇಣುಕಿ ನೋಡುತ್ತಾನೆ.

ತದನಂತರದ ಮೆಟ್ಟಲೇ ದರ್ಶನ. ಅದು ಚರ್ಮಚಕ್ಷುಸ್‌ನಿಂದ ಪಡೆಯುವ ದರ್ಶನವಲ್ಲ ; ದಿವ್ಯಚಕ್ಷುಸ್‌ನಿಂದ, ಅಂತರ್ಬೋಧೆಯಿಂದ ಅಂತರಾಳದಿಂದ ಪಡೆಯುವ ದರ್ಶನ. ಸಚ್ಚಾರಿತ್ರ್ಯ ಸದಾಚಾರಗಳಿಂದ ಕೂಡಿ ಸಿದ್ಧವಾಗಿ ನಿಂತಿರುವ ಮನಸ್ಸನ್ನು, ಪ್ರಾಪಂಚಿಕ ಸೆಳತಗಳಿಂದ ತಪ್ಪಿಸಿ ದಿವ್ಯ ಸತ್ಯದೆಡೆಗೆ ಪಯಣಿಸುವಂತೆ ಮಾಡುವುದು ; ಸತ್ಯದ ಸ್ವಾಭಾವಿಕ ಸ್ಥಿತಿಯಾದ ಏಕತೆ ಅಥವಾ ಅದ್ವಯ ಭಾವವನ್ನು ಮುಚ್ಚಿ ಎಲ್ಲೆಲ್ಲೂ ಭೇದವನ್ನು ತೋರಿಸುತ್ತಿರುವ ಬಾಹ್ಯ ಇಂದ್ರಿಯಗಳ ಸೂಕ್ಷ್ಮಾವಲೋಕನ, ನಿಗ್ರಹ, ದರ್ಶನಸ್ಥಿತಿಯ ಪೂರ್ವ ಸಿದ್ಧತೆಗಳು. ದರ್ಶನ ಆಂತರಿಕ ಸೂಕ್ಷ್ಮದೃಷ್ಟಿ ; ದಿವ್ಯಾನಂದ ಸಾಗರದ ಕೊನೆಯ ಮೆಟ್ಟಲು.

ಹೀಗೆ ಬಾಹ್ಯ ಹಾಗೂ ಆಂತರಿಕ ಪರಿಶುದ್ಧತೆಯನ್ನು ಪಡೆದು ಸಾಧಕ ತಾನು ಬಹುಕಾಲದಿಂದ ಯಾಚಿಸಿ ಅದಕ್ಕಾಗಿ ಕಾದು ನಿಂತಾಗ ಒಂದಾನೊಂದು ದಿನ ತಾನು ಪರಮಾತ್ಮನಲ್ಲಿ

---

[20] ಅದೇ, ಪು. 110

ಐಕ್ಯನಾಗಿ ತನ್ನ ಜೀವನದ ಮಹದುದ್ದೇಶವನ್ನು ಸಫಲಗೊಳಿಸಿಕೊಳ್ಳುತ್ತಾನೆ. ಸಂಗಮ ಅಥವಾ ಐಕ್ಯಭಾವ ಯೋಗದರ್ಶನದ ಅಸಂಪ್ರಜ್ಞಾತ ಸಮಾಧಿಯಂತೆ ಅದ್ವಯ ಸ್ಥಿತಿ. ಈ ಸ್ಥಿತಿ ದೊರಕುವುದಕ್ಕೆ ಮುಂಚೆ ಅನುಭಾವಿಯನ್ನು ಹಿಂಸಿಸುತ್ತಿದ್ದ ಭೇದಭಾವನೆಗಳೆಲ್ಲ ನುಚ್ಚುನೂರಾಗುತ್ತವೆ.

ಅನುಭಾವ ಯಾವುದೇ ಒಂದು ಧರ್ಮದ ಗುತ್ತಿಗೆಯಲ್ಲ. ಎಲ್ಲ ಧರ್ಮಗಳಲ್ಲೂ ಒಂದಲ್ಲ ಒಂದು ವಿಧದಲ್ಲಿ ಅದು ಕಂಡುಬರುತ್ತದೆ. ಭಾರತೀಯ ದೃಷ್ಟಿಯಲ್ಲಿ ಅನುಭಾವ ಅನೇಕ ರೂಪಗಳನ್ನು ಪಡೆದಿದೆ. 1 ದಾಸಭಾವ, 2 ಸಖಿಭಾವ, 3 ವಾತ್ಸಲ್ಯಭಾವ, 4 ಸತಿಪತಿಭಾವ ಇತ್ಯಾದಿ. ದಾಸಭಾವದಲ್ಲಿ ಭಕ್ತ ದಾಸ, ದೇವರು ಸ್ವಾಮಿ. ಭಕ್ತ ನೈಚ್ಯಾನುಸಂಧಾನಿ; ದೇವರು ಒಡೆಯ ಸ್ವಾಮಿಯ ಸಕಲಕಾರ್ಯಗಳನ್ನು ದಾಸ ಎಡೆಬಿಡದೆ, ಚಾಚೂತಪ್ಪದೆ ನಿರಂತರವಾಗಿ, ಭಕ್ತಿಯಿಂದ ಶ್ರದ್ಧೆಯಿಂದ ನಯವಿನಯ ಪೂಜ್ಯಭಾವದಿಂದ ಪ್ರೇಮಪೂರಿತನಾಗಿ ಕೈಂಕರ್ಯಭಾವದಿಂದ ಸೇವೆಮಾಡಿ ಆತನ ಕರುಣಾಮಯ ದೃಷ್ಟಿಗೆ ಗುರಿಯಾಗಿ ತನ್ನ ಜನ್ಮಸಾರ್ಥಕ್ಯವನ್ನು ಪಡೆಯುತ್ತಾನೆ. ಭಾರತೀಯ ಅನುಭಾವದಲ್ಲಿ ಇದಕ್ಕೆ ರಾಮ-ಹನುಮಾನರ ಸಂಬಂಧವನ್ನು ಉದಾಹರಣೆಯಾಗಿ ಕೊಡಬಹುದು. ಸೀತಾದೇವಿಯ ಪತ್ತೆಯ ಹರ್ಷದಾಯಕ ಸುದ್ದಿಯನ್ನು ವೀರಹನುಮ ಶ್ರೀರಾಮನಿಗೆ ತಿಳಿಸಿದಾಗ, ಅರಣ್ಯವಾಸಿಯಾಗಿ ಯಾವ ಉಡುಗೊರೆಯನ್ನೂ ಕೊಡಲಾಗದ ಸ್ಥಿತಿಯಲ್ಲಿದ್ದ ಶ್ರೀ ರಾಮ ಸಮರ್ಥ ಹನುಮನನ್ನು ಮುಕ್ತಹಬಾಗಳಿಂದ ಆಲಿಂಗಿಸಿ ತನ್ನ ದಾಸನಲ್ಲಿ ತಾನಿಟ್ಟಿದ್ದ ದಯಾಮೃತವನ್ನು ಹರಿಸಿ ತೋರಿಸುತ್ತಾನೆ. ಶ್ರೀರಾಮನ ಆಜ್ಞೆಗಳನ್ನು ಶಿರಸಾವಹಿಸಲು ತುದಿಗಾಲಿನಲ್ಲಿರುತ್ತಿದ್ದ ಚರಣದಾಸ ಧೀರಹನುಮ ಕೈಂಕರ್ಯದ್ಯೋತಕ. ರಾಮ-ಹನುಮರ ಈ ಅಪೂರ್ವ ಸಂಬಂಧ ಅನನ್ಯಾದೃಶ, ಚಿರಸ್ಮರಣೀಯ.

ಹಾಗೆಯೇ ಸಖಿಭಾವಕ್ಕೆ ಉದಾಹರಣೆಯಾಗಿ ಕೃಷ್ಣ-ಸುದಾಮರ ಸ್ನೇಹಭಾವವನ್ನು ಹೆಸರಿಸಬಹುದು. ಬಾಲ್ಯ ಸ್ನೇಹಿತನಾದ ಸುದಾಮ ಅದೃಷ್ಟವಶಾತ್ ಕರಾಳ ಬಡತನದ ಕಾರ್ಪಣ್ಯದಲ್ಲಿ ಸಿಲುಕಿ ದಿಕ್ಕುದೆಸೆಗಾಣದೆ ಇರುವಲ್ಲಿ ಕೃಷ್ಣ ಆತನ ಮನೆಗೆ ಧಾವಿಸಿ ಅವನ ನಲ್ಮೆಯ ಮೂರು ಕಾಳು ಅವಲಕ್ಕಿಯಿಂದ ಸಂತುಷ್ಟನಾಗಿ ಸುದಾಮನ ಕಷ್ಟದಲ್ಲಿ ಸಮಭಾಗಿಯಾಗಿ ಸುದಾಮನ ಬೆಂದ ಹೃದಯಕ್ಕೆ ಅಮೃತಸೇಚನಗೈಯುವುದು ಎಂಥವರ ಹೃದಯವನ್ನೂ ದಯಾರ್ದ್ರ ಮಾಡದೆ ಬಿಡದು.

ಅಂತೆಯೇ ವಾತ್ಸಲ್ಯಭಾವಕ್ಕೆ ಯಶೋದಾ-ಕೃಷ್ಣರ ಚೇತೋಹಾರಿ ಲೀಲೆಗಳು ಅತ್ಯುತ್ತಮ ಉದಾಹರಣೆಗಳಾಗಿವೆ. ಸತಿ-ಪತಿ ಭಾವಕ್ಕೆ ಶಿವಶರಣೆ ಅಕ್ಕಮಹಾದೇವಿ-ಮಲ್ಲಿಕಾರ್ಜುನರ ಅನನ್ಯ ಸಮ್ಮೋಹಕ ಸಂಬಂಧವನ್ನು ಉಲ್ಲೇಖಿಸಬಹುದು.

ಅನುಭಾವವನ್ನು ಮನೋವೈಜ್ಞಾನಿಕರು ವಾಸ್ತವದೃಷ್ಟಿಯಿಂದ ವಿಶ್ಲೇಷಿಸಿದ್ದಾರೆ. ಅನುಭಾವಿಗಳ ಪರ ವಾದಿಸುವವರಿಗೆ ಮನೋವೈಜ್ಞಾನಿಕರ ಈ ವಿಶ್ಲೇಷಣೆ ಅತೃಪ್ತಿಯನ್ನುಂಟುಮಾಡಿದೆ. ಅನೇಕ ರಾಸಾಯನಿಕ ವಸ್ತು ಅಥವಾ ಮಿಶ್ರಣಗಳ ಸೇವನೆಯಿಂದ ಅನುಭಾವಿಗಳು ಹೇಳಿಕೊಳ್ಳುವ ಅನುಭವವನ್ನು ಹೋಲುವ ಸ್ಥಿತಿಯನ್ನು ಪಡೆಯಬಹುದು. ಅನುಭಾವಿಗಳದೂ ಹೀಗೇಕಾಗಿರಬಾರದು ? ಎಂದು ಅನೇಕ ವೈಜ್ಞಾನಿಕರು ಶಂಕಿಸುತ್ತಾರೆ,

ಉದಾಹರಣೆಗೆ ನೈಟ್ರಸ್ ಆಕ್ಸೈಡ್ ಎಂಬ ಅನಿಲವನ್ನು ಸೇವಿಸಿದರೆ ಹಾಗೂ ಇತರ ಕೆಲವು ರಾಸಾಯನಿಕ ಮಾತ್ರೆಗಳನ್ನು ನುಂಗಿದರೆ ಅನುಭಾವಿಯು 'ಅನುಭವ' ಸ್ಥಿತಿಯನ್ನು ಪಡೆಯಬಹುದು.[21] ಕೆಲವು ಮಾದಕ ದ್ರವಗಳನ್ನು ಕುಡಿದರೂ ಈ ಅನುಭವವಾಗುವುದು. ಕುಡಿತದ ಅಮಲೂ ಒಂದು ವಿಧದ ಅನುಭಾವಿಯ ಅನುಭವ ಸ್ಥಿತಿಯಲ್ಲವೇಕೆ ?[22] ಹೀಗೆ ಕೃತಕ ವಿಧಾನಗಳಿಂದಲೂ 'ಅನುಭವ'ವನ್ನು ಪಡೆಯಬಹುದಾಗಿದೆ. ಒಟ್ಟಿನಲ್ಲಿ ಅನುಭಾವಿಗಳು ಹೇಳಿಕೊಳ್ಳುವ 'ಅನುಭವ' ಶುದ್ಧವಿಲ್ಲದಿರಬಹುದು. ಅನುಭಾವಿಗಳ 'ಅನುಭವ' ಸ್ವಾಭಾವಿಕವಾದುದೇ ಎಂದು ಸಂದೇಹಿಸಬೇಕಾಗುತ್ತದೆ.

ಈ ಪ್ರಶ್ನೆಗಳ ಸುರಿಮಳೆಗೆ ಉತ್ತರವಾಗಿ ಸ್ವತಃ ಅನುಭಾವಿಯೂದ ಆರ್. ಸಿ. ಜಾಹ್‌ನರ್ ಎಂಬಾತ ಹೀಗೆ ಉತ್ತರಿಸುತ್ತಾನೆ : ಕೃತಕ ವಿಧಾನಗಳಿಂದ ಪಡೆಯುವ 'ಅನುಭವ' ಸಹಜವಾಗಿ ಬರುವ 'ಅನುಭವ'ದಂತೆ ಅಲ್ಲ. ಎರಡು ಅನುಭವಗಳಿಗೂ ವ್ಯತ್ಯಾಸಗಳಿವೆ.[23] ಕೃತಕ ವಿಧಾನಗಳಿಂದ 'ಅನುಭವ' ಪಡೆದ ವ್ಯಕ್ತಿ ಆ ಅನುಭವದ ಪರ್ಯವಸಾನವಾದ ಬಳಿಕ ಆರೋಗ್ಯವನ್ನು ಕೆಡಿಸಿಕೊಳ್ಳಬಹುದು. ಬುದ್ಧಿಭ್ರಮೆಯನ್ನು ಹೊಂದಬಹುದು; ಹೆಚ್ಚು ಹೆಚ್ಚು ಅನೈತಿಕವಾಗಬಹುದು; ಆ ಮೂಲಕ ಸಮಾಜಕಂಟಕನಾಗಬಹುದು; ಕೊನೆಗೆ ಸಮಾಜಕ್ಕೆ ಹೊರೆಯಾಗಿ ನರಸತ್ತ ಬದುಕನ್ನು ಬಾಳಬಹುದು. ಆದರೆ ಸಹಜ ರೀತಿಯಿಂದ ಪಡೆದ ಅನುಭವದ ಮಾತೇ ಬೇರೆ. ಅಂಥ ಅನುಭವ ಬಂದು ಹೋದ ಮೇಲೆ ಅನುಭಾವಿಯಲ್ಲಿ ಒಂದು ಬಗೆಯ ದೀಪ್ತಿ, ತೇಜಸ್ಸು ಬೆಳಗುತ್ತದೆ ; ಅವರ್ಣನೀಯ ಸೌಂದರ್ಯ ರಾರಾಜಿಸುತ್ತದೆ. ತನ್ನಲ್ಲುದಿಸಿದ ಪ್ರೇಮ, ಶ್ರೇಯ, ಸೌಂದರ್ಯಗಳನ್ನು ಸಮಾಜದ ಇತರ ಸೋದರಮಾನವರಲ್ಲಿ ಬಿತ್ತಿ ಅಯಸ್ಕಾಂತದಂತೆ ಅವರ ಮನಸೆಳೆಯುತ್ತಾನೆ. ದಯಾರ್ದ್ರ ಹೃದಯನೂ ಕರುಣೆಯ ಸಾಕಾರ ಮೂರ್ತಿಯೂ ಆದ ಅವನು ಸಮಾಜಕ್ಕೆ ನೈತಿಕಸ್ಥೈರ್ಯವನ್ನೂ ಧರ್ಮಶ್ರದ್ಧೆ ಸತ್ಯಶ್ರದ್ಧೆಗಳನ್ನೂ ನೀಡಿ ಊರ್ಧ್ವಮುಖವಾಗಿ ಬೆಳೆಯಲು ಸಹಾಯಕನಾಗಿ ನಿಲ್ಲುತ್ತಾನೆ. ಸಮಾಜದ ಉದ್ಧಾರಕ್ಕೆ ಕಂಕಣಬದ್ಧನಾಗಿರುತ್ತಾನೆ. ಎಲ್ಲ ಜೀವಿಗಳಲ್ಲೂ ಏಕತೆಯನ್ನು ಕಾಣುತ್ತಾನೆ. ಇಂಥ ದೇವಮಾನವನೆಲ್ಲಿ? ಮಾದಕ ದ್ರವ್ಯ ಅಥವಾ ರಾಸಾಯನಿಕ ವಸ್ತುಗಳನ್ನು ಸೇವಿಸಿ ಸಂಸಾರದ ಜಂಜಾಟ ಗುದ್ದಾಟಗಳಿಂದ ಬಿಡುಗಡೆ ಪಡೆಯಲೆಳಸುವ ಉಪಾಯಗಾರ ಅಪಾಯಕಾರಿ ಎಲ್ಲಿ ?

ಅನುಭಾವ ಧರ್ಮಕ್ಕೆ ಇರುವ ಮತ್ತೊಂದು ಸವಾಲೆಂದರೆ ಬುದ್ಧಿಜೀವಿಗಳು ಎತ್ತುವ ಅನುಭಾವದ ತಾರ್ಕಿಕ ಅಸಮಂಜತೆ, ಅವಿಚಾರ, ನಿರ್ವಿಚಾರ, ಮೂಢ ಅಂಧಾನುಕರಣೆ, ಅಸಂಬದ್ಧ ಪ್ರಲಾಪ; ದೇವರ, ಧರ್ಮದ ಹೆಸರಿನಲ್ಲಿ ಅನಾವಶ್ಯಕ ವೈಯಕ್ತಿಕ ಪ್ರಶಂಸೆ, ಸಮಾಜ

---

[21] ವಿಲಿಯಂ ಜೇಮ್ಸ್ : *The Varieties of Religious Experience*, ಪು. 378

[22] ಅದೇ, ಪು. 378

[23] ಆರ್.ಸಿ. ಜಾಹ್‌ನರ್ : *Mysticsm—Sacred and profane* (Oxford, 1957), ಪು. 226

ದಲ್ಲಿರುವ ವಾಸ್ತವ ಸ್ಥಿತಿಯು, ಭೇದದ ನಿರಾಕರಣೆಯ ಔಚಿತ್ಯ, ಇತ್ಯಾದಿ. ತನ್ನ ಅನುಭವದ ಆಳವನ್ನು ಭಾಷೆಯ ಮೂಲಕ ವಿವರಿಸಲಸಾಧ್ಯವೆಂದು ಹೇಳುವ ಅವರೇಕೆ ಮೌನವಹಿಸಬಾರದು? ಮುನಿಗಳು ಮೌನಿಗಳಲ್ಲವೆ ? ಭಾಷೆ ಅಯುಕ್ತ ಹಾಗೂ ಅಸಮರ್ಥ ಎಂದು ಹೇಳಿ ಪುನಃ ಏಕೆ ಅಭಿವ್ಯಕ್ತಿ ಮಾಡಲು ಪ್ರಯತ್ನಿಸಿ ಅರ್ಥಶೂನ್ಯವಾದ, ಪರಸ್ಪರ ವಿರುದ್ಧವಾದ ಅಸಂಬದ್ಧ ಮಾತುಗಳನ್ನಾಡಬೇಕು ? 'ಅನುಭಾವ'ವನ್ನು ಒರೆಗೆ ಹಚ್ಚುವ ಯೋಗ್ಯತೆ ಹಾಗೂ ಸಾಮರ್ಥ್ಯ ಬುದ್ಧಿ ಅಥವಾ ರೀಸನ್‌ಗೆ ಇಲ್ಲ ಎಂದು ಹೇಳಿ ಪ್ರತಿಭಾನವನ್ನು ರಾಮಬಾಣ ವನ್ನಾಗಿ ಮಾಡಿ, ಆ ಮೂಲಕ ಅನುಭಾವ ಧರ್ಮವನ್ನು ಸಮರ್ಥಿಸುವುದು ನಿರ್ವಿಚಾರ ಅಲ್ಲದೆ ಮತ್ತೇನು? ತಾವನುಭವಿಸಿದವೆಂದು ಹೇಳಿ ಇತರರ ಮೇಲೆ ಕಡ್ಡಾಯವಾಗಿ ಹೇರಬಾರದಲ್ಲವೆ?[24] ಪ್ರಪಂಚದಲ್ಲೆಲ್ಲೆಲ್ಲೂ ತುಂಬಿ ತುಳುಕುತ್ತಿರುವ ಅನಿಷ್ಟವನ್ನು ಭ್ರಮೆ ಎಂದು ನೂಕುವುದು ಸಮಂಜಸವೇ ? ಇವು ಮಾನವ ಚಿಂತನಶೀಲನಾದಾಗಿನಿಂದಲೂ ಕೇಳುತ್ತಿರುವ, ಉತ್ತರಗಾಣದೆ ತೊಳಲುತ್ತಿರುವ ಅತಿಗಹನವಾದ ಪ್ರಶ್ನೆಗಳು.

ಈ ತಡೆರಹಿತ ಪ್ರಶ್ನೆಗಳ ಸುರಿಮಳೆಗೆ ಏಕೈಕ ಉತ್ತರವೇನೋ ಎಂಬಂತೆ ಜರ್ಮನಿಯ ಸುಪ್ರಸಿದ್ಧ ತತ್ತ್ವಜ್ಞಾನಿಯಾದ ಕ್ಯಾಂಟನ ಈ ಮಾತುಗಳು ಗಮನಾರ್ಹ :

Human Reason has this peculiar fate that in one species of its knowledge it is burdened by questions, which as prescribed by the very nature of Reason itself, it is not able to ignore, but which as transcending all its powers it is also not able to answer.[25]

ಸುಪ್ರಸಿದ್ಧ ಬುದ್ಧಿಜೀವಿಯಾಗಿದ್ದ ಬರ್ಟ್ರಂಡ್ ರಸೆಲ್ ಅನುಭಾವದ ಬಗ್ಗೆ ಹೀಗೆ ಹೇಳಿದ್ದಾರೆ : The possibility of this universal love and joy in all that exists is of supreme importance for the conduct and happiness of life and gives inesteemable value to the mystic emotion, apart from any creeds which may be built upon it.[26]

ಮನೋವಿಜ್ಞಾನಿ ಥೌಲೆಸ್ಸನ ಈ ಮಾತುಗಳು ಅರ್ಥಪೂರ್ಣ: Our valuation of it (Mysticism) must depend entirely on our attitude towards religion as a whole. If we judge it from a this-world point of view we must remember that for the mystic the alternative is

---

[24] ವಿಲಿಯಂ ಜೇಮ್ಸ್ : *The Varities of Religious Experience* (The Modern Library), ಪು, 415

[25] N. K. Smith : *Immanuel Kart's Critique of Pure Reason* (Macmillan and Co., London, 1929). Preface to the first edition ಪು. 7

[26] ಬರ್ಟ್ರಂಡ್ ರಸೆಲ್, *Mysticism and Logic and other essays*, ಪು. 28

probably mental ill-health ; even if we do not like mystics, we certainly prefer them to lunatics. It is true that mysticism tends often to incapacitate its subject for activity in this world, but even on this score it may be justified if we look to the life of guided activity, which is its end, and not to the stage of turning away from the world which is only preparatory to that end..............If man's highest activity is to love God, mysticism may have a value of its own entirely independent of any usefulness it is found to have in this world.'[27]

ಅನುಭಾವದ ಮಥಿತಾರ್ಥ ಇಷ್ಟು : ಅನುಭಾವಿಗಳ ಬೋಧೆ ಗ್ರಂಥಾಧ್ಯಯನದಿಂದ ಜನಿಸಿದ ಜ್ಞಾನವಲ್ಲ. ಅದು ಆತ್ಮಾನುಭವದ ಸ್ವಾನುಭವದ ಹೊಳೆ. ಕೇವಲ ವಚನ ಚಮತ್ಕಾರದಿಂದ, ತರ್ಕದ ಕಸರತ್ತಿನಿಂದ ಸತ್ಯಸಾಕ್ಷಾತ್ಕಾರವಾಗಲಾರದೆಂಬ ಮಹದಂಶವನ್ನು ಅವರು ತೋರಿಸಿದರು. ವಿಚಾರವಂತರಾದರೂ ವಿವೇಕಿಗಳಲ್ಲದ, ಧರ್ಮದ ದಾರಿಯನ್ನೇ ಕಂಡರಿಯದ, ಲೋಕದಲ್ಲೇ ಮಗ್ನರಾದ ಅನೇಕ ಜನಸಾಮಾನ್ಯರಿಗೆ ತುಂಬು ಜೀವನ ನಡೆಸುವಂತೆ ಮಾರ್ಗದರ್ಶನ ಮಾಡುವವರು ಅನುಭಾವಿಗಳು. ಧರ್ಮಗಳ ಬಾಹ್ಯ ಆಚರಣೆಗೆ ಅಷ್ಟಾಗಿ ಗಮನವನ್ನು ಹರಿಸದೆ ಎಲ್ಲ ಧರ್ಮಗಳ ಆಂತರಿಕ ಸತ್ಯವಾದ ಸೌಂದರ್ಯಮೂರ್ತಿಯನ್ನು ಶ್ರದ್ಧಾಭಕ್ತಿಗಳಿಂದ ಕರೆದರೆ ಖಂಡಿತವಾಗಿಯೂ ಅವನು 'ಓ' ಎನ್ನುತ್ತಾನೆ. ಧರ್ಮದ ತಿರುಳು ಈ ಆಂತರಿಕ ಸತ್ಯ. ಈ ತಿರುಳೇ ನಿಜವಾದ ಧರ್ಮ ; ಬಾಹ್ಯ ಆಚಾರವಿಚಾರ ರೀತಿನೀತಿಗಳಲ್ಲ. ಈ ಭುವನಸುಂದರನನ್ನು ನಿರ್ಮಲ ಭಕ್ತಿಯಿಂದ ಆರಾಧಿಸಿ ತಮ್ಮ ಹೃದಯಮಂದಿರದಲ್ಲಿ ನೆಲಸುವಂತೆ ಮಾಡಿಕೊಂಡು ಅಣುರೇಣುತೃಣಕಾಷ್ಠಗಳಲ್ಲಿ ಅವನನ್ನೇ ಕಾಣುತ್ತಾ ತುಂಬು ಜೀವನವನ್ನು ನಡೆಸಬೇಕು. ಯಾವುದೇ ದೇಶದ ಹಿರಿಮೆಗರಿಮೆಗಳು ಆ ದೇಶದ ಧಾರ್ಮಿಕ ಪುರುಷರನ್ನು, ಸಂತಶ್ರೇಷ್ಠರನ್ನು ಅವಲಂಬಿಸಿರುತ್ತದೆ, ಎಂಬುದು ಜನವಿದಿತವಾದ ವಸ್ತುಸಂಗತಿ. ಈ ಸಾಧುಸಂತರ, ಅನುಭಾವಿಗಳ ಆಧ್ಯಾತ್ಮಿಕ ಗಣಿಯೇ ಅನುಭಾವ.

ಅನುಭಾವದ ಉಗಮದ ಹಿಂದೆ ಒಂದು ಪ್ರಬಲವಾದ ಮನೋವೈಜ್ಞಾನಿಕ ಕಾರಣ ಇದ್ದಂತಿದೆ. ಮಾನವ ಮೂಲತಃ 'ಪರಿಪೂರ್ಣತೆ' ಎಂಬ ಆದರ್ಶದಿಂದ ಆಕರ್ಷಿತನಾಗಿದ್ದಾನೆ. ಇಂದಲ್ಲ ನಾಳೆ ಈ ಪರಿಪೂರ್ಣತೆಯನ್ನು ಪಡೆದೇ ತೀರುವೆನೆಂಬ ಆಶಾಭಾವನೆ ಆತನದು. ಈ ಪರಿಪೂರ್ಣತೆಯು ಸಂಕೇತವೇ ಅನುಭಾವಿಯ ಪ್ರೇಮತತ್ತ್ವ ಅಥವಾ ದೇವರು; ಪರಮ ಶ್ರೇಯದ ದ್ಯೋತಕ. ಆತನ ಸಾಯುಜ್ಯವನ್ನು ಪಡೆಯಲು ಅನುಭಾವಿ ಸದಾ ತವಕಪಡುತ್ತಾನೆ.

---

[27] ಬಿ. ಹೆಚ್. ಥೆಲಸ್ ; *An Introduction to the Psychology of Religion* (Cambridge, 1924), ಪು. 240–41

ಭಾರತದಲ್ಲಿ 'ತತ್ತ್ವದರ್ಶನ' ಎಂಬುದು ಬರಿ ವಿಚಾರಸರಣಿಯಲ್ಲಿ ಮುಗಿಯುವುದಿಲ್ಲ. ಅದೊಂದು ಬಾಳುವ ದಾರಿ. ದಾರ್ಶನಿಕ ವಿಚಾರಸರಣಿ ಕೂಡ ಕೇವಲ ಮನಸ್ಸಿನ ಅನಿಸಿಕೆಗಳ ಹಾಗೂ ಸಿದ್ಧಾಂತಗಳ ಸೂತ್ರೀಕರಣವಲ್ಲ. ಈ ಸೂತ್ರೀಕರಣದ ಜತೆಗೆ ಅದು 'ಸತ್' ಯಾವುದೋ ಅದರ ಸಾಕ್ಷಾತ್ಕಾರವನ್ನೂ ಈಗಲೆ, ಇಲ್ಲೆ ಪಡೆಯುವುದು ಹೇಗೆ, ಹಾಗೂ ಒಳ್ಳೆಯ ಧಾರ್ಮಿಕ ಜೀವನವನ್ನು ನಡೆಸುವುದು ಹೇಗೆ ಎಂಬುದರ ಅನ್ವೇಷಣೆಯಲ್ಲೂ ತೊಡಗಿದೆ. ಭಾರತದಲ್ಲಿ ಸತ್ಪುರುಷರನ್ನೂ ಸತ್‌ಸಮಾಜವನ್ನೂ ಬೆಳಸುತ್ತಿರುವುದು ಅತರ್ಕ್ಯಪ್ರಜ್ಞೆ ಹಾಗೂ ಭಾಷಾತೀತ ಬೋಧೆಗಳನ್ನು ಅವಲಂಬಿಸಿರುವ ದಾರ್ಶನಿಕ ಧ್ಯೇಯ ಮತ್ತು ಸಿದ್ಧಾಂತಗಳೇ ಹೊರತು ಕೇವಲ ನೈತಿಕ–ಸಾಮಾಜಿಕ ಧ್ಯೇಯ–ಸಿದ್ಧಾಂತಗಳಲ್ಲ. ಈ ಪ್ರಕಾರವಾಗಿ ಮನುಷ್ಯನ ಸಾಮಾಜಿಕ ಜೀವನವು ದಾರ್ಶನಿಕ ಸೂತ್ರವನ್ನು ಅವಲಂಬಿಸಿರುತ್ತದೆ. ಒಬ್ಬನ ಮಾನವೀಯತೆ, ಉಪಕಾರಬುದ್ಧಿ, ದಾನ, ದಯೆ ಮತ್ತು ಪ್ರೇಮ ಸಹ ತನ್ನ ಜತೆ ಮಾನವನ ಪರಮ ಮೌಲ್ಯವೇನೆಂಬುದರ ಸಾಕ್ಷಾತ್ಕಾರದ ಆಧಾರದ ಮೇಲೆ ವರ್ಧಿಸುತ್ತದೆ. ಇವು ದೃಢವಾಗಿ ನಿಲ್ಲಬೇಕಾದರೆ ಅದಕ್ಕೆ ಇಡೀ ಪ್ರಕೃತಿ, ಮನುಷ್ಯ, ಸಮಾಜ ಇವೆಲ್ಲವನ್ನೂ ಒಳಕೊಂಡು ಅವುಗಳಿಗೆ ಅತೀತವಾಗಿರುವ ಸಮಗ್ರ ವಿಶ್ವದ ಮೌಲ್ಯಜ್ಞಾನದ ಅವಲಂಬನ ಬೇಕು. ಈ ಅತರ್ಕ್ಯ ಪ್ರಜ್ಞೆ ಅಥವಾ ಅಂತರ್‌ಬೋಧೆ ಮಾತ್ರ ಸಂತತವೂ ಸ್ವಾತ್ಮಾತಿಗವೂ ಆದ ಮಾನವಪ್ರೇಮ-ಭಕ್ತಿ–ಉತ್ಸಾಹಗಳನ್ನು ಪರಿಣಾಮಕಾರಿಯಾಗಿ ಪೋಷಿಸಬಲ್ಲುದು.

**—ರಾಧಾಕಮಲ್ ಮುಖರ್ಜಿ***

---

*'ಅತರ್ಕ್ಯ ಬೋಧದರ್ಶನ' (ಅನು : ಪು. ತಿ. ನರಸಿಂಹಾಚಾರ್), ಯುಗಯಾತ್ರೀ ಭಾರತೀಯ ಸಂಸ್ಕೃತಿ, ಸಂ. 3 (ಸಂ. ಹರಿದಾಸ ಭಟ್ಟಾಚಾರ್ಯ), ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಪು. 316

ಮೂಲ : ಕೆ. ಎಸ್. ದೇಶಪಾಂಡೆ
ಅನುವಾದ : ಬಾ. ವೇ. ಶ್ರೀಧರ್

# ವಿಶ್ವವಿದ್ಯಾಲಯ ಶಿಕ್ಷಣ ಮತ್ತು ಗ್ರಂಥಾಲಯಗಳು

## ಶಿಕ್ಷಣಕ್ಕೆ ಪುಸ್ತಕಗಳು ಮುಖ್ಯ

ಶಿಕ್ಷಣದ ಬಗ್ಗೆ ಮಾತನಾಡುತ್ತ ಇಂಗ್ಲಿಷ್ ಸಾಹಿತ್ಯದ ಸಮ್ರಾಟನಾದ ಡಾ. ಸ್ಯಾಮ್ಯುಯಲ್ ಜಾನ್‌ಸನ್ ಒಮ್ಮೆ ಹೀಗೆ ಹೇಳಿದ್ದಾನೆ : ''ಪುಸ್ತಕಗಳಿಂದಾಗುವಷ್ಟು ಉಪಯೋಗ ಉಪನ್ಯಾಸಗಳಿಂದ ಆಗುತ್ತದೆಂದು ನನಗೆ ತೋರುವುದಿಲ್ಲ. ಏಕೆಂದರೆ ಈ ಉಪನ್ಯಾಸಗಳು ಕೂಡ ಪುಸ್ತಕಗಳಿಂದಲೇ ತೆಗೆದುಕೊಂಡವು. ಪ್ರಯೋಗಗಳ ಮೂಲಕ ಕಲಿಸುವ ವಿಷಯಗಳನ್ನು ಉಪನ್ಯಾಸಗಳಿಂದ ಕಲಿಸಬಹುದೇ ಹೊರತು ಬೇರೇನನ್ನೂ ಅವುಗಳಿಂದ ಕಲಿಸಲಾಗುವುದಿಲ್ಲ.'' ಉನ್ನತ ಶಿಕ್ಷಣ ವಲಯದಲ್ಲಿ ಪುಸ್ತಕಗಳು, ಗ್ರಂಥಾಲಯಗಳು ಇವುಗಳ ಉಪಯುಕ್ತತೆಯನ್ನು ಕುರಿತು ಏನೆಲ್ಲ ಹೇಳಬಹುದೋ ಅದೆಲ್ಲ ಈ ಸೂತ್ರಪ್ರಾಯವಾದ ಮಾತಿನಲ್ಲಿ ಅಡಕವಾಗಿದೆ. ಒಳ್ಳೆಯ ಉಪಾಧ್ಯಾಯ ತನ್ನ ಶಿಷ್ಯರ ಮನಸ್ಸಿನ ಮೇಲೆ ಪರಿಣಾಮವನ್ನು ಬೀರುತ್ತಾನೆ. ಅವನು ಅವರವರ ವಿಷಯಗಳಿಗೆ ಸಂಬಂಧಿಸಿದಂತೆ ಹೆಚ್ಚುಹೆಚ್ಚು ಓದುವಂತೆ ಅವರಲ್ಲಿ ಜ್ಞಾನತೃಷೆಯನ್ನು ಪ್ರದೀಪಿಸುತ್ತಾನೆ ; ಅವರು ಸೃಜನಾತ್ಮಕ ಲೇಖಕರಾಗುವಂತೆ ಅವರಲ್ಲಿ ಚೈತನ್ಯ ತುಂಬುತ್ತಾನೆ. ಉತ್ತಮ ಉಪಾಧ್ಯಾಯರಾಗುವುದು ಹುಟ್ಟಿನಿಂದ, ಶಿಕ್ಷಣದಿಂದಲ್ಲ. ನಮ್ಮಲ್ಲಿ ಬಹುತೇಕ ಉಪಾಧ್ಯಾಯರು ತಮ್ಮ ಉಪನ್ಯಾಸಗಳ ಮೂಲಕ ವಿದ್ಯಾರ್ಥಿಗಳಿಗೆ ವಿಷಯದ ಬಗೆಗೆ ಸ್ವಲ್ಪಮಟ್ಟಿನ ತಿಳಿವಳಿಕೆ ನೀಡಬಲ್ಲರು, ಅಷ್ಟೆ. ಆದ್ದರಿಂದ ವಿದ್ಯಾರ್ಥಿಗಳು ತರಗತಿಯ ಪಾಠದಷ್ಟಕ್ಕೆ ತೃಪ್ತರಾಗದೆ ಅವರವರ ವಿಷಯಗಳಿಗೆ ಸಂಬಂಧಿಸಿದ ವಿಶಾಲವೂ ವಿಪುಲವೂ ಆಗಿರುವ ಗ್ರಂಥಸಂಪತ್ತನ್ನು ಅರಗಿಸಿಕೊಳ್ಳಬೇಕು. ''ಈಗಿನ ಕಾಲದಲ್ಲಿ ಪುಸ್ತಕ ಸಂಗ್ರಹವೇ ನಿಜವಾದ ವಿಶ್ವವಿದ್ಯಾಲಯ,'' ಎಂದು ಕಾರ್ಲೈಲ್ ಹೇಳಿದಾಗ ಅವನ ಮನಸ್ಸಿನಲ್ಲೂ ಇದೇ ಭಾವನೆ ಇತ್ತು.

ಪ್ರೌಢಶಿಕ್ಷಣಕ್ಕೆಲ್ಲ ಪುಸ್ತಕಗಳು ಅತಿಮುಖ್ಯವೆಂದು ಡಾ. ಜಾನ್‌ಸನ್ ಹಾಗೂ ಕಾರ್ಲೈಲ್ ಇಬ್ಬರೂ ಒಪ್ಪಿದರೂ ಇದು ಎಲ್ಲ ಶಿಕ್ಷಣತಜ್ಞರ ಅನುಭವಕ್ಕೆ ಬಂದಿರುವ ಸಂಗತಿ. ಅವರು ಹೇಳಿರುವುದೂ ಇದನ್ನೇ. ಗ್ರಂಥಗಳ ಅದ್ಭುತ ಸ್ವಾರಸ್ಯದಿಂದ ತರುಣರ ಮನಸ್ಸನ್ನು ಉದ್ದೀಪನಗೊಳಿಸುವುದು, ತನ್ಮೂಲಕ ಅವರಿಗೆ ತಮ್ಮ ಉನ್ನತ ವಿದ್ಯಾಭ್ಯಾಸದ ಹಿರಿಯಾಸೆಗಳನ್ನು ಈಡೇರಿಸಿಕೊಳ್ಳುವಂತೆ ಮಾಡುವುದು ಮಾತ್ರವಲ್ಲದೆ ಇಡೀ ಆಯುಷ್ಯವೆಲ್ಲ ಅವರಲ್ಲಿ ಉತ್ತಮ ಗ್ರಂಥಾವಲೋಕನದ ಅಭಿರುಚಿ ಮೂಡಿಸುವುದು—ಇದೇ ಉನ್ನತ ವಿದ್ಯಾಭ್ಯಾಸದ ಮುಖ್ಯ ಗುರಿ. ವಿಶ್ವವಿದ್ಯಾಲಯವನ್ನು ಪ್ರವೇಶಿಸುವ ಎಲ್ಲ ಯುವಕ ಯುವತಿಯರೂ ಅದರಿಂದ

ಹೊರಬರುವಾಗ ತಮ್ಮ ಬಾಳಿನಲ್ಲಿ ಪುಸ್ತಕ ಪ್ರೇಮವನ್ನು ಹಾಸುಹೊಕ್ಕಾಗಿ ಬೆಳೆಸಿಕೊಳ್ಳಬೇಕು.

ವಿದ್ಯಾಭ್ಯಾಸ ಶುದ್ಧಾಂಗವಾಗಿ ಗುರುಪ್ರಧಾನವಾದ ಕಾಲವೊಂದಿತ್ತು. ವೇದಕಾಲೀನ ಭಾರತದಲ್ಲಿ ಜ್ಞಾನಪ್ರಸಾರ ಬಾಯಿಂದ ಬಾಯಿಗೆ ಆಗುತ್ತಿತ್ತು. ಪ್ರಾಚೀನ ಭಾರತೀಯರಿಗೆ ಉನ್ನತ ಶಿಕ್ಷಣ ಗುರುಮುಖೇನ ಆಗುತ್ತಿತ್ತು. ಈ ಭಾವನೆ ಎಷ್ಟು ಗಾಢವಾಗಿತ್ತೆಂಬುದನ್ನು ಮಹಾಭಾರತದಲ್ಲಿ ಬರುವ ಏಕಲವ್ಯ ಉಪಾಖ್ಯಾನದಿಂದ ತಿಳಿಯಬಹುದು. ಬೇಡರ ಮಗನಾದ ಏಕಲವ್ಯನಿಗೆ ಕೌರವರ ಮತ್ತು ಪಾಂಡವರ ರಾಜಗುರುವಾದ ದ್ರೋಣಾಚಾರ್ಯರು ಬಿಲ್ವಿದ್ಯೆಯನ್ನು ಹೇಳಿಕೊಡಲು ಒಪ್ಪಲಿಲ್ಲ. ಏಕಲವ್ಯನಿಗೆ ಇದರಿಂದ ತುಂಬ ನಿರಾಶೆಯಾಯಿತು. ಆದರೆ ಆತ ಎದೆಗುಂದಲಿಲ್ಲ. ತಾನೇ ದ್ರೋಣಾಚಾರ್ಯರ ಪ್ರತಿಮೆಯನ್ನು ನಿರ್ಮಿಸಿ ಅದರ ಆಸರೆಯಲ್ಲಿ ಬಿಲ್ವಿದ್ಯೆಯನ್ನು ಕಲಿಯಲಾರಂಭಿಸಿದ. ಈಗಲೂ ಪ್ರಾಥಮಿಕ ಹಾಗೂ ಸೆಕೆಂಡರಿ ಹಂತಗಳಲ್ಲಿ ವಿದ್ಯಾಭ್ಯಾಸ ಗುರುಪ್ರಧಾನವಾಗಿಯೇ ಉಳಿದಿದೆ. ಆದರೆ ವಿಜ್ಞಾನ ಹಾಗೂ ತಾಂತ್ರಿಕ ಕ್ಷೇತ್ರಗಳ ತ್ವರಿತ ಪ್ರಗತಿಯಿಂದಲೂ ತತ್ಪರಿಣಾಮವಾಗಿ ಲೋಕ ಸಂಕುಚಿತವಾಗುವುದರಿಂದಲೂ ಪ್ರಜಾಪ್ರಭುತ್ವದ ಆಗಮನ ಹಾಗೂ ಕೈಗಾರಿಕಾ ಕ್ರಾಂತಿಗಳಿಂದಲೂ ವಿದ್ಯಾಭ್ಯಾಸ, ಅದರಲ್ಲೂ ಉನ್ನತ ವಿದ್ಯಾಭ್ಯಾಸ, ಗುರುಪ್ರಧಾನವಾಗಿರಲು ಇನ್ನು ಸಾಧ್ಯವೇ ಇಲ್ಲ.

ಈಚೆಗೆ, 19ನೆಯ ಶತಮಾನದ ಕೊನೆಯ ದಶಕದಲ್ಲೂ, ಬ್ರಸೆಲ್ಸ್‌ನ ಇಬ್ಬರು—ಬ್ಯಾರಿಸ್ಟರುಗಳಾದ ಪಾಲ್ ಆಟ್ಲೆಟ್ ಮತ್ತು ಹೆನ್ರಿ ಲಾ ಫಾಂಟೇನ್—ಆಗಿನ ಸಕಲ ಜ್ಞಾನಸಂಪತ್ತನ್ನೂ ತಮ್ಮದಾಗಿಸಿಕೊಳ್ಳುವ ವ್ಯರ್ಥ ಕನಸನ್ನು ಕಂಡರು. ಆದರೆ ಜ್ಞಾನದ ಎಲ್ಲೆಗೆ ಮಿತಿಯೇ ಇಲ್ಲ. ಯಾವ ಶಿಕ್ಷಕನಿಗೇ ಆದರೂ ತನ್ನ ಕ್ಷೇತ್ರದಲ್ಲಿ ತಿಳಿಯಬೇಕಾದುದೆಲ್ಲವನ್ನೂ ತಿಳಿಯಲು ಸಾಧ್ಯವಿಲ್ಲ.

ಯುವಕಯುವತಿಯರು ವಿಶ್ವವಿದ್ಯಾಲಯವನ್ನೋ ಕಾಲೇಜನ್ನೋ ಪ್ರವೇಶಿಸುವಾಗ ಅವರು ಮೂರು ಮುಖ್ಯ ಬದಲಾವಣೆಗಳನ್ನು ಎದುರಿಸಬೇಕಾಗುತ್ತದೆ. ಮೊದಲ ಬದಲಾವಣೆಯೆಂದರೆ ಬೋಧನ ಮಾಧ್ಯಮ ಮಾತೃಭಾಷೆಯಿಂದ ಇಂಗ್ಲಿಷ್ ಭಾಷೆಗೆ ಬದಲಾಗುವುದು. ಆದರೆ ಈಗ ಮಾತೃಭಾಷೆಯ ಮೂಲಕ ಪಾಠಗಳನ್ನು ಹೇಳಿಕೊಡಬೇಕೆಂಬ ಪ್ರಬಲವಾದ ಪ್ರವೃತ್ತಿಯೇನೋ ಇದೆ. ಈ ಒಂದು ಮುಖ್ಯ ಬದಲಾವಣೆ ಶಿಕ್ಷಣತಜ್ಞರ ಇತ್ತೀಚಿನ ವೈಚಾರಿಕತೆಯಿಂದ ಆದದ್ದು. ಆದರೂ ಈಗಲೂ ಬೋಧನೆಯನ್ನೂ ಪರೀಕ್ಷೆಗಳನ್ನೂ ಇಂಗ್ಲಿಷ್ ಮಾಧ್ಯಮದಲ್ಲಿ ನಡೆಸುವ ಅನೇಕ ವಿಶ್ವವಿದ್ಯಾಲಯಗಳೂ ಉನ್ನತ ಶಿಕ್ಷಣ ಸಂಸ್ಥೆಗಳೂ ಇವೆ. ಶೀಘ್ರದಲ್ಲೇ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳೂ ಪ್ರಾದೇಶಿಕ ಭಾಷಾ ಮಾಧ್ಯಮಕ್ಕೆ ತಿರುಗಲು ತೀರ್ಮಾನಿಸಿದರೂ ಇಂಗ್ಲಿಷ್ ಭಾಷೆ ಗ್ರಂಥಾಲಯ ಮಾಧ್ಯಮವಾಗಿ ಮುಂದುವರಿಯುತ್ತದೆ. ನಮ್ಮ ಗ್ರಂಥಾಲಯಗಳಲ್ಲಿ ಸೇಕಡ 60ರಿಂದ 70ರಷ್ಟು ಪುಸ್ತಕಗಳು ಮತ್ತು ನಿಯತಕಾಲಿಕಗಳು ಇಂಗ್ಲಿಷ್ ಭಾಷೆಯಲ್ಲಿವೆ. ತನ್ನ ವಿಷಯದಲ್ಲಿ ನೈಪುಣ್ಯ ಸಂಪಾದಿಸಬಯಸುವ ವಿದ್ಯಾರ್ಥಿ ಅನಿವಾರ್ಯವಾಗಿ ಈ ಇಂಗ್ಲಿಷ್ ಪುಸ್ತಕಗಳಿಗೇ ಶರಣುಹೋಗಬೇಕಾಗುತ್ತದೆ. ಅಲ್ಲದೆ, ವಿಶ್ವದ ಪ್ರಧಾನ ಭಾಷೆಯಾಗಿ ಇಂಗ್ಲಿಷ್ ಭಾಷೆ ಬಾಹ್ಯಪ್ರಪಂಚವನ್ನರಿಯಲು ತೆರೆದ ಕಿಟಕಿಯಂತಿದೆ. ಪ್ರಪಂಚದ ಜ್ಞಾನಕ್ಕೆ ಅದೇ ಭಂಡಾರ. ಇಂದಿನ ವರೆಗೂ ಬೆಳೆದುಬಂದಿರುವ ಜ್ಞಾನಕ್ಕೆ ಹೊಂದಿ

ಕೊಳ್ಳಲು ಉಪಾಧ್ಯಾಯರೂ ವಿದ್ಯಾರ್ಥಿಗಳೂ ಇಂಗ್ಲಿಷ್ ಭಾಷೆಯಲ್ಲಿರುವ ಪುಸ್ತಕಗಳನ್ನು ವಿಶೇಷವಾಗಿ ಅಧ್ಯಯನ ಮಾಡಬೇಕು.

ವಿದ್ಯಾರ್ಥಿಗಳು ಎದುರಿಸಬೇಕಾದ ಎರಡನೆಯ ಬದಲಾವಣೆಯೆಂದರೆ ಬೋಧನವಿಧಾನ. ಪ್ರೌಢಶಾಲಾ ಮಟ್ಟದಲ್ಲಿ ಅವರಿಗೆ ಉಪಾಧ್ಯಾಯರು ಚಮಚೆ ಪೋಷಣೆಯನ್ನು ಅಭ್ಯಾಸ ಮಾಡಿಬಿಟ್ಟಿರುತ್ತಾರೆ. ಆದರೆ ಕಾಲೇಜು ಅಥವಾ ವಿಶ್ವವಿದ್ಯಾಲಯ ಮಟ್ಟದಲ್ಲಿ ಅವರು ಹೆಚ್ಚು ಸ್ವಾವಲಂಬಿಗಳಾಗಬೇಕಾಗುತ್ತದೆ. 50 ಅಥವಾ 60 ನಿಮಿಷಗಳ ಅವಧಿಯಲ್ಲಿ ಉಪಾಧ್ಯಾಯರು ಒಂದು ವಿಷಯಕ್ಕೆ ಸಂಬಂಧಿಸಿದಂತೆ ಅದರ ಸ್ಥೂಲ ವಿವರ ನೀಡಬಹುದು, ಅಷ್ಟೆ. ವಿಷಯದ ಆಳವೂ ವಿಸ್ತಾರವೂ ಆದ ಜ್ಞಾನ ಸಂಪಾದಿಸಲು ವಿದ್ಯಾರ್ಥಿಗಳು ಗ್ರಂಥಾಲಯಕ್ಕೆ ಹೋಗಿ ಅಗತ್ಯ ಮಾಹಿತಿಯನ್ನು ಗ್ರಂಥ ಮೊದಲಾದವುಗಳಿಂದ ಸಂಗ್ರಹಿಸಬೇಕು. ಇತರ ಎಲ್ಲ ಉಪನ್ಯಾಸಗಳಂತೆ ತರಗತಿಯ ಪಾಠ ಪ್ರವಚನಗಳೂ, ಹೆಚ್ಚೆಂದರೆ, ಕೈಮರಗಳಾಗಿ ವರ್ತಿಸಬಲ್ಲವು, ಅಷ್ಟೆ. ನಿಜವಾದ ಕಲಿಕೆಯನ್ನು ಗ್ರಂಥಾಲಯ ಸಿಬ್ಬಂದಿಗಳ ಸಹಾಯದಿಂದ ಗ್ರಂಥಾಲಯದಲ್ಲಿ ಮಾಡಬೇಕು.

ಕಾಲೇಜಿಗೆ ಹೋಗುವ ತರುಣರು ಎದುರಿಸುವ ಮೂರನೆಯ ಬದಲಾವಣೆಯೆಂದರೆ ಅಧ್ಯಯನ ವಿಷಯಗಳ ಸ್ವರೂಪ. ಇವು ಒಮ್ಮೆಲೇ ಬದಲಾಗಿ ಪ್ರೌಢಶಾಲೆಗಳಲ್ಲಿನ ಮಟ್ಟಕ್ಕಿಂತ ವ್ಯಾಪಕವಾಗಿರುತ್ತವೆ. ಅಂದರೆ ಇಲ್ಲಿನ ಕಲಿಕೆ ಹೆಚ್ಚು ಹೆಚ್ಚು ಪುಸ್ತಕ ಕೇಂದ್ರಿತವಾಗಿರಬೇಕು ಎಂದರ್ಥ. ನಾನು ಪುಸ್ತಕ ಕೇಂದ್ರಿತ ಎಂದಾಗ ಕೇವಲ ಪಠ್ಯಪುಸ್ತಕ ಕೇಂದ್ರಿತ ಎಂದರ್ಥವಲ್ಲ. ಉನ್ನತ ವಿದ್ಯಾಭ್ಯಾಸದ ಗುರಿ ಎಂದರೆ ವಿದ್ಯಾರ್ಥಿಗಳನ್ನು ಒಂದೆರಡು ಪುಸ್ತಕಗಳಿಂದ, ಅಂದರೆ ಕೇವಲ ಪಠ್ಯಪುಸ್ತಕಗಳಿಂದ, ಇತರ ತತ್ಸಂಬಂಧವಾದ ಸೋಜಿಗವಾದ ಪುಸ್ತಕ ಲೋಕಕ್ಕೆ ಒಯ್ದು ಅವರಿಗೆ ಆಯಾ ವಿಷಯಗಳಲ್ಲಿ ವಿಸ್ತಾರವೂ ಆಳವೂ ವೈವಿಧ್ಯಪೂರ್ಣವೂ ಆದ ಜ್ಞಾನ ದೊರಕಿಸಿಕೊಡುವುದು. ಈ ಮಾರ್ಗ ತುಂಬ ಬುದ್ಧಿವಂತರಾದ ವಿದ್ಯಾರ್ಥಿಗಳಿಗೆ ಹೊಸ ಹೊಸ ಸಂಶೋಧನೆಮಾಡಲು, ಸದ್ಯದ ಅಭಿಪ್ರಾಯಗಳನ್ನು ಬದಲಾಯಿಸಲು ಇಲ್ಲವೆ ಆಧುನಿಕ ಬೆಳವಣಿಗೆಗಳ ಬೆಳಕಿನಲ್ಲಿ ಹಳೆಯ ಭಾವನೆಗಳನ್ನು ಪುನರ್ವ್ಯಾಖ್ಯಾನಿಸಲು ಪ್ರೇರಿಸುತ್ತದೆ : ಅಂದರೆ, ತರುಣ ಮನಸ್ಸುಗಳನ್ನು ಪುಸ್ತಕಗಳಿಗೆ ಒಡ್ಡುವುದರಿಂದ ವಿದ್ಯಾರ್ಥಿಗಳಲ್ಲಿ ವಿಮರ್ಶಾ ದೃಷ್ಟಿ ಕುದುರುತ್ತದೆ ; ಇದರಿಂದ ಅವರು ವಿದ್ಯಾಕ್ಷೇತ್ರದಲ್ಲಿ ಉನ್ನತ ಶಿಖರವನ್ನೇರಬಹುದು ; ಅವರಿಗೆ ವಿಷಯದ ತಳಸ್ಪರ್ಶಿ ಅನುಭವವೂ ಆಗುವುದು.

ಉನ್ನತ ಶಿಕ್ಷಣಕ್ಕೆ ಗ್ರಂಥಗಳೂ ಗ್ರಂಥಾಲಯಗಳೂ ಕಮಾನಿಗೆ ತಲೆಗಂಬದಂತಿವೆ ಎಂಬುದು ಮೇಲೆ ಹೇಳಿದ್ದರಿಂದ ಸ್ಪಷ್ಟವಾಗುತ್ತದೆ. ಆದ್ದರಿಂದಲೇ ಮೇಲಿಂದ ಮೇಲೆ ಬಂದ ನಿಯೋಗಗಳು ತಮ್ಮ ವಿದ್ವತ್ಪೂರ್ಣವಾದ ಭಾರಿ ಭಾರಿ ವರದಿಗಳಲ್ಲಿ ಗ್ರಂಥಾಲಯವನ್ನು 'ವಿಶ್ವವಿದ್ಯಾಲಯದ ಹೃದಯ', 'ವಿದ್ಯಾವಂತರ ಕಾರ್ಯಾಗಾರ', 'ಪಂಡಿತರ ಪ್ರಯೋಗಾಲಯ' ಎಂಬಿವೇ ಮೊದಲಾದ ಮಾತುಗಳಿಂದ ವಿವರಿಸಿರುವುದರಲ್ಲಿ ಆಶ್ಚರ್ಯವೇ ಇಲ್ಲ. ನಾನು ಈಗ ಒಂದು ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳೇನೆಂಬುದನ್ನು ನೋಡಿ, ಒಂದು ಒಳ್ಳೆಯ ಗ್ರಂಥಾಲಯವಿಲ್ಲದೆ ಈ ಧ್ಯೇಯೋದ್ದೇಶಗಳನ್ನು ಕಾರ್ಯರೂಪಕ್ಕೆ ತರುವುದು ಸಾಧ್ಯವೇ ಇಲ್ಲವೆಂದು ಮನದಟ್ಟುವಂತೆ ಸ್ಥಿರೀಕರಿಸುತ್ತೇನೆ.

## ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳು

i ಅನಾದಿಕಾಲದಿಂದ ಮಾನವಕುಲ ಸಂಪಾದಿಸಿರುವ ಜ್ಞಾನರಾಶಿಯನ್ನು ಕಾಪಾಡುವುದು.

ii ಈ ಜ್ಞಾನವನ್ನು ತನ್ನ ಬೋಧನ, ಪ್ರಕಟಣ ಮತ್ತು ವಿಸ್ತರಣ ಯೋಜನೆಗಳಿಂದ ಪ್ರಸಾರ ಮಾಡುವುದು.

iii ತನ್ನ ಉಪಾಧ್ಯಾಯರು ಹಾಗೂ ಇತರ ಸಂಶೋಧಕರ ಸಂಶೋಧನ ಕಾರ್ಯದಿಂದ ಜ್ಞಾನದ ಎಲ್ಲೆಯನ್ನು ವಿಸ್ತರಿಸುವುದು.

iv ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ಅತ್ಯುನ್ನತ ಶೈಕ್ಷಣಿಕ ಗೌರವ ದೊರಕಲು ಸಹಾಯ ಮಾಡಿ ಅವರಿಗೆ ಆಜೀವಪರ್ಯಂತ ಒಳ್ಳೆಯ ಗ್ರಂಥಗಳನ್ನು ಓದಲು ಅವಕಾಶ ಮಾಡಿಕೊಡುವುದು.

ಮೂಲಸಂಸ್ಥೆಯು, ಅಂದರೆ ವಿಶ್ವವಿದ್ಯಾಲಯದ, ಮೊದಲ ಧ್ಯೇಯ ಸಾಧಿಸಲು ವಿಶ್ವವಿದ್ಯಾಲಯ ಗ್ರಂಥಾಲಯ ಗ್ರಂಥಗಳನ್ನೂ ತತ್ಸಂಬಂಧವಾದ ಸಾಮಗ್ರಿಗಳನ್ನೂ ಭಾರಿ ಪ್ರಮಾಣದಲ್ಲಿ ಸಂಗ್ರಹಿಸುತ್ತ ಹೋಗುತ್ತದೆ. ಮಾನವಕುಲ ಸಂಪಾದಿಸಿದ ಸಕಲ ಜ್ಞಾನರಾಶಿಯೂ ಇಲ್ಲಿಯ ವರೆಗೆ ಪ್ರಕಟವಾಗಿರುವ ಪುಸ್ತಕಗಳಲ್ಲಡಗಿದೆ. ವಿಶ್ವವಿದ್ಯಾಲಯ ಗ್ರಂಥಾಲಯ ಅತ್ಯುತ್ತಮ ವರಣ ನೀತಿಯನ್ನು ಅವಲಂಬಿಸಿ ಶ್ರೇಷ್ಠ ವಾಚನ ಹಾಗೂ ಪರಾಮರ್ಶನ ಸಾಮಗ್ರಿಯನ್ನು ಸಂಗ್ರಹಿಸುತ್ತದೆ. ಈ ಜ್ಞಾನದ ಶಸ್ತ್ರಾಗಾರದ ಶಕ್ತಿಸಂಚಯ ಹೆಚ್ಚುತ್ತಾ ಹೋಗುತ್ತದೆ. ಈ ಕಾರಣದಿಂದಲೇ ವಿಶ್ವವಿದ್ಯಾಲಯದ ಗ್ರಂಥಾಲಯಗಳನ್ನು "ಮುಕ್ತ ಸಂಗ್ರಹ" ಗಳೆಂದು ಕರೆಯುವುದು.

ಒಂದು ವಿಶ್ವವಿದ್ಯಾಲಯದಲ್ಲಿ ಜ್ಞಾನಪ್ರಸಾರವನ್ನು i ಬೋಧನ, ii ಪ್ರಕಟಣ ಮತ್ತು iii ವಿಸ್ತರಣ ಯೋಜನೆಗಳ ಮೂಲಕ ಮಾಡಲಾಗುವುದು.

ಪುಸ್ತಕಗಳನ್ನು "ಶಿಕ್ಷಕನ ಶಿಕ್ಷಕ" ಎಂದು ವಿವರಿಸಲಾಗಿದೆ. ಚೆನ್ನಾಗಿ ಶಿಕ್ಷಣ ನೀಡಬಯಸುವ ಶಿಕ್ಷಕರು ತಮಗೆ ಸಂಬಂಧಪಟ್ಟ ವಿಷಯದ ಬಗೆಗೆ ಹಳೆಯ ಹಾಗೂ ಇತ್ತೀಚಿನ ಮಾಹಿತಿಗಳುಳ್ಳ ಗ್ರಂಥಗಳನ್ನೂ ನಿಯತಕಾಲಿಕಗಳನ್ನೂ ಸದಾ ನೋಡುತ್ತಿರಬೇಕು. ಪುಸ್ತಕಗಳು ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ಒಂದೇ ರೀತಿಯಲ್ಲಿ ಹೊಸ ಹೊಸ ಅಭಿಪ್ರಾಯಗಳನ್ನೂ ಭಾವನೆಗಳನ್ನೂ ಕೊಡುತ್ತವೆ; ಅವು ಅವರಿಗೆ ತಿಳಿವಳಿಕೆ ನೀಡುತ್ತವೆ, ಸ್ಫೂರ್ತಿ ನೀಡುತ್ತವೆ.

ಸಂಶೋಧನೆ ಹಾಗೂ ಜನಪ್ರಿಯ ಪ್ರಕಟಣೆಗಳ ಮೂಲಕ ವಿಶ್ವವಿದ್ಯಾಲಯ ಜ್ಞಾನಪ್ರಸಾರ ಮಾಡುತ್ತದೆ. "ಪ್ರಕಟಿಸಿ ಇಲ್ಲವೆ ಅಳಿಯಿರಿ." ಇದು ವಿದ್ವಲ್ಲೋಕದ ಘೋಷಣೆ. ಪ್ರಕಟಣೆಗಳು ಶಿಕ್ಷಕರ ವಾಚನ, ಮನನ, ಲೇಖನ ಹಾಗೂ ಶೈಕ್ಷಣಿಕ ಪ್ರಯತ್ನಗಳೆಲ್ಲದರ ಫಲಶ್ರುತಿ. ತಾನು ಬರೆಯಬೇಕಾದ ವಿಷಯದ ಮೇಲೆ ಇರುವ ಗ್ರಂಥಗಳನ್ನೆಲ್ಲ ತಿರುವಿಹಾಕುವುದರಿಂದ ಲೇಖಕನಿಗೆ ಒಂದು ಪರಿಪ್ರೇಕ್ಷ್ಯ ದೊರಕುತ್ತದೆ; ಇದರಿಂದ ಅವನಿಗೆ ನಿಜವಾಗಿಯೂ ಉಪಯುಕ್ತವಾದ ಒಂದು ಪುಸ್ತಕ ಬರೆದು ಪ್ರಕಟಿಸಲು ಸಾಧ್ಯವಾಗುತ್ತದೆ. ಇಂಥ ಒಂದು ಸಮೀಕ್ಷೆ ಅವನಿಗೆ ಒಂದು ಹಿನ್ನೆಲೆ ಕೊಡುತ್ತದೆ; ಅಲ್ಲದೆ ಅವನಿಗೆ ಇದು ಹಳೆಯ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಲು ಇಲ್ಲವೆ ಹೊಸದೊಂದು ದಾರಿ ಹಾಕಿಕೊಳ್ಳಲು ನೆರವಾಗುತ್ತದೆ.

ಜನಸಾಮಾನ್ಯನ ಮನೆ ಬಾಗಿಲಿಗೇ ಜ್ಞಾನದೀವಿಗೆಯನ್ನು ಒಯ್ಯುವ ಪ್ರಯತ್ನದಲ್ಲಿ ವಿಶ್ವವಿದ್ಯಾಲಯ ತನ್ನ ಪ್ರಕಟಣೆಗಳ ಮಾರಾಟ ನಡೆಸುತ್ತದೆ, ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಟ್ಟ ಕಡೆಗಳಲ್ಲೆಲ್ಲ ಜನಪ್ರಿಯವೂ ವಿದ್ವತ್ಪೂರ್ಣವೂ ಆದ ಉಪನ್ಯಾಸಗಳನ್ನು ಏರ್ಪಡಿಸುತ್ತದೆ, ತನ್ನ ಪ್ರಕಟಣೆಗಳಲ್ಲಿ ಕೆಲವನ್ನು ಆಯ್ದು ಪಟ್ಟಣಗಳಿಗೂ ಊರುಕೇರಿಗಳಿಗೂ ತೆಗೆದುಕೊಂಡು ಹೋಗಿ ಅವುಗಳನ್ನು ಅಗತ್ಯವಿರುವವರಿಗೆ ಎರವಲಾಗಿ ಕೊಡುತ್ತದೆ ; ಅದು ಕಾಲಕಾಲಕ್ಕೆ ಪುಸ್ತಕ ಪ್ರದರ್ಶನಗಳನ್ನು ಏರ್ಪಡಿಸಬಹುದು, ಸರ್ಕ್ಯುಲೇಟಿಂಗ್ ಗ್ರಂಥಾಲಯಗಳನ್ನು ತೆರೆಯಬಹುದು.

ಅಲ್ಲದೆ, ವಿಶ್ವವಿದ್ಯಾಲಯ ಗ್ರಂಥಾಲಯಗಳು ವಿದ್ಯುತ್ ಪರಿವರ್ತಕಗಳಂತೆ ಕೆಲಸ ಮಾಡುತ್ತವೆ. ಉಪಾಧ್ಯಾಯರೂ ವಿದ್ಯಾರ್ಥಿಗಳೂ ಶಕ್ತಿಸಂಚಯಗಳಾದ ಗ್ರಂಥಾಲಯಗಳ ಶಕ್ತಿಯನ್ನು ಉಪಯೋಗಿಸಿಕೊಂಡು ಹೆಚ್ಚು ಶಕ್ತಿಯನ್ನೋ ಆ ಶಕ್ತಿಯ ಇನ್ನೊಂದು ರೂಪವನ್ನೋ ಉತ್ಪತ್ತಿ ಮಾಡುತ್ತಾರೆ. ಅವರ ಓದಿನ ಫಲವಾಗಿ ಅವರೇ ಹೊಸ ಸಿದ್ಧಾಂತಗಳನ್ನು ಮಂಡಿಸುತ್ತಾರೆ, ಬದಲಾವಣೆಗಳನ್ನು ಸೂಚಿಸುತ್ತಾರೆ ; ಮತ್ತು ಇವುಗಳೆಲ್ಲ ಪುಸ್ತಕಗಳು, ನಿಯತಕಾಲಿಕಗಳ ಲೇಖನಗಳು ಮತ್ತಿತರ ಪ್ರಕಟಣೆಗಳ ರೂಪದಲ್ಲಿ ಬೆಳಕು ಕಾಣುತ್ತವೆ. ಪುಸ್ತಕಗಳಿಲ್ಲದೆ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ಅನ್ನಿಸಿಕೊಳ್ಳುವ ಯಾವ ಕೆಲಸವೂ ನಡೆಯುವುದಿಲ್ಲ.

ಕೊನೆಯದಾಗಿ, ವಿಶ್ವವಿದ್ಯಾಲಯಗಳ ಗ್ರಂಥಾಲಯಗಳಿಂದ ವಿಶ್ವವಿದ್ಯಾಲಯದ ವಿಭಾಗದವರಿಗೂ ವಿದ್ಯಾರ್ಥಿಗಳಿಗೂ ವಿದ್ವತ್ಪ್ರಪಂಚದಲ್ಲಿ ಅತಿ ಹೆಚ್ಚಿನ ಮಾನ್ಯತೆ ಪಡೆಯಲು ಸಹಾಯವಾಗುತ್ತದೆ. ವಿದ್ಯಾರ್ಥಿಗಳು ಎಷ್ಟೆಷ್ಟು ಗ್ರಂಥಾಲಯ ಸಂಪತ್ತಿನ ಪ್ರಯೋಜನ ಪಡೆದುಕೊಳ್ಳುತ್ತಾರೋ, ಅಷ್ಟಷ್ಟೂ ಅವರು ತಮ್ಮ ಪರೀಕ್ಷೆಗಳಲ್ಲಿ ಚೆನ್ನಾಗಿ ಮಾಡಬಹುದು. ಆದುದರಿಂದಲೇ ಉನ್ನತ ಶಿಕ್ಷಣವನ್ನು ಆಧುನಿಕ ಗ್ರಂಥಾಲಯದ ಪರಮ ಪ್ರಯೋಜನ ಪಡೆಯುವ ಕಲೆ ಎಂದು ಹೇಳುವುದು.

ಈ ಹಿನ್ನೆಲೆಯಿಂದ ನಾವು ಅಮೆರಿಕ ಹಾಗೂ ಭಾರತೀಯ ವಿಶ್ವವಿದ್ಯಾಲಯಗಳ ಗ್ರಂಥಾಲಯಗಳನ್ನು ಅವಲೋಕಿಸೋಣ.

## ಅಮೆರಿಕ ಹಾಗೂ ಭಾರತ ವಿಶ್ವವಿದ್ಯಾಲಯ ಗ್ರಂಥಾಲಯಗಳ ನೋಟ

12 ವರ್ಷಗಳ ಹಿಂದೆ ನನಗೆ ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ಭೇಟಿ ನೀಡುವ ಸಂಯೋಗ ಒದಗಿತ್ತು. ಅದನ್ನು "ಗ್ರಂಥಾಲಯಗಳ ನಾಡು" ಎಂದು ಕರೆದಿರುವುದು ಯುಕ್ತವಾಗಿಯೇ ಇದೆ. ಅಮೆರಿಕದ ವಿಶ್ವವಿದ್ಯಾಲಯ ಗ್ರಂಥಾಲಯಗಳು ವಿಶ್ವವಿದ್ಯಾಲಯದ ವ್ಯವಹಾರಗಳಲ್ಲಿ ಒಂದು ದೊಡ್ಡ ಹಾಗೂ ಕೇಂದ್ರ ಪಾತ್ರ ವಹಿಸಿರುವುದನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ನನ್ನ ಮನಸ್ಸಿನ ಮೇಲೆ ಆಳವಾದ ಪ್ರಭಾವ ಬೀರಿರುವ ಅಮೆರಿಕದ ವಿಶ್ವವಿದ್ಯಾಲಯ ಗ್ರಂಥಾಲಯಗಳ ಕೆಲವು ಮುಖ್ಯ ಗುಣಲಕ್ಷಣಗಳನ್ನು ಈಗ ಪ್ರಸ್ತಾಪಿಸಿ, ಆ ಹಿನ್ನೆಲೆಯಲ್ಲಿ ನಮ್ಮ ದೇಶದಲ್ಲಿರುವ ಪರಿಸ್ಥಿತಿಯನ್ನು ಪರಿಶೀಲಿಸಬಯಸುತ್ತೇನೆ.

**ಗ್ರಂಥಾಲಯದ ಕಟ್ಟಡ :** ಗ್ರಂಥಾಲಯವೇ "ವಿಶ್ವವಿದ್ಯಾಲಯದ ಕೇಂದ್ರಸ್ಥಾನ"

ಎಂಬ ನುಡಿಯನ್ನು ಅಮೇರಿಕ ಸಂಯುಕ್ತ ಸಂಸ್ಥಾನದಲ್ಲಿ ದಿಟಮಾಡಿ ತೋರಿಸಿದ್ದಾರೆ. ಅಲ್ಲಿ ಗ್ರಂಥಾಲಯ ಕಟ್ಟಡ ಕ್ಯಾಂಪಸಿನ ಕೇಂದ್ರಸ್ಥಾನದಲ್ಲಿದ್ದು ಇತರ ಶಾಖೆಗಳ ಕಟ್ಟಡಗಳೆಲ್ಲ ಅದರ ಸುತ್ತ ಹತ್ತಿರಹತ್ತಿರದಲ್ಲೇ ಇವೆ. ಅದು ಕ್ಯಾಂಪಸಿನ ಎಲ್ಲ ಕಟ್ಟಡಗಳಿಗಿಂತ ಅತ್ಯುತ್ತಮವಾದ ಭಾರಿ ಕಟ್ಟಡ. ಪ್ರಾಯಃ ಎಲ್ಲ ಕಟ್ಟಡಗಳಿಗಿಂತ ಅಲ್ಲೇ ಚಟುವಟಿಕೆ ಹೆಚ್ಚು, ಸಕ್ರಿಯ ಪಾತ್ರ ವಹಿಸುವಂತೆ ಅದನ್ನು ಯೋಜಿಸಲಾಗಿದೆ. ಅಲ್ಲಿ ಎಲ್ಲ ಬಗೆಯ ಆಧುನಿಕ ಸೌಕರ್ಯಗಳೂ ಇವೆ. ನಮ್ಮ ದೇಶದ ವಿಶ್ವವಿದ್ಯಾಲಯ ಗ್ರಂಥಾಲಯಗಳಿಗೆ ಕಾಮಧೇನುವಾಗಿರುವ ವಿಶ್ವವಿದ್ಯಾಲಯ ಧನಸಹಾಯ ಆಯೋಗ ಸ್ಥಾಪಿತವಾದಾಗಿನಿಂದ ಕಳೆದ ದಶಕದ ಅವಧಿಯಲ್ಲಿ ಅನೇಕ ವಿಶ್ವವಿದ್ಯಾಲಯಗಳು ಸ್ವತಂತ್ರವಾದ ಗ್ರಂಥಾಲಯಗಳನ್ನು ಕಟ್ಟಿಕೊಂಡಿವೆ. ಮೊದಲು ಈ ಗ್ರಂಥಾಲಯಗಳೆಲ್ಲ ಬೇರೆಬೇರೆ ವಿಭಾಗಗಳನ್ನೊಳಗೊಂಡ ಒಂದೇ ಕಟ್ಟಡದಲ್ಲಿದ್ದುವು. ಅವುಗಳಲ್ಲಿ ಇತರ ಅನನುಕೂಲಗಳಿದ್ದುದು ಮಾತ್ರವಲ್ಲದೆ ಅವು ಉಸಿರುಕಟ್ಟುವಷ್ಟು ಕಿಷ್ಕಿಂಧವಾಗಿದ್ದುವು. ಈಗ ಅವುಗಳಲ್ಲಿ ಬಹುತೇಕ ಕಟ್ಟಡಗಳ ನೆಲೆ ಆದರ್ಶಪ್ರಾಯವಾಗಿಲ್ಲದಿದ್ದರೂ ಅಲ್ಲಿಯ ಕಾರ್ಯಕ್ರಮಗಳಿಗೆ ಅನುಕೂಲವಾಗಿರುವಂತೆ ಅವುಗಳನ್ನು ಕಟ್ಟಿದ್ದಾರೆ. ದುರದೃಷ್ಟವಶಾತ್, ಒಂದೆರಡು ವಿಶ್ವವಿದ್ಯಾಲಯ ಗ್ರಂಥಾಲಯಗಳ ಸ್ಥಳ ಸರಿಯಾಗಿಲ್ಲ; ಅಲ್ಲದೆ ಅವುಗಳ ಯೋಜನೆಯೂ ಹೊಲಸಾಗಿದೆ. ಉನ್ನತಾಧಿಕಾರದಲ್ಲಿರುವವರು ಗ್ರಂಥಪಾಲನ ಅಭಿಪ್ರಾಯವನ್ನು ಸ್ವೀಕರಿಸದೆ ಅವು ಹೀಗಾಗಿರಬಹುದು, ಇಲ್ಲವೆ ಅವರು ಗ್ರಂಥಪಾಲನ ಸಲಹೆಯನ್ನಾಗಲಿ ಗ್ರಂಥಾಲಯ ಕಟ್ಟಡಗಳನ್ನು ಕಟ್ಟುವುದರಲ್ಲಿ ನಿಷ್ಣಾತನಾದವನೊಬ್ಬನ ಸಲಹೆಯನ್ನಾಗಲಿ ತೆಗೆದುಕೊಳ್ಳುವುದು ಒಳಿತೆಂದು ಭಾವಿಸಿಲ್ಲವೆಂದು ಕಾಣುತ್ತದೆ. ಹೀಗೆ ಮಾಡುವುದು ತುಂಬ ಕೆಟ್ಟದ್ದು. ಈ ಕಟ್ಟಡಗಳ ಮೇಲೆ ಲಕ್ಷಾಂತರ ರೂಪಾಯಿಗಳನ್ನು ಸುರಿದಿರುವುದು ಸಾರ್ವಜನಿಕ ಹಣದ ಅಪವ್ಯಯವಲ್ಲದೆ ಬೇರೇನೂ ಅಲ್ಲ. ಸ್ವತಂತ್ರವಾದ ಗ್ರಂಥಾಲಯ ಕಟ್ಟಡಗಳನ್ನು ಕಟ್ಟುವ ಯೋಜನೆ ಹಾಕಿಕೊಂಡಿರುವ ಇತರ ವಿಶ್ವವಿದ್ಯಾಲಯಗಳು ಈ ಅನುಭವಗಳಿಂದ ಪಾಠಕಲಿತುಕೊಳ್ಳಬೇಕೆಂದು ನಾವು ಆಶಿಸಬಹುದು, ಅಷ್ಟೆ.

**ವಿಶ್ವವಿದ್ಯಾಲಯದ ಗ್ರಂಥಥಾಲ** : ಅಮೇರಿಕನ್ ವಿಶ್ವವಿದ್ಯಾಲಯದ ಗ್ರಂಥಪಾಲನಿಗೆ ಕ್ಯಾಂಪಸಿನಲ್ಲಿ ಅಸೂಯೆ ಹುಟ್ಟಿಸುವಷ್ಟು ಉನ್ನತಸ್ಥಾನವಿದೆ. ವಿಶ್ವವಿದ್ಯಾಲಯದ ವ್ಯವಸ್ಥೆಯಲ್ಲಿ ಅವನೊಬ್ಬ ಪ್ರಮುಖ ವ್ಯಕ್ತಿ. ನನಗೆ ಕೊಲರ್‍ಯಾಡೋದ ಬೋಲ್ಡರ್‌ನ ಗ್ರಂಥಾಲಯದಲ್ಲಿ ಸುಮಾರು ಮೂರು ತಿಂಗಳ ಕಾಲ ಕೆಲಸ ಮಾಡುವ ಸದವಕಾಶ ಒದಗಿತ್ತು. ಆಗ ತಾನೆ ಅಲ್ಲಿ ಗ್ರಂಥಾಲಯಗಳ ನಿರ್ದೇಶಕರನ್ನು ಆ ವಿಶ್ವವಿದ್ಯಾಲಯದ ಉಪಾಧ್ಯಕ್ಷರನ್ನಾಗಿ ಬಡತಿ ಮಾಡಿದ್ದರು. ಹಾರ್ವರ್ಡ್ ವಿಶ್ವವಿದ್ಯಾಲಯದ ಗ್ರಂಥಪಾಲರಾದ ಪಾಲ್ ಬಕ್ ಅವರು ಆ ವಿಶ್ವವಿದ್ಯಾಲಯದ ಅಧ್ಯಕ್ಷ ಆಗಿದ್ದಾರೆ. ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದಲ್ಲಿ ವಿಶ್ವವಿದ್ಯಾಲಯ ಗ್ರಂಥಪಾಲರು ಆ ವಿಶ್ವವಿದ್ಯಾಲಯದ ಕುಲಪತಿಯಾಗಿಯೂ ಕೆಲಸ ಮಾಡುತ್ತಿದ್ದಾರೆ. ಇವೆಲ್ಲ ಅಂಶಗಳಿಂದ, ಇಂಥ ಪ್ರಮುಖಸ್ಥಾನಕ್ಕೆ ಹೆಚ್ಚುಕಡಮೆ ಅತ್ಯುತ್ತಮರಾದವರನ್ನೇ ನೇಮಿಸುತ್ತಾರೆ ಎಂಬ ಅಂಶ ಸಿದ್ಧವಾಗುತ್ತದೆ.

ಭಾರತವನ್ನು ಬ್ರಿಟಿಷರು ಆಳುತ್ತಿದ್ದಾಗ ಅವರು ಉನ್ನತ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಗ್ರಂಥಾಲಯ ವಿಭಾಗವನ್ನು ಶುದ್ಧಾಂಗವಾಗಿ ಮೂಲೆಗೆ ತಳ್ಳಿದ್ದರು. ಪರಿಣಾಮವಾಗಿ

ಗ್ರಂಥಪಾಲನ ಸ್ಥಾನಕ್ಕೆ ಯಾವುದೇ ಪ್ರಾಮುಖ್ಯವನ್ನೂ ಕೊಟ್ಟಿರಲಿಲ್ಲ. ಕೆಲವೆಡೆ ಶುದ್ಧ ಅಧ್ಯಕ್ಷನಾದ ಆಡಳಿತಗಾರನನ್ನೋ ತನ್ನ ವೃತ್ತಿಯಲ್ಲಿ ಸಂಪೂರ್ಣವಾಗಿ ವಿಫಲನಾದ ಒಬ್ಬ ಉಪಾಧ್ಯಾಯನನ್ನೋ ಗ್ರಂಥಾಲಯ ವಿಭಾಗಕ್ಕೆ ತಂದು ಹಾಕುತ್ತಿದ್ದರು. ಆರ್ಥಿಕ ಹಾಗೂ ಸಾಂಸ್ಕೃತಿಕ ಗೊಂದಲದಲ್ಲಿ ಸಿಲುಕಿ ಒದ್ದಾಡುತ್ತಿದ್ದ ಸ್ವತಂತ್ರ ಭಾರತಕ್ಕೆ ತನ್ನ ಗೊಂದಲಮಯ ಸನ್ನಿವೇಶದಿಂದ ಪಾರಾಗಲು ಆಡಳಿತಗಾರರು, ವಿಜ್ಞಾನಿಗಳು, ಸಂಶೋಧಕರು, ತಂತ್ರಜ್ಞರು ಮೊದಲಾದವರ ಭಾರೀ ಸೈನ್ಯವೇ ಬೇಕಿತ್ತು. ಅಲ್ಲದೆ ಸ್ವತಂತ್ರ ಭಾರತ ಪ್ರಜಾ ಸತ್ತಾತ್ಮಕ ಜೀವನ ವಿಧಾನಕ್ಕೆ ಕಂಕಣಬದ್ಧವಾಗಿತ್ತು. ಪ್ರಜಾಸತ್ತೆ ಯಶಸ್ವಿಯಾಗಬೇಕಾದರೆ ಜುನಾಯಕ ಸಮುದಾಯ ತಿಳಿವಳಿಕೆಯುಳ್ಳದ್ದಾಗಿರಲೇಬೇಕು. ಈ ಅಂಶಗಳೆಲ್ಲ ಆಗ ಅಧಿಕಾರ ದಲ್ಲಿದ್ದವರನ್ನು ವಿಶ್ವವಿದ್ಯಾಲಯಗಳ ಹಾಗೂ ಇತರ ವಿದ್ಯಾಸಂಸ್ಥೆಗಳ ಸಂಖ್ಯೆಯನ್ನು ಹೆಚ್ಚಿಸು ವುದು ಮಾತ್ರವಲ್ಲದೆ ಸಂಶೋಧನೆಗೂ ಹೆಚ್ಚು ಪ್ರಾಮುಖ್ಯ ನೀಡುವಂತೆ ಪ್ರೇರಿಸಿದುವು. ಇದರ ಪರಿಣಾಮವಾಗಿ, ಕೆಲಸಕ್ಕೆ ಬಾರದ ಕಂತೆ, ಭೋಗದ ಬಾಬತ್ತು ಎಂದೆಲ್ಲ ಪರಿಗಣಿಸ ಲಾಗಿದ್ದ ಗ್ರಂಥಾಲಯ ವಿಭಾಗ ಇದ್ದಕ್ಕಿದ್ದಂತೆ ಅತ್ಯಾವಶ್ಯಕವಾದುದು ಎಂದಾಯಿತು. ಸಿ. ಡಿ. ದೇಶ್‌ಮುಖ್ ಅವರು ಆಗ ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಅಧ್ಯಕ್ಷ ರಾಗಿದ್ದರು. ಅವರ ಶ್ರೇಷ್ಠ ನೇತೃತ್ವದಲ್ಲಿ ಆಯೋಗ ಗ್ರಂಥಾಲಯಕ್ಕೆ ಸಲ್ಲಬೇಕಾದ ಗಣ್ಯ ಸ್ಥಾನವನ್ನು ಕೊಡಲು ತೀರ್ಮಾನಿಸಿತು. ಪರಿಣಾಮವಾಗಿ, ಗ್ರಂಥಾಲಯಗಳಲ್ಲಿನ ಗ್ರಂಥಪಾಲ ಹಾಗೂ ಇತರ ಹುದ್ದೆಗಳನ್ನು ಬಡತಿಮಾಡಿ ಅವುಗಳನ್ನು ಅಧ್ಯಾಪನ ವಿಭಾಗಗಳಲ್ಲಿನ ಹುದ್ದೆ ಗಳಿಗೆ ಸಮ ಮಾಡಿದರು. ಇದರಿಂದ ಗ್ರಂಥಾಲಯ ವ್ಯವಸ್ಥೆ ಉತ್ತಮಗೊಂಡಿದೆ; ಮತ್ತು ಗ್ರಂಥಾಲಯಗಳು ಒಂದೇ ಸಮನೆ ಹೆಚ್ಚುತ್ತಿರುವ ವಿದ್ಯಾರ್ಥಿಗಳ ಹಾಗೂ ಅಧ್ಯಾಪಕವರ್ಗ ದವರ ಆವಶ್ಯಕತೆಗಳನ್ನು ಮಾತ್ರವಲ್ಲದೆ ಸಂಶೋಧಕರ ಅಗತ್ಯಗಳನ್ನೂ ಪೂರೈಸಲು ಸಜ್ಜುಗೊಳ್ಳುತ್ತಿವೆ.

ಇಲ್ಲಿ ಕೆಲವು ಅಡಚಣೆಗಳೇನೋ ಇವೆ. ಅವುಗಳಲ್ಲಿ ಮುಖ್ಯವಾದದ್ದೆಂದರೆ, ವಿಶ್ವ ವಿದ್ಯಾಲಯ ಗ್ರಂಥಾಲಯ ಕಾರ್ಯ ನಿರ್ವಹಿಸಲು ಗ್ರಂಥಾಲಯ ವಿಜ್ಞಾನದಲ್ಲಿ ಡಿಪ್ಲೊಮಾ ಅಥವಾ ಡಿಗ್ರಿ ಪದವಿಯುಳ್ಳ ಒಬ್ಬ ಪದವೀಧರ ಸಾಕು ಎಂಬ ಅಭಿಪ್ರಾಯ ಶಿಕ್ಷಣ ಕ್ಷೇತ್ರದ ಕೆಲವು ಆಡಳಿತಾಧಿಕಾರಿಗಳ ಮನಸ್ಸುಗಳಲ್ಲಿ ಇನ್ನೂ ಬೇರೂರಿರುವುದು. ಗ್ರಂಥಾಲಯದ ಕಟ್ಟಡಗಳು, ಸಜ್ಜುಸರಂಜಾಮು ಮತ್ತು ಪುಸ್ತಕಗಳಿಗಾಗಿ ಹೂಡಿರುವ ಭಾರಿ ಹಣವನ್ನು ಸಮರ್ಥವಾದ ಗ್ರಂಥಾಲಯ ಸೇವೆಯನ್ನಾಗಿ ಮಾರ್ಪಡಿಸುವ ಹೊಣೆಹೊತ್ತಿರುವ ಸಿಬ್ಬಂದಿವರ್ಗ ಗ್ರಂಥಾಲಯದಲ್ಲಿ ಅಧ್ಯಯನ ಮಾಡುವ ಸಂಶೋಧಕರೊಡನೆ ಅವರವರ ಕ್ಷೇತ್ರಗಳ ಬಗೆಗೆ ಸಂಭಾಷಿಸಲು ಮತ್ತು ಗ್ರಂಥಗಳ ನೋಂದಣಿ, ಸೂಚೀಕರಣ, ಸಂಗ್ರಹಣಗಳನ್ನು ಕೈಗೊಳ್ಳಲು ಸಮರ್ಥರಾಗಿರಬೇಕು ಎಂಬ ವಿಷಯವನ್ನು ಈ ಆಡಳಿತಾಧಿಕಾರಿಗಳು ಮರೆತೇಬಿಡುತ್ತಾರೆ. ಆಧುನಿಕ ವಿಶ್ವವಿದ್ಯಾಲಯ ಗ್ರಂಥಾಲಯದ ಸಿಬ್ಬಂದಿವರ್ಗದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ತುಂಬ ಅರ್ಹರೂ ತರಬೇತು ಪಡೆದವರೂ ಇರಬೇಕು; ಅದರಲ್ಲಿ ವಿಷಯತಜ್ಞರೂ ಇರಬೇಕು.

ಇನ್ನೊಂದು ಸ್ವಾರಸ್ಯವಾದ ಸಂಗತಿ ನಮ್ಮ ಗಮನಕ್ಕೆ ಬರುತ್ತದೆ. ಅಮೆರಿಕದ ಹೆಚ್ಚು ಕಡಮೆ ಎಲ್ಲ ವಿಶ್ವವಿದ್ಯಾಲಯ ಗ್ರಂಥಾಲಯಗಳಲ್ಲೂ ಬೇರೆ ಬೇರೆ ರಾಜ್ಯಗಳನ್ನು ಪ್ರತಿ

ನಿಧಿಸುವ ಸಿಬ್ಬಂದಿಗಳಿದ್ದಾರೆ. ಸಿಬ್ಬಂದಿಯನ್ನು ರಾಜ್ಯದಿಂದ ರಾಜ್ಯಕ್ಕೆ ವರ್ಗಾಯಿಸುವುದರಿಂದ ಅನೇಕ ಪ್ರಯೋಜನಗಳುಂಟು. ಸಾಮಾನ್ಯವಾಗಿ ಅಮೆರಿಕದಲ್ಲಿ ತಂದೆತಾಯಿಗಳು ಮಕ್ಕಳನ್ನು ತಮ್ಮ ಊರ ಹೊರಗಣ ಕಾಲೇಜು, ವಿಶ್ವವಿದ್ಯಾಲಯಗಳಿಗೆ ಕಳಿಸುವುದು ಮಾತ್ರವಲ್ಲದೆ, ತಮ್ಮ ರಾಜ್ಯದ ಹೊರಗಣ ಕಾಲೇಜು, ವಿಶ್ವವಿದ್ಯಾನಿಲಯಗಳಿಗೂ ಕಳಿಸುತ್ತಾರೆ. ನಾವು ಈ ಮೇಲ್ಪಂಕ್ತಿಯನ್ನು ಅತಿ ತುರ್ತಾಗಿ ಅನುಸರಿಸಬೇಕು. ಇದರಿಂದ ನಮಗೆ ಅರ್ಹರಾದ ಸಿಬ್ಬಂದಿವರ್ಗ ದೊರಕುವುದಲ್ಲದೆ ಹೆಚ್ಚಿನ ಮಟ್ಟದಲ್ಲಿ ರಾಷ್ಟ್ರೀಯ ಏಕತೆಯನ್ನು ಸಾಧಿಸಲೂ ಸಾಧ್ಯವಾಗಬಹುದು.

ಗ್ರಂಥಗಳ ಬಳಕೆಯನ್ನು ಅಭಿವೃದ್ಧಿಪಡಿಸಬೇಕೆಂಬ ಸಿದ್ಧಾಂತದ ಪ್ರತಿಪಾದಕರಿಂದ ಪ್ರಭಾವಿತರಾದ ಅಧಿಕಾರಿಗಳೂ ಕೆಲಸಗಾರರೂ ಅಮೆರಿಕದ ವಿಶ್ವವಿದ್ಯಾಲಯ ಗ್ರಂಥಾಲಯಗಳಲ್ಲಿದ್ದಾರೆ. ಪರಿಣಾಮವಾಗಿ, ಅಲ್ಲಿಯ ಗ್ರಂಥಾಲಯಗಳನ್ನು ಶೈಕ್ಷಣಿಕ ಹಾಗೂ ಸಂಶೋಧನ ಮಟ್ಟದಲ್ಲಿ ನಡೆಸುತ್ತಿದ್ದಾರೆಯೇ ಹೊರತು ಗೃಹಕೃತ್ಯದ ಮಟ್ಟದಲ್ಲಲ್ಲ. ಈ ಗ್ರಂಥಾಲಯಗಳು ತುಂಬ ಸಕ್ರಿಯವಾದ ಪಾತ್ರವನ್ನು, ಹೆಚ್ಚು ಕಡಮೆ ಕ್ರಾಂತಿಕಾರಿ ಪಾತ್ರವನ್ನು ವಹಿಸುತ್ತವೆ. ಈ ತತ್ತ್ವದಿಂದ ಪ್ರೇರಿತವಾಗಿ ಅಮೆರಿಕದ ಗ್ರಂಥಾಲಯಗಳು ಹೊಸಬರಿಗೆ ಪ್ರವರ್ತಕ ವ್ಯಾಸಂಗ ಕ್ರಮಗಳನ್ನು ಉಪಕ್ರಮಿಸುವುವು : ಸೊಗಸಾಗಿ ಬರೆದು ಸುಂದರವಾಗಿ ಮುದ್ರಿಸಿದ ಗ್ರಂಥಾಲಯ ಕೈಪಿಡಿಗಳನ್ನು ಹೊರಡಿಸುತ್ತವೆ ; ಎಲ್ಲರೂ ಪುಸ್ತಕಗಳನ್ನು ಎರವಲು ಪಡೆಯಬಹುದಾದಂತೆ ಮುಕ್ತವ್ಯವಸ್ಥೆಯನ್ನು ಜಾರಿಗೆ ತರುತ್ತವೆ ; ಪರಾಮರ್ಶನ ವಿಭಾಗ, ವಿಸ್ತರಣ ವಿಭಾಗ, ಶ್ರವಣ ವೀಕ್ಷಣ ವಿಭಾಗ, ಸರ್ಕಾರಿ ದಾಖಲೆಗಳ ವಿಭಾಗ, ಸ್ವತಂತ್ರವಾದ ಸ್ನಾತಕಪೂರ್ವ ಗ್ರಂಥಾಲಯಗಳು, ಲಘು ವಾಚನಾಲಯಗಳು, ಶಯನ ಗ್ರಂಥಾಲಯಗಳು, ಸಹಕಾರೀ ಕಾರ್ಯಕ್ರಮಗಳು–ಇವೇ ಮೊದಲಾದ ಹಲವಾರು ವಿಭಾಗಗಳನ್ನು ಒದಗಿಸುತ್ತವೆ. ಈ ಯೋಜನೆಗಳಲ್ಲಿ ಮುಖ್ಯವಾದ ಕೆಲವನ್ನು ಸ್ವಲ್ಪ ವಿಸ್ತಾರವಾಗಿ ಇಲ್ಲಿ ಹೇಳಿದೆ. ಇವುಗಳನ್ನು ಇಲ್ಲಿ ಸಂಪೂರ್ಣವಾಗಿ ಕಾರ್ಯರೂಪಕ್ಕೆ ತಂದರೆ ನಮ್ಮ ಗ್ರಂಥಾಲಯಗಳು ಶ್ರೇಷ್ಠ ವಿದ್ವತ್ಕೇಂದ್ರಗಳಾಗುವುವು. ಈಗ ಪರಾಮರ್ಶನವಿಭಾಗದಿಂದ ಆರಂಭಿಸೋಣ :

**ಪರಾಮರ್ಶನ ವಿಭಾಗ :** ಅಮೆರಿಕದ ಗ್ರಂಥಾಲಯಗಳಲ್ಲಿ ಪರಾಮರ್ಶನ ವಿಭಾಗ ಗ್ರಂಥಗಳ ಬಳಕೆಯನ್ನು ಅಭಿವೃದ್ಧಿಪಡಿಸಲು ಬಹಳಷ್ಟು ಕಾರಣವಾಗಿದೆ. ಪರಾಮರ್ಶನ ವಿಭಾಗದ ಸಿಬ್ಬಂದಿ ವರ್ಗ ಓದುಗರಿಗೆ ಮಾರ್ಗದರ್ಶಿ, ಉಪದೇಶಕ, ಮಿತ್ರ. ಎಳೆಯರು ಗ್ರಂಥಾಲಯಗಳಲ್ಲಿ ಸ್ವತಃ ಕಾರ್ಯೋದ್ಯುಕ್ತರಾಗುವಂತೆ ಅಲ್ಲಿ ಪುಸ್ತಿಕೆಗಳನ್ನು ತಯಾರಿಸುತ್ತಾರೆ, ದೊಡ್ಡ ದೊಡ್ಡ ವಿದ್ವಾಂಸರ ಹಾಗೂ ಸಂಶೋಧಕರ ಪ್ರಯೋಜನಕ್ಕಾಗಿ ವಿಶೇಷ ವಿಷಯಗಳನ್ನು ಕುರಿತು ಗ್ರಂಥಸೂಚಿಗಳನ್ನು ತಯಾರಿಸುತ್ತಾರೆ ; ಜ್ಞಾನಾನ್ವೇಷಣೆಯಲ್ಲಿ ಓದುಗರಿಗೆ ಅನುಕೂಲವಾಗಬಹುದಾದ ಎಲ್ಲ ಕೆಲಸಕಾರ್ಯಗಳನ್ನೂ ಮಾಡುತ್ತಾರೆ.

ಪರಾಮರ್ಶನ ವಿಭಾಗದ ಸಿಬ್ಬಂದಿವರ್ಗ ಓದುಗರ ಆಸಕ್ತಿಯನ್ನು ತೀವ್ರಗೊಳಿಸುವ ಶಕ್ತಿಯಾಗಿ ವರ್ತಿಸುತ್ತದೆ. ಗ್ರಂಥಸಂಗ್ರಹ ಒಂದೇ ಸಮನೆ ಹೆಚ್ಚುತ್ತಿರುವುದು, ವರ್ಗೀಕರಣ ವಿಧಾನಗಳ ಹಾಗೂ ಕಾರ್ಡ್ ಕ್ಯಾಟಲಾಗಿನ ಸಂಕೀರ್ಣತೆ, ಚೆದುರಿಹೋಗಿರುವ ದೊಡ್ಡ ದೊಡ್ಡ

ಕಟ್ಟಡಗಳ ಸನ್ನಿವೇಶ, ಎಲ್ಲಕ್ಕಿಂತ ಹೆಚ್ಚಾಗಿ ಆಧುನಿಕ ಗ್ರಂಥಾಲಯಗಳಲ್ಲಿ ಸ್ವತಃ ಓಡಾಡಲು ಹೊಸ ಓದುಗರ ಹಿಂಜರಿಯುವಿಕೆ—ಇವೆಲ್ಲ ಕಾರಣಗಳಿಂದ ಆಧುನಿಕ ಗ್ರಂಥಾಲಯಗಳಲ್ಲಿ ಪರಾಮರ್ಶನ ವಿಭಾಗವನ್ನು ತೆರೆಯುವ ಆವಶ್ಯಕತೆ ವಿಪರೀತವಾಗಿದೆ. ಪರಾಮರ್ಶನ ವಿಭಾಗವಲ್ಲಿ ತೀಕ್ಷ್ಣಮತಿಗಳೂ ವಿಶಾಲ ಮನೋಭಾವವುಳ್ಳವರೂ ಇದ್ದರೆ ಗ್ರಂಥಾಲಯದಲ್ಲಿ ಪವಾಡವನ್ನೇ ಸಾಧಿಸಬಹುದು. ತುಂಬ ಅನುಕೂಲವಾದ ಒಂದೆರಡು ಗ್ರಂಥಾಲಯಗಳನ್ನು ಬಿಟ್ಟರೆ ನಮ್ಮ ದೇಶದ ಅನೇಕ ವಿಶ್ವವಿದ್ಯಾಲಯ ಗ್ರಂಥಾಲಯಗಳಲ್ಲಿ ಇನ್ನೂ ಪರಾಮರ್ಶನ ವಿಭಾಗಗಳನ್ನು ತೆರೆಯಬೇಕಾಗಿದೆ.

**ಗ್ರಂಥಾಲಯದ ವೇಳೆ :** ಪರಾಮರ್ಶನ ಸೇವೆಯ ಅನಂತರ ವಾಚನ ಸಾಮಗ್ರಿಯ ಬಳಕೆಯನ್ನು ಹೆಚ್ಚಿಸಿರುವ ಇತರ ಯೋಜನೆಗಳೆಂದರೆ ಮುಕ್ತ ಪ್ರವೇಶ ಪದ್ಧತಿ, ಕೇಂದ್ರೀಕೃತ ಗ್ರಂಥಾಲಯ ಸೇವೆಗಳು ಮೊದಲಾದವು. ಭಾರತದಲ್ಲೂ ಈ ಯೋಜನೆಗಳು ಬಳಕೆಯಲ್ಲಿರುವುದರಿಂದ, ನಾನು ಅಮೆರಿಕ ಸಂಯುಕ್ತ ಸಂಸ್ಥಾನದ ಗ್ರಂಥಾಲಯಗಳನ್ನು ಓದುಗರಿಗೆ ಎಷ್ಟು ಹೆಚ್ಚು ಹೊತ್ತು ತೆರೆಯುತ್ತಾರೆಂಬುದನ್ನು ಹೇಳಬಯಸುತ್ತೇನೆ. ಸಂಯುಕ್ತ ಸಂಸ್ಥಾನದಲ್ಲಿ ಬಹುತೇಕ ವಿಶ್ವವಿದ್ಯಾಲಯ ಗ್ರಂಥಾಲಯಗಳನ್ನು ಹೆಚ್ಚು ಹೊತ್ತು ತೆಗೆದಿರುತ್ತಾರೆ. ಅವುಗಳಲ್ಲಿ ಕೆಲವು ಬೆಳಗ್ಗೆ 7ರಿಂದ ಮಧ್ಯರಾತ್ರಿಯ ವರೆಗೆ, ಅಂದರೆ ದಿನಕ್ಕೆ ಸುಮಾರು 17 ಗಂಟೆಗಳ ಕಾಲ, ತೆರೆದಿರುತ್ತವೆ ! ಈಚೀಚೆಗೆ ನಮ್ಮ ದೇಶದಲ್ಲೂ ಗ್ರಂಥಾಲಯಗಳು ಕೆಲಸಮಾಡುವ ಅವಧಿಯನ್ನು ವಿಸ್ತರಿಸಲಾಗಿದೆ ; ಆದರೂ ಅದು ದಿನಕ್ಕೆ ಸಾಧಾರಣ 10 ಘಂಟೆಗಳಾಗಬಹುದು. ಗಂಥಾಲಯಗಳನ್ನು ಹೆಚ್ಚು ಕಾಲ ತೆರೆದರೆ ವಿದ್ಯಾರ್ಥಿಗಳು ವಾಚನ ಮಂದಿರಗಳಲ್ಲಿ ಕಿಕ್ಕಿರಿದಿರುತ್ತಾರೆ ಎಂಬ ನನ್ನ ನಂಬಿಕೆ ಬಲವಾಗುತ್ತಿದೆ. ನಮ್ಮ ವಿದ್ಯಾರ್ಥಿಗಳಲ್ಲಿ ಬಹುಪಾಲು ಕಡಮೆ ಆದಾಯ ವರ್ಗಕ್ಕೆ ಸೇರಿದವರು. ಅವರಿಗೆ ವ್ಯಾಸಂಗಕ್ಕಾಗಿ ತಮ್ಮ ತಮ್ಮ ಮನೆಗಳಲ್ಲಿ ಪ್ರತ್ಯೇಕವಾದ ಕೊಠಡಿಗಳಿರುವುದಿಲ್ಲ. ಒಂದು ಪಕ್ಷ ಅವರಿಗೆ ಪ್ರತ್ಯೇಕ ಕೊಠಡಿಗಳಿದ್ದರೂ ಪ್ರೌಢ ಅಧ್ಯಯನಕ್ಕೆ ಬೇಕಾದ ಶಾಂತ ವಾತಾವರಣ ಅವರಿಗೆ ಇರುವುದಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ, ಅನೇಕರ ಹತ್ತಿರ ಅತ್ಯವಶ್ಯ ಪರಾಮರ್ಶನ ಗ್ರಂಥಗಳು–ಉದಾಹರಣೆಗೆ ಒಳ್ಳೆಯ ನಿಘಂಟು, ಒಳ್ಳೆಯ ವಿಶ್ವಕೋಶ ಮೊದಲಾದವು–ಇರುವುದಿಲ್ಲ. ಒಂದು ವಿಷಯವನ್ನು ಚೆನ್ನಾಗಿ ಅರಿತುಕೊಳ್ಳಬೇಕಾದರೆ ಈ ಪರಾಮರ್ಶನ ಗ್ರಂಥಗಳ ಆವಶ್ಯಕತೆ ತುಂಬ ಇದೆ. ಗ್ರಂಥಾಲಯಗಳನ್ನು ಅಲ್ಪಕಾಲ ತೆಗೆಯುವುದರಿಂದ ನಮ್ಮಲ್ಲಿರುವ ಅಲ್ಪ ಗ್ರಂಥಸಂಪತ್ತಿನ ಬಳಕೆಯನುಳಿ ಓದುಗರಿಗೆ ತಪ್ಪಿಸಿದಂತಾಗುತ್ತದೆ. ಸಂಯುಕ್ತ ಸಂಸ್ಥಾನದಂತಹ ಶ್ರೀಮಂತ ದೇಶದಲ್ಲೇ ತಮ್ಮ ಗ್ರಂಥಾಲಯಗಳನ್ನು ಜನರು ಎಚ್ಚರವಾಗಿರುವಷ್ಟು ಕಾಲ ತೆರೆಯುವಾಗ ನಮ್ಮ ಸಮಾಜದಂತಹ ಬೆಳೆಯುತ್ತಿರುವ ಸಮಾಜದಲ್ಲಿ ಮುಂದಿನ ಆಡಳಿತಗಾರರು, ಉಪಾಧ್ಯಾಯರು, ಯೋಜಕರು, ತಂತ್ರಜ್ಞರು ಮತ್ತು ವಿಜ್ಞಾನಿಗಳ ಉಪಯೋಗಕ್ಕಾಗಿ ಗ್ರಂಥಾಲಯಗಳ ಕೆಲಸದ ವೇಳೆಯನ್ನು ವಿಸ್ತರಿಸುವುದು ಹೆಚ್ಚು ಸೂಕ್ತವೆಂದು ಕಾಣುತ್ತದೆ.

**ಶ್ರವಣ–ವೀಕ್ಷಣ ಸಾಧನಗಳು :** ಶ್ರವಣ–ವೀಕ್ಷಣ ವಿಭಾಗ ವಿಶ್ವವಿದ್ಯಾಲಯ ಗ್ರಂಥಾಲಯದ ಇನ್ನೊಂದು ಮುಖ್ಯ ಅಂಗ. ಅಮೆರಿಕದ ವಿಶ್ವವಿದ್ಯಾಲಯಗಳಲ್ಲಿ ಹೆಚ್ಚು ಕಡಮೆ ಎಲ್ಲ ವಿಭಾಗಗಳ ಉಪಾಧ್ಯಾಯರೂ ತಮ್ಮತಮ್ಮ ತರಗತಿ ಉಪನ್ಯಾಸಗಳಿಗೆ ಪೂರಕವಾಗಿ, ಪೋಷಕವಾಗಿ ಶ್ರವಣ–ವೀಕ್ಷಣ ಸಾಧನಗಳನ್ನು ಧಾರಾಳವಾಗಿ ಬಳಸುತ್ತಾರೆ. ಇವು

ಗಳಲ್ಲಿ ಚಲನಚಿತ್ರಗಳು ಸ್ಲೈಡುಗಳು, ಕಿರುಜಾರುಚಿತ್ರಗಳು, ಲಿಂಗ್ವಫೋನು, ದೀರ್ಘಾವಧಿಯ ಧ್ವನಿಮುದ್ರಿಕೆಗಳು ಮೊದಲಾದುವೆಲ್ಲ ಇರುತ್ತವೆ. ಬೋಧನ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಈ ಸಾಧನಗಳ ಪ್ರಾಮುಖ್ಯ ಎಷ್ಟೆಂಬುದನ್ನು ಎಷ್ಟು ಒತ್ತಿಹೇಳಿದರೂ ಸಾಲದು. ಅವು ತರಗತಿ ಉಪನ್ಯಾಸಗಳಿಗೆ ಹೆಚ್ಚಿನ ಅರ್ಥವನ್ನೂ ನೈಜತೆಯ ಅರಿವನ್ನೂ ಕೊಡುತ್ತವೆ. ಷೇಕ್ಸ್‌ಪಿಯರರ 'ಒಥೆಲೊ' ನಾಟಕವನ್ನು ಬೋಧಿಸುವವನು ಈ ನಾಟಕದ ಧ್ವನಿವಾಹಿನಿಯನ್ನು ಹಾಕುವುದರಿಂದ ಇಲ್ಲವೆ ಚಿತ್ರವನ್ನು ತೋರಿಸುವುದರಿಂದ ನಾಟಕವನ್ನು ಇನ್ನೂ ಚೆನ್ನಾಗಿ ವಿದ್ಯಾರ್ಥಿಗಳಿಗೆ ಹೇಳಿಕೊಡಬಹುದು ಶಸ್ತ್ರಚಿಕಿತ್ಸೆಯ ಅಧ್ಯಾಪಕ ಈ ದೇಶದಲ್ಲಿ ಕಾಣಸಿಗದ ತಂತ್ರಗಳು ಹಾಗೂ ಉಪಕರಣಗಳಿಂದ ನ್ಯೂಯಾರ್ಕ್ ಆಸ್ಪತ್ರೆಯಲ್ಲಿ ನಡೆದ ಒಂದು ಮುಖ್ಯವಾದ ಶಸ್ತ್ರಚಿಕಿತ್ಸೆಯ ಚಿತ್ರವನ್ನು ತೋರಿಸಿ ವಿದ್ಯಾರ್ಥಿಗಳಿಗೆ ಮಂದಟ್ಟಾಗುವಂತೆ ಹೇಳಿಕೊಡಬಹುದು. ವಿದೇಶೀ ಭಾಷೆಗಳನ್ನು ಕಲಿಯುವ ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ತರಗತಿ ಪಾಠಗಳ ಜೊತೆಗೆ ಲಿಂಗ್ವಫೋನ್ ರೆಕಾರ್ಡುಗಳೂ ಅತ್ಯುತ್ತಮ ಬೋಧನ ಸಾಧನಗಳು.

ನಮ್ಮಲ್ಲಿ ಕೆಲವು ಗ್ರಂಥಾಲಯಗಳು ಶ್ರವಣ-ವೀಕ್ಷಣ ಸಾಧನಗಳನ್ನು ಸ್ಥಾಪಿಸಲಾರಂಭಿಸಿವೆ; ಈ ಯೋಜನೆಯನ್ನು ಭರದಿಂದ ಮುಂದುವರಿಸಬೇಕು. ಸದ್ಯದಲ್ಲಿ ಜಾರಿಯಲ್ಲಿರುವ ಆಮದು ನಿರ್ಬಂಧಗಳನ್ನು ಸಡಿಲಗೊಳಿಸಬೇಕೆಂದು ಕೇಂದ್ರಸರ್ಕಾರವನ್ನು ಕೇಳಿಕೊಳ್ಳಬೇಕು.

**ಗ್ರಂಥಾಲಯ ಸಹಕಾರ** : ಸಂಯುಕ್ತ ಸಂಸ್ಥಾನಕ್ಕೆ ಭೇಟಿನೀಡುವವರೆಲ್ಲರ ಅರಿವಿಗೆ ಬರುವ ಇನ್ನೊಂದು ಮುಖ್ಯ ಸಂಗತಿಯೆಂದರೆ ಅಲ್ಲಿಯ ಗ್ರಂಥಾಲಯಗಳ ಸಹಕಾರ. ಗ್ರಂಥಾಲಯ ಸಹಕಾರವೆಂದರೆ, ಪೋಷಕರ ವಿಷಯದಲ್ಲಿ, ಅವರು ಸದಸ್ಯರಾಗಿರುವ ಗ್ರಂಥಾಲಯಗಳಲ್ಲಿ ಮಾತ್ರವಲ್ಲದೆ ದೇಶದ, ಇಡೀ ಜಗತ್ತಿನ ಎಲ್ಲ ಗ್ರಂಥಾಲಯಗಳಲ್ಲಿ ವಾಚನ ಹಾಗೂ ಪರಾಮರ್ಶನ ಸಾಮಗ್ರಿಗಳನ್ನು ಬಳಸಲು ಯಾವ ನಿರ್ಬಂಧವೂ ಇರಕೂಡದು.

ಗ್ರಂಥಾಲಯಗಳ ನಡುವೆ ಎರವಲನ್ನು ಕೊಡುವುದು, ಗ್ರಂಥಗಳು ಹಾಗೂ ನಿಯತಕಾಲಿಕಗಳ ಸಂಯೋಜಿತ ಕ್ಯಾಟಲಾಗುಗಳನ್ನು ತಯಾರಿಸುವುದು, ವಾಚನ ಸಾಮಗ್ರಿಗಳನ್ನು ಪಡೆದುಕೊಳ್ಳಲು ಸಹಕರಿಸುವುದು, ವೃತ್ತಪತ್ರಿಕೆಗಳು ಅಪರೂಪವಾದ ಗ್ರಂಥಗಳು ಮೊದಲಾದುವುಗಳ ಸೂಕ್ಷ್ಮ ಛಾಯಾಚಿತ್ರಗಳನ್ನು ತೆಗೆಯುವ ಯೋಜನೆಗಳಲ್ಲಿ ಸಹಕರಿಸುವುದು—ಇವೆಲ್ಲ ಸಂಯುಕ್ತ ಸಂಸ್ಥಾನಕ್ಕೆ ಭೇಟಿಕೊಡುವವರ ಮನಸ್ಸಿನ ಮೇಲೆ ಮುದ್ರೆಯೊತ್ತುತ್ತವೆ. ಈ ಯೋಜನೆಗಳಿಂದಾಗಿ ಅಮೇರಿಕ ಸಂಯುಕ್ತ ಸಂಸ್ಥಾನದಲ್ಲಿನ ಗ್ರಂಥಪಾಲರು ತಮ್ಮ ಪೋಷಕರಿಗೆ ವಾಚನ ಹಾಗೂ ಪರಾಮರ್ಶನ ಸಾಮಗ್ರಿಗಳನ್ನು ಒದಗಿಸುವ ವಿಷಯದಲ್ಲಿ ಮಾತ್ರ 'ಸಾಧ್ಯವಿಲ್ಲ' ಎಂಬ ಪದ ತಮ್ಮ ನಿಘಂಟಿನಲ್ಲಿ ಇಲ್ಲವೇ ಇಲ್ಲ ಎಂದು ಹೆಮ್ಮೆ ಪಡುತ್ತಾರೆ ; ಇದು ನಿಜವೂ ಹೌದು. ಈ ಕಾರ್ಯಕಲಾಪಗಳಿಂದ ಅಮೇರಿಕದ ಗ್ರಂಥಾಲಯಗಳಿಗೆ ಬೇಕಾದಷ್ಟು ಕಾಲ, ಹಣ ಮತ್ತು ಶಕ್ತಿ ಉಳಿತಾಯವಾಗಿದೆ. ಪರಿಣಾಮವಾಗಿ ಅಲ್ಲಿ ಸಿಬ್ಬಂದಿವರ್ಗವನ್ನು ವರ್ಗೀಕರಣ, ಕ್ಯಾಟಲಾಗೀಕರಣ ಮೊದಲಾದ ಪ್ರತಿನಿತ್ಯ ಮಾಡಿದ್ದೇ ಮಾಡುವ ಕೆಲಸಗಳಿಗೆ ಹೆಚ್ಚುವ ಬದಲು ಸ್ಟ್ಯಾಕುಗಳು ಹಾಗೂ ವಾಚನಮಂದಿರಗಳಲ್ಲಿನ ಓದುಗರ ನೆರವಿಗೆ ಬಳಸಲಾಗುತ್ತದೆ.

ಭಾರತದಲ್ಲಿ ನಾವು ಈ ವಿಷಯಗಳಲ್ಲೆಲ್ಲ ತುಂಬ ಅನುಭವವುಳ್ಳ ನಮ್ಮ ಅಮೇರಿಕದ ಸೋದರರ ಮೇಲ್ಪಂಕ್ತಿಯನ್ನು ಅನುಸರಿಸಬೇಕು, ಈಗ ನಮ್ಮ ದೇಶದಲ್ಲಿ ಸಹಕಾರೀ ವ್ಯಾತಾ

ವರಣ ಸೃಷ್ಟಿಯಾಗಿದೆ. ನಮ್ಮ ಅತ್ಯಲ್ಪ ಸಂಪನ್ಮೂಲಗಳ–ಅಂದರೆ ಆರ್ಥಿಕ, ಸಿಬ್ಬಂದಿ ಹಾಗೂ ವಾಚನ ಸಾಮಗ್ರಿಗಳ–ಪೂರ್ಣ ಪ್ರಯೋಜನ ಪಡೆದುಕೊಳ್ಳಬೇಕಾದರೆ ಈ ವಾತಾವರಣ ಮತ್ತಷ್ಟು ಜೋರಾಗಬೇಕು. ಎರವಲು ಕೊಡಲು ಇನ್ನೂ ಹಿಂಜರಿಯುವ ಗ್ರಂಥಾಲಯಗಳು ಈಗಲೂ ಇವೆ. ತಮಗೆ ಬೇಕಾದ ವಾಚನ ಸಾಮಗ್ರಿಗಳು ಪಕ್ಕದ ಗ್ರಂಥಾಲಯದಲ್ಲೇ ದೊರೆಯುವಾಗಲೂ ಯಾವುದೋ ದೂರದಲ್ಲಿರುವ ಗ್ರಂಥಾಲಯದಿಂದ ಅವುಗಳನ್ನು ತರಿಸಿ ಕೊಳ್ಳಲಾಗುತ್ತಿದೆ. ಇದನ್ನು ತಪ್ಪಿಸಬಹುದು. ಇದರಿಂದೆಲ್ಲ ಸಂಶೋಧಕರಿಗೆ ಕಷ್ಟವಾಗುತ್ತಿದೆ; ವೈಜ್ಞಾನಿಕ ಸಂಶೋಧನೆ ತಟಸ್ಥವಾಗುತ್ತಿದೆ; ದೇಶದಲ್ಲಿ ಜನಸಾಮಾನ್ಯ ಸ್ವಪರಿಪೂರ್ಣನೂ ಸಮೃದ್ಧನೂ ಆಗುವ ದಿನ ಮುಂದೆ ಮುಂದೆ ಹೋಗುತ್ತಿದೆ. ಈಗಾಗಲೇ ನಾವು ಮುಂದುವರಿದ ದೇಶಗಳಿಗಿಂತ ತುಂಬ ಹಿಂದೆ ಬಿದ್ದಿದ್ದೇವೆ. ನಾವು ಇರುವೆಡೆ ಇರಬೇಕಾದರೂ ನಾವು ಧಾವಿಸ ಬೇಕು. ಆದ್ದರಿಂದ ನಾವು ಈ ವಿಷಯದಲ್ಲಿ ಸ್ವಲ್ಪವೂ ವಿಳಂಬ ಮಾಡಕೂಡದು.

ವೈಜ್ಞಾನಿಕ ಸಂಶೋಧನೆಯ ಮುಂಚೂಣಿಯಲ್ಲಿರಬಯಸುವ ದೇಶದಲ್ಲಿ ಕನಿಷ್ಠಪಕ್ಷ 30,000 ವೈಜ್ಞಾನಿಕ ನಿಯತಕಾಲಿಕಗಳಿರಬೇಕು. ನಮ್ಮ ದೇಶದಲ್ಲಿರುವ ಐನೂರು ಆರುನೂರು ವಿದ್ಯಾಸಂಸ್ಥೆಗಳಿಂದಲೂ ನಮಗೆ ದೊರಕುವುದು ಕೇವಲ 15,000 ನಿಯತಕಾಲಿಕಗಳು. ಅಂದರೆ ನಾವು ಜಗತ್ತಿನ ಇತರ ಮುಂದುವರಿದ ದೇಶಗಳ ಸಮಕ್ಕೆ ಬರಬೇಕಾದರೆ ನಮಗೆ ಇನ್ನೂ 15,000 ನಿಯತಕಾಲಿಕಗಳು ಬೇಕು ಎಂದಾಯಿತು. ಇನ್ನು 15,000 ನಿಯತಕಾಲಿಕಗಳಿಗೆ ಚಂದಾದಾರಿಕೆ— ಅದೂ ವಿದೇಶಗಳಲ್ಲಿ ಪ್ರಕಟವಾದವು—ಸುಲಭಸಾಧ್ಯವಲ್ಲ. ಅಲ್ಲದೆ ಇದಕ್ಕೆ ತುಂಬ ವಿದೇಶೀ ವಿನಿಮಯ ಬೇಕು. ನಾವು ಗ್ರಂಥಗಳ ಸೇರ್ಪಡೆ, ವಾಚನಸಾಮಗ್ರಿಗಳನ್ನು ತಾಂತ್ರಿಕವಾಗಿ ನಕಲುಮಾಡುವಿಕೆ, ಸಂಗ್ರಹಣ ಕೇಂದ್ರಗಳು ಮೊದಲಾದ ವಿಷಯಗಳಲ್ಲಿ ಪರಸ್ಪರ ಸಹಕರಿಸಿದರೆ ಇದನ್ನೆಲ್ಲ ಸಂಗ್ರಹಿಸಬಹುದು. ಈ ವಿಷಯಗಳಲ್ಲೆಲ್ಲ ಸಂಯುಕ್ತ ಸಂಸ್ಥಾನ ದಾರಿ ತೋರಿಸಿಕೊಟ್ಟಿದೆ; ನಾವು ಅದರ ಅನುಭವದಿಂದ ಬಹಳ ಲಾಭ ಪಡೆಯಬಹುದು.

**ಸರ್ಕಾರಿ ದಾಖಲೆಗಳು :** ಅಮೆರಿಕದ ವಿಶ್ವವಿದ್ಯಾಲಯ ಗ್ರಂಥಾಲಯಗಳ ಇನ್ನೊಂದು ವೈಶಿಷ್ಟ್ಯವನ್ನು ನಾವು ಅನುಸರಿಸಬೇಕು. ಅದು ಸರ್ಕಾರೀ ದಾಖಲೆಗೆ ಸಂಬಂಧಿಸಿದುದು. ಅಮೆರಿಕ ಸಂಯುಕ್ತ ಹಾಗೂ ಸಂಸ್ಥಾನ ಸರ್ಕಾರಗಳು ತಮ್ಮ ಪ್ರಕಟಣೆಗಳನ್ನು ಸಂಗ್ರಹಿಸಿಡಲು ಆದರ್ಶ ಪ್ರಾಯವಾದೆಡೆ ಇರುವ ಕೆಲವು ವಿಶ್ವವಿದ್ಯಾನಿಲಯ ಗ್ರಂಥಾಲಯಗಳನ್ನು ಆಗಾರ ಕೇಂದ್ರಗಳಾಗಿ ಗೊತ್ತುಮಾಡುತ್ತವೆ. ಇದರಿಂದ, ಸರ್ಕಾರಿ ದಾಖಲೆಗಳನ್ನು ಅಡಿಗಡಿಗೆ ನೋಡಬೇಕಾದ ವಿದ್ವಾಂಸ ರಿಗೂ ಸಂಶೋಧಕರಿಗೂ ಅವು ಬೇಗನೆ ದೊರಕುತ್ತವೆ. ಕಲ್ಕತ್ತದ ರಾಷ್ಟ್ರೀಯ ಗ್ರಂಥಾಲಯ ವನ್ನು ಬಿಟ್ಟರೆ ದೇಶದ ಮತ್ತಾವ ಗ್ರಂಥಾಲಯವೂ ಸಾಕಷ್ಟು ಕೇಂದ್ರ ಸರ್ಕಾರಿ ದಾಖಲೆಗಳ ಪ್ರಾತಿನಿಧಿಕ ಸಂಗ್ರಹಗಳನ್ನು ಇಟ್ಟಿರುವುದಾಗಿ ಹೆಮ್ಮೆಪಟ್ಟುಕೊಳ್ಳುವಂತಿಲ್ಲ. ರಾಜ್ಯದ ಯಾವುದೇ ಗ್ರಂಥಾಲಯದಲ್ಲೂ ರಾಜ್ಯ ಸರ್ಕಾರದ ದಾಖಲೆಗಳಿಲ್ಲದಿರುವುದಂತೂ ಎದ್ದು ಕಾಣುತ್ತದೆ. ಕರ್ನಾಟಕ ಸರ್ಕಾರ ಹಾಗೂ ಬೆಂಗಳೂರು ವಿಶ್ವವಿದ್ಯಾಲಯಗಳ ಜಂಟಿ ಆಶ್ರಯದಲ್ಲಿ "ಸಾಮಾ ಜಿಕ ಬದಲಾವಣೆಯಲ್ಲಿ ವಿದ್ವಜ್ಜನರ ಪಾತ್ರ" ಎಂಬ ವಿಷಯದಮೇಲೆ ಇತ್ತೀಚೆಗೆ ನಡೆದ ಒಂದು ಗೋಷ್ಠಿಯಲ್ಲಿ ಕರ್ನಾಟಕ ರಾಜ್ಯದ ಮೂರು ವಿಶ್ವವಿದ್ಯಾಲಯಗಳ ಅಧ್ಯಾಪಕರೂ ಕೇಂದ್ರ

ಹಾಗೂ ರಾಜ್ಯ ಸರ್ಕಾರಿ ದಾಖಲೆಗಳು ಸುಲಭವಾಗಿ ದೊರಕುತ್ತಿಲ್ಲದೆ ತಮ್ಮ ಸಂಶೋಧನ ಕಾರ್ಯಕ್ಕೆ ಬಹಳ ತೊಂದರೆಯಾಗಿದೆಯೆಂದು ಒಮ್ಮತದಿಂದ ಹೇಳಿಕೊಂಡರು.

**ಕಂಪ್ಯೂಟರುಗಳ ಬಳಕೆ :** ಅಮೆರಿಕದ ವಿಶ್ವವಿದ್ಯಾಲಯಗಳ ಗ್ರಂಥಾಲಯಗಳ ದೃಷ್ಟಿಯಲ್ಲಿ ಎದ್ದುಕಾಣುವ ಅತ್ಯಂತ ಮಹತ್ವಪೂರ್ಣ ಕ್ರಾಂತಿಯೆಂದರೆ ಸ್ವಯಂಚಾಲಿತ ಯಂತ್ರ ವ್ಯವಸ್ಥೆ. ತಾಂತ್ರಿಕ ಹಾಗೂ ವೈಜ್ಞಾನಿಕ ಸಂಶೋಧನೆಗಳ ಫಲವಾಗಿ ದೊರೆತಿರುವ ನಕಲು ಯಂತ್ರಗಳು, ಪುಸ್ತಕ ವಾಹಕಗಳು, ಫ್ಲೆಕ್ಸೊ ಲೇಖನಗಳು, ನಿರ್ವಾತ ಮಾರ್ಜಕಗಳು—ಇವೇ ಮೊದಲಾದ ಹೆಚ್ಚು ಕಡಮೆ ಎಲ್ಲ ಸಾಧನೋಪಾಯಗಳನ್ನೂ ಪಡೆದಿರುವುದೇ ಅಲ್ಲದೆ ಅಮೆರಿಕದ ಗ್ರಂಥಾಲಯಗಳು ಈಗ ಜ್ಞಾನವನ್ನು ರಕ್ಷಿಸಿಡಲು ಕಂಪ್ಯೂಟರುಗಳನ್ನು ಪ್ರಯೋಗಿಸಿ ನೋಡುತ್ತಿವೆ. ಓದುಗ ಸುಮ್ಮನೆ ತನ್ನ ಹಾಸಿಗೆಯ ಮೇಲೆ ಮಲಗಿಕೊಂಡು ಒಂದು ನಂಬರಿಗೆ ಟೆಲಿಫೋನ್ ಫಲಕವನ್ನು ತಿರುಗಿಸಿ ತನಗೆ ಬೇಕಾದ ವಾಚನ ಸಾಮಗ್ರಿಯನ್ನು ಪಡೆಯಬಹುದಾದಂತಹ ಕಾಲ ಹತ್ತಿರದಲ್ಲೆ ಇರಬಹುದು.

ಸಂಯುಕ್ತ ಸಂಸ್ಥಾನವನ್ನು ಆಧುನಿಕ ಗ್ರಂಥಾಲಯ ಚಳವಳಿಯ ತಾಯಿನಾಡು ಎಂದು ಪ್ರಶಂಸಿಸಿರುವುದು ಯುಕ್ತವಾಗಿಯೇ ಇದೆ. ಇದರ ಪ್ರಭಾವ ಭಾರತೀಯ ಗ್ರಂಥಾಲಯ ಚಳವಳಿಯ ಮೇಲೆ ಸಾಕಷ್ಟು ಆಗಿದೆ ಎನ್ನುವುದರಲ್ಲಿ ಆಶ್ಚರ್ಯವಿಲ್ಲ. ಅಮೆರಿಕ ಸಂಯುಕ್ತ ಸಂಸ್ಥಾನದ ಗ್ರಂಥಾಲಯಗಳು ಹೇಗೆ ಕೆಲಸಮಾಡುತ್ತವೆ ಎನ್ನುವುದನ್ನು ನೋಡಲು ಇಲ್ಲವೆ ಅಲ್ಲಿಯ ಗ್ರಂಥಾಲಯ ವಿಜ್ಞಾನದ ಶಿಕ್ಷಣ ಪಡೆಯಲು ಹೋದ ಭಾರತೀಯ ವಿಶ್ವವಿದ್ಯಾಲಯದ ಹಾಗೂ ಇತರ ಗ್ರಂಥಪಾಲರು ತಮ್ಮ ಅವಲೋಕನದಿಂದ ಪ್ರಭಾವಿತರಾಗಿದ್ದಾರೆ. ಪರಿಣಾಮವಾಗಿ, ಅವರಲ್ಲಿ ಬಹಳ ಮಂದಿ ಅಮೆರಿಕದ ಗ್ರಂಥಾಲಯ ವ್ಯವಸ್ಥೆ ಹಾಗೂ ಆಡಳಿತ ಕ್ರಮದ ಕೆಲವು ಅತ್ಯುತ್ತಮ ಅಂಶಗಳನ್ನು ತಮ್ಮತಮ್ಮ ಗ್ರಂಥಾಲಯಗಳಲ್ಲಿ ಜಾರಿಗೆ ತಂದಿದ್ದಾರೆ.

ವಿಶ್ವವಿದ್ಯಾಲಯದ ಧನಸಹಾಯ ಆಯೋಗದಿಂದಾಗಿ ಮತ್ತು ಡಾ. ಎಸ್. ಆರ್. ರಂಗನಾಥನ್, ಶ್ರೀ ಬಿ. ಎಸ್. ಕೇಶವನ್, ಪ್ರೊ. ಡಿ.ಎನ್. ಮಾರ್ಷಲ್ ಮೊದಲಾದ ಶ್ರೇಷ್ಠ ಗ್ರಂಥಪಾಲರ ಪರಿಶ್ರಮದ ಫಲವಾಗಿ ನಮ್ಮ ವಿಶ್ವವಿದ್ಯಾಲಯಗಳ ಗ್ರಂಥಾಲಯ ಪರಿಸ್ಥಿತಿಯಲ್ಲಿ ಒಂದು ಕ್ರಾಂತಿ ನಡೆಯುತ್ತಿದೆ. ಈ ಕ್ರಾಂತಿ ಯಶಸ್ವಿಯಾಗಬೇಕಾದರೆ ಈ ಎರಡು ದೇಶಗಳ ನಡುವೆ ಇನ್ನೂ ಹೆಚ್ಚಿನ ಫಲಕಾರಿಯಾದ ಸಹಕಾರ ಅತ್ಯಗತ್ಯ.

ಎಚ್. ಎಂ. ರಾಜಶೇಖರ

# ಭಾರತ–ಸಿಕ್ಕಿಮ್ ಸಂಬಂಧ

ಭಾರತ–ಸಿಕ್ಕಿಮ್ ಸಂಬಂಧಗಳು ಐತಿಹಾಸಿಕ ಹಿನ್ನೆಲೆ ಹೊಂದಿವೆ. ಸಿಕ್ಕಿಮ್ ರಾಜ್ಯ ಯಾವಾಗ ಉದ್ಭವವಾಯಿತು ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲದಿದ್ದರೂ, 1642ರಲ್ಲಿ ಪುಂತ್‌ಸಾಗ್ ನಮ್‌ಗ್ಯಾಲರು ಸಿಕ್ಕಿಮ್‌ನ ಚೋಗ್ಯಾಲ್ ಆಗಿ ಅಧಿಕಾರಕ್ಕೆ ಬಂದಾಗ ಅದು ಉದಯಿಸಿತು ಎಂದು ಹೇಳಬಹುದು. ಈ ಪುಂತ್‌ಸಾಗ್ ನಮ್‌ಗ್ಯಾಲ್ ಉತ್ತರ ಭಾರತದ ಹಿಮಾಚಲ ಪ್ರದೇಶದಲ್ಲಿ ರಾಜನಾಗಿದ್ದ ರಾಜ ಇಂದ್ರಬೋಧಿಯ ಸಂತತಿಗೆ ಸೇರಿದ್ದಾತ. 1642ರಲ್ಲಿ ಇವನನ್ನು "ಲೆಪ್‌ಚಾ" ಭೂಪ್ರದೇಶದ ರಾಜನನ್ನಾಗಿ ಟಿಬೆಟ್ಟಿನ ಮೂರು ಜನ ಲಾಮಾಗಳು ಪಟ್ಟಕಟ್ಟಿದರು. ಆದ್ದರಿಂದಲೇ, ಟಿಬೆಟ್ ಭಾಷೆಯಲ್ಲಿ, ಸಿಕ್ಕಿಮನ್ನು "ಡೆನ್‌ಜಾಂಗ್" ಎಂದು ಕರೆಯಲಾಗಿದೆ. ನಮ್‌ಗ್ಯಾಲ್ ಸಂತತಿ ಬಹಳ ಪುರಾತನವಾದ್ದರಿಂದ, 1642ಕ್ಕೂ ಮುಂಚೆ, ಸುಮಾರು ಮೂರು ಶತಮಾನಗಳಿಗೂ ಹೆಚ್ಚು ಕಾಲ ಲೆಪ್‌ಚಾ ಭೂಪ್ರದೇಶದ ಹಲವಾರು ಪ್ರದೇಶಗಳನ್ನು ತನ್ನ ಆಡಳಿತದಲ್ಲಿ ಇಟ್ಟುಕೊಂಡಿತ್ತು.

18ನೆಯ ಶತಮಾನದ ಕೊನೆಯ ಭಾಗದಲ್ಲಿ ನೇಪಾಲ, ಭೂತಾನ, ಮತ್ತು ಟಿಬೆಟ್ ರಾಜ್ಯಗಳು ಸಿಕ್ಕಿಮ್‌ನ ಹಲವಾರು ಭೂಪ್ರದೇಶಗಳನ್ನು ಆಕ್ರಮಿಸಿಕೊಂಡುವು. ಬ್ರಿಟಿಷ್ ಈಸ್ಟ್ ಇಂಡಿಯ ಕಂಪನಿ 19ನೆಯ ಶತಮಾನದ ಆದಿಭಾಗದಲ್ಲಿ ಸಿಕ್ಕಿಮನ್ನು ಪುನರುಜ್ಜೀವನಗೊಳಿಸಿತು. ಡಿಸೆಂಬರ್ 2, 1815ರ "ಸಾಗೌಲಿ ಒಪ್ಪಂದ"ದ ಪ್ರಕಾರ, ಸಿಕ್ಕಿಮ್ ಕಳೆದುಕೊಂಡಿದ್ದ ಪಶ್ಚಿಮ ಮತ್ತು ಪೂರ್ವಭಾಗಗಳ ಪ್ರದೇಶಗಳನ್ನು ಬ್ರಿಟಿಷ್ ಈಸ್ಟ್ ಇಂಡಿಯ ಕಂಪನಿ ಪಡೆದುಕೊಂಡಿತು. ಮತ್ತೆ ಫೆಬ್ರವರಿ 10, 1817ರಲ್ಲಿ ನಡೆದ "ಟಿಟಾಲಿಯ ಒಪ್ಪಂದ"ದ ಪ್ರಕಾರ, ಸಿಕ್ಕಿಮ್‌ನ ಚೋಗ್ಯಾಲರಿಗೆ ತಾನು ಪಡೆದುಕೊಂಡ ಭೂಪ್ರದೇಶಗಳನ್ನು ಅದು ಹಿಂತಿರುಗಿಸಿತು. 1861ರ ಒಪ್ಪಂದದಂತೆ ಸಿಕ್ಕಿಮ್ ಬ್ರಿಟಿಷರ ಅಧೀನಕ್ಕೊಳಪಟ್ಟಿತು. ಅನಂತರ, 1863 ರಿಂದ ಸಿಕ್ಕಿಮ್‌ನ ಚೋಗ್ಯಾಲ್‌ರನ್ನು 'ಮಹಾರಾಜ' ಎಂದು ಕರೆಯಲಾಯಿತು.

1890ರಲ್ಲಿ, ಗ್ರೇಟ್ ಬ್ರಿಟನ್ ಮತ್ತು ಚೀನ ದೇಶಗಳ ನಡುವೆ ಉಂಟಾದ ಒಪ್ಪಂದದ ಪ್ರಕಾರ, ಸಿಕ್ಕಿಮ್ ಭಾರತದ ಒಂದು "ಅಂಗ"ವೆಂದು ಚೀನ ಮನ್ನಣೆ ನೀಡಿತು. ಭಾರತಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಮೊದಲು ಸಿಕ್ಕಿಮ್ ಹೇಗೆ ಭಾರತದ ಇತರ ದೇಶೀಯ ಸಂಸ್ಥಾನಗಳ ಸ್ಥಾನಮಾನಗಳನ್ನು ಪಡೆದಿತ್ತು ಎಂಬುದಕ್ಕೆ ಕೆಳಗೆ ಕಂಡ ನಿದರ್ಶನಗಳು ಆಧಾರವಾಗಿವೆ :

1 ಸಿಕ್ಕಿಮ್‌ನ ಮಹಾರಾಜರು ನರೇಂದ್ರರ ಮಂಡಲಿಯ ಸದಸ್ಯರಾಗಿದ್ದರು.

2 ಜೂನ್ 7, 1947ರಲ್ಲಿ ಭಾರತದ ಸಂವಿಧಾನ ಸಭೆ ಭಾರತದ ಎಲ್ಲ ಅಂಗರಾಜ್ಯಗಳಿಗೂ

(ಸಿಕ್ಕಿಮ್ ಸಹಿತ) ಪತ್ರ ಬರೆದು, ಆ ರಾಜ್ಯಗಳ ಸದಸ್ಯರುಗಳನ್ನು ಆಹ್ವಾನಿಸಿತ್ತು.[3] 1935ರ ಅಧಿನಿಯಮ ಸಿಕ್ಕಿಮನ್ನು ಒಂದು ದೇಶೀಯ ಸಂಸ್ಥಾನವೆಂದು ಪರಿಗಣಿಸಿತ್ತು. ಈ ಆಧಾರಗಳ ಮೇಲೆ, 1947ರಲ್ಲೇ ಭಾರತ ಸಿಕ್ಕಿಮನ್ನು ತನ್ನಲ್ಲಿ ವಿಲೀನಗೊಳಿಸಬಹುದಿತ್ತು. ಅಲ್ಲದೆ, ಸಿಕ್ಕಿಮ್‌ನ "ಸ್ಟೇಟ್ ಕಾಂಗ್ರೆಸ್" ಎಂಬ ರಾಜಕೀಯ ಪಕ್ಷ ಸಿಕ್ಕಿಮನ್ನು ಭಾರತದೊಡನೆ ವಿಲೀನಗೊಳಿಸಲು ಬಹಿರಂಗವಾಗಿ ಚಳವಳಿ ನಡೆಸಿತ್ತು.

ಭಾರತ ಸ್ವಾತಂತ್ರ್ಯ ಗಳಿಸಿದ ಅನಂತರ ಸಿಕ್ಕಿಮ್ ಭಾರತ ಸರ್ಕಾರದೊಡನೆ ಫೆಬ್ರವರಿ 27, 1948ರಲ್ಲಿ ಯಥಾಸ್ಥಿತಿ ಒಪ್ಪಂದವನ್ನು ಮಾಡಿಕೊಂಡಿತು. ಈ ಒಪ್ಪಂದದ ಪ್ರಕಾರ, ಭಾರತದ ಸ್ವಾತಂತ್ರ್ಯಕ್ಕೆ ಪೂರ್ವದಲ್ಲಿದ್ದ ಬ್ರಿಟನ್ ಮತ್ತು ಸಿಕ್ಕಿಮ್ ಸಂಬಂಧಗಳು ಮುಂದುವರಿಯುವುವೆಂದೂ ಸಿಕ್ಕಿಮ್ ಸ್ವತಂತ್ರ ಭಾರತದೊಡನೆ ತನ್ನ ಸಂಬಂಧಗಳನ್ನು ಸ್ಥಿರಪಡಿಸಿಕೊಳ್ಳಲು ಮತ್ತೊಂದು ಹೊಸ ಒಪ್ಪಂದವನ್ನು ಮಾಡಿಕೊಳ್ಳಬಹುದೆಂದೂ ತೀರ್ಮಾನಿಸಲಾಯಿತು. ಪರಿಣಾಮವಾಗಿ, ಡಿಸೆಂಬರ್ 5, 1950ರಂದು ಸಿಕ್ಕಿಮ್‌ನ ರಾಜಧಾನಿಯಾದ ಗ್ಯಾಂಗ್‌ಟಾಕ್‌ನಲ್ಲಿ, ಭಾರತ ಮತ್ತು ಸಿಕ್ಕಿಮ್‌ಗಳ ನಡುವೆ ಹೊಸ ಒಪ್ಪಂದಕ್ಕೆ ಸಹಿ ಮಾಡಲಾಯಿತು. 1950ರ ಒಪ್ಪಂದ ಭಾರತ–ಸಿಕ್ಕಿಮ್ ಸಂಬಂಧದಲ್ಲಿ ಮತ್ತೊಂದು ಹೊಸ ಅಧ್ಯಾಯವನ್ನು ಪ್ರಾರಂಭಿಸಿತು.

1950ರ ಒಪ್ಪಂದ ಸಿಕ್ಕಿಮ್ ರಾಜ್ಯಕ್ಕೆ ನಿಯಮಿತ ಹಾಗೂ ಪರತಂತ್ರಗಳುಳ್ಳ ಸ್ವಾಯತ್ತತೆಯನ್ನು ಕೊಟ್ಟಿತು. ಈ ಒಪ್ಪಂದದ ಪ್ರಕಾರ ಸಿಕ್ಕಿಮ್‌ನ ರಕ್ಷಣೆ, ವಿದೇಶ ವ್ಯವಹಾರ ಮತ್ತು ಸಂಪರ್ಕಗಳು ಭಾರತ ಸರ್ಕಾರದ ಅಧೀನಕ್ಕೊಳಪಟ್ಟುವು. ಅಲ್ಲದೆ, ಸಿಕ್ಕಿಮ್‌ನ ಸುವ್ಯವಸ್ಥಿತ ಆಡಳಿತ, ಕಾನೂನು ಹಾಗೂ ಶಿಸ್ತುಪಾಲನೆಗಳನ್ನು ಭಾರತ ಸರ್ಕಾರ ಜವಾಬ್ದಾರಿಯಿಂದ ನಿರ್ವಹಿಸಬೇಕಾಗಿತ್ತು. ಸಿಕ್ಕಿಮ್‌ನ ರಕ್ಷಣೆಗೆ ಅಥವಾ ಭದ್ರತೆಗೆ ಧಕ್ಕೆ ಬಂದಾಗ. 1950ರ ಒಪ್ಪಂದದ 3ನೆಯ ಕಲಮಿನ ಪ್ರಕಾರ, ಸಿಕ್ಕಿಮ್‌ನ ಆಂತರಿಕ ವಿಷಯಗಳಲ್ಲೂ ಭಾರತ ಪ್ರವೇಶಿಸಲು ಅಧಿಕಾರ ಹೊಂದಿತ್ತು. ಹೀಗೆ ಆಶ್ರಿತ ರಾಜ್ಯವಾಗಿದ್ದ ಸಿಕ್ಕಿಮ್‌ಗೆ ಭಾರತ ಒಕ್ಕೂಟದಲ್ಲಿ ''ಸಹ ಸದಸ್ಯ'' ಸ್ಥಾನವನ್ನು ಕಲ್ಪಿಸಲು ಸಂವಿಧಾನ ತಿದ್ದುಪಡಿ ವಿಧೇಯಕವೊಂದನ್ನು ಭಾರತದ ಸಂಸತ್ತು ಸೆಪ್ಟೆಂಬರ್ 1974ರಲ್ಲಿ ಅಂಗೀಕರಿಸಿತು. ಸಿಕ್ಕಿಮ್ ಪ್ರಜೆಗಳ ಇಚ್ಛೆಗನುಗುಣವಾಗಿ ಮತ್ತು ಭಾರತದ ಆರ್ಥಿಕ ಹಾಗೂ ರಾಜಕೀಯ ಸಂಸ್ಥೆಗಳಲ್ಲಿ ಸಿಕ್ಕಿಮ್ ಪ್ರಜೆಗಳು ಭಾಗವಹಿಸಲು ಅನುಕೂಲವಾಗುವಂತೆ ಸಿಕ್ಕಿಮ್ ವಿಧಾನ ಸಭೆ ಮೊದಲೇ ನಿರ್ಣಯವೊಂದನ್ನು ಅಂಗೀಕರಿಸಿತ್ತು. ಸಿಕ್ಕಿಮ್‌ಗೆ ಸಹ ಸದಸ್ಯ ಸ್ಥಾನವನ್ನು ಕೊಟ್ಟಿದ್ದು ಆಶ್ರಿತ ಸ್ಥಾನಕ್ಕಿಂತ ಕೀಳಾದುದಲ್ಲ. ಇಂದು ನಾವು ಅದೇ ರೀತಿಯ ಸಂಬಂಧವನ್ನು ಅಮೇರಿಕ ಸಂಯುಕ್ತ ಸಂಸ್ಥಾನ ಮತ್ತು ಕಾಮನ್‌ವೆಲ್ತ್ ಪ್ವೆರ್ಟೋರಿಕೊಗಳ ನಡುವೆ ನೋಡಬಹುದು. ಪ್ವೆರ್ಟೋರಿಕೊ ಅಮೇರಿಕದ ಪ್ರತಿನಿಧಿಗಳ ಸಭೆಗೆ ಒಬ್ಬ ಸದಸ್ಯನನ್ನು ಕಳುಹಿಸುತ್ತದೆ. ಇದರ ರಕ್ಷಣೆ ಹಾಗೂ ವಿದೇಶ ವ್ಯವಹಾರಗಳನ್ನು ಅಮೇರಿಕ ಸರ್ಕಾರ ನೋಡಿಕೊಳ್ಳುತ್ತಿದೆ.

ಭಾರತ–ಸಿಕ್ಕಿಮ್‌ಗಳ ನಿಕಟ ಸಂಬಂಧಗಳಿಗೆ ಹಾಗೂ ಸಿಕ್ಕಿಮ್‌ನ ಇಂದಿನ ರಾಜಕೀಯ ಬದಲಾವಣೆಗೆ ಅಲ್ಲಿಯ ಬಹು ಸಂಖ್ಯಾತ ಜನರೇ ಕಾರಣ ಎಂದು ಹೇಳಿದರೆ ಉತ್ಪ್ರೇಕ್ಷೆಯಾಗ

ಲಾರದು. ಸಿಕ್ಕಿಮ್‌ನ ಮೂಲ ನಿವಾಸಿಗಳು ಭಾರತದಿಂದ ಹೋಗಿ ಅಲ್ಲಿ ನೆಲೆಸಿದ್ದಾರೆ. ಅಂದರೆ, ಪ್ರಥಮವಾಗಿ ಸಿಕ್ಕಿಮ್‌ಗೆ ಹೋಗಿ ನೆಲೆಗೊಂಡವರು ಅಸ್ಸಾಮಿನ "ಲೆಪ್‌ಚಾಗಳು." ಅನಂತರ "ಭೂಟಿಯಾಗಳು" ಟಿಬೆಟ್‌ನಿಂದ ಬಂದು ಸಿಕ್ಕಿಮ್‌ನಲ್ಲಿ ನೆಲೆಸಿದರು. ಅಲ್ಲದೆ, ಕೃಷಿ ಭೂಮಿ ಮತ್ತು ಹಣ್ಣು ತೋಟಗಳಲ್ಲಿ ಕೆಲಸ ಮಾಡಲು ನೇಪಾಲಿಗಳನ್ನು ಬ್ರಿಟಿಷರು ಪ್ರೋತ್ಸಾಹಿಸಿ, ಸಿಕ್ಕಿಮ್‌ನಲ್ಲಿ ನೆಲೆಸುವಂತೆ ಮಾಡಿದರು. ಈ ನೇಪಾಲಿಗಳು ಇಂದು ಸಿಕ್ಕಿಂನಲ್ಲಿ ಬಹು ಸಂಖ್ಯಾತ ರಾಗಿದ್ದಾರೆ (75%). ಸಿಕ್ಕಿಮ್‌ನ ಇಂದಿನ ಒಟ್ಟು ಜನಸಂಖ್ಯೆ ಸುಮಾರು 2,50,000ದಲ್ಲಿ ನೇಪಾಲಿಗಳು ಬಹುಸಂಖ್ಯಾತರಾದರೂ, ರಾಜಕೀಯದಲ್ಲಿ ಭಾಗವಹಿಸಲು ಅವರಿಗೆ ಅವಕಾಶ ವಿರಲಿಲ್ಲ. ರಾಜಕೀಯ ಅಧಿಕಾರ ಕೇವಲ ಅಲ್ಪಸಂಖ್ಯಾತರಾದ ಲೆಪ್‌ಚಾ ಮತ್ತು ಭೂಟಿಯಾ ಗಳ (ಚೋಗ್ಯಾಲರ ನಾಯಕತ್ವದಲ್ಲಿ) ಕೈಯಲ್ಲಿತ್ತು. ಈ ಕಾರಣಗಳಿಂದಾಗಿ, ಬಹುಸಂಖ್ಯಾತರಾದ ನೇಪಾಲಿಗಳು ಪ್ರಜಾಪ್ರಭುತ್ವದ ಸ್ಥಾಪನೆಗೆ ಹೋರಾಡಲು ಪ್ರಾರಂಭಿಸಿದರು. ಅವರು ದಂಗೆ ಎದ್ದು, ಸರ್ಕಾರದ ಅನೇಕ ಕಾರ್ಯಾಲಯಗಳನ್ನು ವಶಪಡಿಸಿಕೊಂಡು, ಚೋಗ್ಯಾಲರನ್ನು ದಸ್ತಗಿರಿ ಮಾಡುವಂತೆ ಭಾರತ ಸರ್ಕಾರವನ್ನು ಕೇಳಿಕೊಂಡರು. ಈ ಸಂದರ್ಭದಲ್ಲಿ ಚೋಗ್ಯಾಲರೂ ಕಾನೂನು ಮತ್ತು ಶಿಸ್ತನ್ನು ಕಾಪಾಡಲು ಭಾರತ ಸೈನ್ಯದ ಸಹಾಯವನ್ನು ಕೋರಿದರು. ಚೋಗ್ಯಾಲರು ಸಿಕ್ಕಿಂ ಪ್ರಜೆಗಳ ದಂಗೆಯನ್ನು ಲೆಕ್ಕಿಸದೆ, ಅನೇಕ ಸಂಚುಗಳ ಮೂಲಕ ತಮ್ಮ ಅಧಿಕಾರವನ್ನು ಉಳಿಸಿಕೊಳ್ಳಲು ಬಹಳ ಪ್ರಯತ್ನಪಟ್ಟರು.

ಹೀಗೆ, ಏಪ್ರಿಲ್ 1973ರಲ್ಲಿ ಉಂಟಾದ ರಾಜಕೀಯ ಗೊಂದಲ ಸಿಕ್ಕಿಮ್‌ನಲ್ಲಿ ಅಶಾಂತಿ ಯನ್ನುಂಟು ಮಾಡಿತು. ಆ ಸಂದರ್ಭದಲ್ಲಿ, ಸಿಕ್ಕಿಮ್‌ನ ರಾಜಕೀಯ ಗೊಂದಲವನ್ನು ಹೋಗ ಲಾಡಿಸಿ ಅಲ್ಲಿ ಶಾಂತ ಪರಿಸ್ಥಿತಿಯನ್ನುಂಟುಮಾಡಲು ಭಾರತ ಸರ್ಕಾರ ಸತತ ಕ್ರಮಗಳನ್ನು ಕೈಗೊಂಡಿತು. ಪರಿಣಾಮವಾಗಿ, ಮೇ 8, 1973 ರಂದು ಸಿಕ್ಕಿಮ್‌ನ ಚೋಗ್ಯಾಲ್, ರಾಜಕೀಯ ಪಕ್ಷಗಳು ಮತ್ತು ಭಾರತ ಸರ್ಕಾರದ ನಡುವೆ ಒಂದು ಒಪ್ಪಂದವನ್ನು ಮಾಡಿಕೊಳ್ಳಲಾಯಿತು. ಅನಂತರ, ಮೇ 11, 1974 ರಂದು, ಸಿಕ್ಕಿಮ್‌ನ ವಿಧಾನ ಸಭೆ ಏಕಾಭಿಪ್ರಾಯದ ನಿರ್ಣಯ ವೊಂದನ್ನು ಸ್ವೀಕರಿಸಿ, ಸಿಕ್ಕಿಮ್‌ನಲ್ಲಿ ಪ್ರಗತಿಪರ ಪ್ರಜಾಪ್ರಭುತ್ವದ ಸ್ಥಾಪನೆಗೆ ಮತ್ತು ಭಾರತ ದೊಡನೆ ನಿಕಟ ಸಂಬಂಧಗಳಿಗೆ ಅವಕಾಶ ಮಾಡಿಕೊಟ್ಟಿತು.

ಪರಿಣಾಮವಾಗಿ, ಭಾರತ ಸರ್ಕಾರದ ಪ್ರತಿನಿಧಿ ಸಿಕ್ಕಿಮ್‌ನ ಚುನಾವಣೆಯ ಮೇಲ್ವಿ ಚಾರಣೆ ಮಾಡಿ, ಹೊಸ ಸಂವಿಧಾನವನ್ನು ರಚಿಸಲು (1974) ನೆರವಾದರು. ಈ 1974ರ ಅಧಿ ನಿಯಮಕ್ಕೆ ಸಿಕ್ಕಿಮ್‌ನ ಚೋಗ್ಯಾಲರು ಸಹಿ ಮಾಡಿ, ನಾಮಮಾತ್ರ ರಾಜರಾಗಿ ಕೆಲಸ ನಿರ್ವಹಿ ಸಲು ಒಪ್ಪಿದರು. ಆದರೆ, ಚೋಗ್ಯಾಲರು ಪ್ರಜಾಪ್ರಭುತ್ವದ ತತ್ವಗಳನ್ನೇ ಕಿತ್ತೊಗೆಯಲು ಸಂಚು ನಡೆಸಿದರು. ತಮ್ಮ ಅಧಿಕಾರದ ದಾಹಕ್ಕಾಗಿ ವಿದೇಶೀ ಪ್ರತಿನಿಧಿಗಳ ಮೊರೆಹೊಕ್ಕು, ಸಿಕ್ಕಿಮ್ ವಿಷಯವನ್ನು ವಿಶ್ವಸಂಸ್ಥೆಗೆ ಕೊಂಡೊಯ್ಯಲು ಅವರನ್ನು ಪ್ರಾರ್ಥಿಸಿಕೊಂಡರು.

1950ರ ಒಪ್ಪಂದದ ಪ್ರಕಾರ, ಸಿಕ್ಕಿಂನಲ್ಲಿ ಶಾಂತಿಯನ್ನು ಸ್ಥಾಪಿಸಲು ಭಾರತ ಸರ್ಕಾರ ಕೆಲವು ದಿಟ್ಟ ಕ್ರಮಗಳನ್ನು ಕೈಗೊಂಡಿತು. ಇದರ ಬಗ್ಗೆ ಚೀನಾ ಭಾರತವನ್ನು ಕಠಿಣವಾಗಿ ನಿಂದಿಸಿರುವುದು ಶೋಚನೀಯ ಹಾಗೂ ಅಸಮಂಜಸವಾಗಿದೆ. ಅದು ತನ್ನ ಹಿಂದಿನ ಕೃತ್ಯ ಗಳನ್ನು ಮರೆತಂತಿದೆ. ಇತಿಹಾಸದ ಪುಟಗಳನ್ನು ಅವಲೋಕಿಸಿದಾಗ, ಟಿಬೆಟ್ ತನ್ನ ಪೂರ್ಣ

ಸ್ವಾತಂತ್ರ್ಯಕ್ಕೆ ಪಕ್ಕನ್ನು ತೋರಿಸಿದೆ. ಆದರೆ, 1911ರಿಂದೀಚೆಗೆ ಅದು ಅರೆ ಸ್ವಾತಂತ್ರ್ಯಕ್ಕೆ ಒಳಪಟ್ಟಿತು. ಚೀನದ ನಾಯಕರ ಘೋಷಣೆಗನುಗುಣವಾಗಿ, ಭಾರತ ಟಿಬೆಟಿನೊಡನೆ ಇಟ್ಟುಕೊಂಡಿದ್ದ ತನ್ನ ಸಾಂಸ್ಕೃತಿಕ ಹಾಗೂ ಆರ್ಥಿಕ ಹಕ್ಕು-ಬಾಧ್ಯತೆಗಳನ್ನು ಬಿಟ್ಟುಕೊಟ್ಟಿದೆ. ಅಲ್ಲದೆ, ಭಾರತ-ಸಿಕ್ಕಿಮ್‌ಗಳ 1950 ರ ಒಪ್ಪಂದವನ್ನು ಚೀನ ಸರಿಯಾಗಿ ಅರ್ಥಮಾಡಿ ಕೊಂಡಂತಿಲ್ಲ. ಈ ಒಪ್ಪಂದದ ಪ್ರಕಾರ, ಸಿಕ್ಕಿಮ್ ಒಂದು ಸ್ವತಂತ್ರ ರಾಷ್ಟ್ರವೆನಿಸುವುದಿಲ್ಲ. ಐತಿಹಾಸಿಕವಾಗಿಯೂ ಅದು ಸ್ವತಂತ್ರವಾಗಿರದೆ ಭಾರತದ ಆಶ್ರಿತ ರಾಜ್ಯವಾಗಿತ್ತು. ಕೆಲವು ತಿಂಗಳ ಹಿಂದೆ "ಡೈಲಿ ಟೆಲಿಗ್ರಾಫ್"ಗೆ ಬರೆದ ತಮ್ಮ ಲೇಖನದಲ್ಲಿ ಸರ್ ಒಲಾಫ್ ಕ್ಯಾರೋ ಅವರು, ಸಿಕ್ಕಿಮ್ ಭಾರತದ ಪರಮಾಧಿಕಾರಕ್ಕೆ ಒಳಪಟ್ಟಿದ್ದ ಒಂದು ಅಂಗರಾಜ್ಯವೆಂದು ಸ್ಪಷ್ಟ ಪಡಿಸಿದ್ದಾರೆ. ಆದ್ದರಿಂದ, ಸಿಕ್ಕಿಮ್‌ನ ಮಾಜಿ ಚೋಗ್ಯಾಲರು ಸಿಕ್ಕಿಮ್ ಎಂದೂ ಭಾರತದ ಅಂಗರಾಜ್ಯವಾಗಿರಲಿಲ್ಲ ಎಂದು ಹೇಳುವುದು ಸತ್ಯಕ್ಕೆ ಹಾಗೂ ಇತಿಹಾಸಕ್ಕೆ ದೂರವಾದ ಮಾತು.

1974 ರ ಏಪ್ರಿಲ್ ತಿಂಗಳಲ್ಲಿ ನಡೆದ ಸಿಕ್ಕಿಮ್ ಚುನಾವಣೆಯಲ್ಲಿ "ಸಿಕ್ಕಿಮ್ ಕಾಂಗ್ರೆಸ್" ಎಂಬ ರಾಜಕೀಯ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ಭಾರತ-ಸಿಕ್ಕಿಮ್‌ಗಳ ನಿಕಟ ಸಂಬಂಧಗಳನ್ನು ಪ್ರಸ್ತಾಪಿಸಿತ್ತು. ಪರಿಣಾಮವಾಗಿ, ಸಿಕ್ಕಿಮ್ ವಿಧಾನ ಸಭೆಗೆ ನಡೆದ ಚುನಾವಣೆ ಯಲ್ಲಿ ಒಟ್ಟು 32 ಸ್ಥಾನಗಳಿಗೆ ಸಿಕ್ಕಿಮ್ ಕಾಂಗ್ರೆಸ್ ಪಕ್ಷ 31 ಸ್ಥಾನಗಳನ್ನು ಪಡೆದು ಪ್ರಚಂಡ ಜಯ ಗಳಿಸಿತು. ಸಿಕ್ಕಿಮ್‌ನ ಮುಖ್ಯಮಂತ್ರಿಯಾಗಿ ನೇಮಕಗೊಂಡ ಕೆ.ಎಲ್. ದೋರ್ಜಿಯವರು ಸಿಕ್ಕಿಮ್ ವಿಧಾನ ಸಭೆಯ ನಿರ್ಣಯವನ್ನು ಪ್ರಸ್ತಾಪಿಸಿ, ಭಾರತ-ಸಿಕ್ಕಿಮ್ ಸಂಬಂಧಗಳನ್ನು ಒತ್ತಿಹೇಳಿದ್ದರು. ಭಾರತದ ನಿಕಟ ಸಂಪರ್ಕ ಮತ್ತು ಇತರ ಸಹಾಯಗಳನ್ನು ಪಡೆಯಲು ಹಾಗೂ ದಕ್ಷ ಆಡಳಿತವನ್ನು ನಡೆಸಲು ಸಿಕ್ಕಿಮ್‌ನ ಮುಖ್ಯ ಕಾರ್ಯನಿರ್ವಾಹಕರು ಸಿಕ್ಕಿಮ್‌ನ ವಿಧಾನ ಸಭೆಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಲು 1974ರ ಹೊಸ ಸಂವಿಧಾನ ಅವಕಾಶ ಮಾಡಿತ್ತು.

ಬಹು ಸಂಖ್ಯಾತರ ಅಪೇಕ್ಷೆಯಂತೆ ಜಾರಿಗೆ ಬಂದ ಪ್ರಜಾಪ್ರಭುತ್ವದಲ್ಲಿ ಸಿಕ್ಕಿಮ್‌ನ ಚೋಗ್ಯಾಲರೇ ರಾಜ್ಯಮುಖ್ಯರಾಗಿದ್ದರು. ರಾಜತ್ವವನ್ನೇ ಅಳಿಸಿಹಾಕಬೇಕೆಂಬ ಒತ್ತಾಯವಿದ್ದಾಗ ಚೋಗ್ಯಾಲರು ಹೊಸ ವ್ಯವಸ್ಥೆಯನ್ನು ಮನಃಪೂರ್ವಕವಾಗಿ ಒಪ್ಪಿ, ಸಿಕ್ಕಿಮ್‌ನ ವೈಶಿಷ್ಟ್ಯವನ್ನು ಕಾಪಾಡಿದ್ದರೆ, ಅವರ ಘನತೆ ಹೆಚ್ಚುತ್ತಿತ್ತು. ಅವರು ಸಿಕ್ಕಿಮ್ ವಿವಾದವನ್ನು ಅಂತರರಾಷ್ಟ್ರೀಯ ಸಮಸ್ಯೆಯನ್ನಾಗಿ ಮಾಡಲು ಹೊರಟಿದ್ದು ದುರ್ದೈವದ ಸಂಗತಿ.

ಸಿಕ್ಕಿಮ್‌ನ ಚೋಗ್ಯಾಲರು ಪ್ರಜಾಪ್ರಭುತ್ವದ ವಿರೋಧಿಯೆಂದು ಅಲ್ಲಿನ ಪ್ರಜೆಗಳು ನೋಡಿದ ಅನಂತರ, ರಾಜತ್ವವನ್ನು ತೊಡೆದುಹಾಕಲು ಸರ್ಕಾರವನ್ನು ಒತ್ತಾಯಪಡಿಸಿದರು. ಪರಿ ಣಾಮವಾಗಿ ಏಪ್ರಿಲ್ 10, 1975ರಂದು ಸಿಕ್ಕಿಮ್‌ನ ವಿಧಾನಸಭೆ ರಾಜತ್ವವನ್ನು ತೆಗೆದುಹಾಕಲು ಶಿಫಾರಸ್ಸು ಮಾಡಿತು. ಆದರೂ ಭಾರತ ಸರ್ಕಾರ ಚೋಗ್ಯಾಲರಿಗೆ ಅನೇಕ ಸಲಹೆಗಳನ್ನು ನೀಡಿ, ಪ್ರಜಾಪ್ರಭುತ್ವದ ತತ್ವಗಳನ್ನು ಅನುಸರಿಸಬೇಕೆಂದು ಕೇಳಿಕೊಂಡಿತು. ಆದರೆ ಚೋಗ್ಯಾಲರು ಭಾರತ ಸರ್ಕಾರದ ಸಲಹೆಗಳನ್ನು ಗೌರವಿಸದೆ, ತಮ್ಮ ಬುಡಮೇಲು ಚಟುವಟಿಕೆಗಳನ್ನು ಮತ್ತೆ ಪ್ರಾರಂಭಿಸಿದರು. ಇದರಿಂದಾಗಿ ಸಿಕ್ಕಿಮ್ ಹಾಗೂ ಭಾರತದ ಹಿತಗಳಿಗೆ ಅಪಾಯವುಂಟಾಗುವ ಸಂಭವ ಕಂಡುಬಂತು. ಚೋಗ್ಯಾಲರು ತಮ್ಮ ಅರಮನೆಯನೆಯಲ್ಲಿ ಗುಪ್ತವಾಗಿ ಇಟ್ಟಿದ್ದ ಟ್ರಾನ್ಸ್

ಮೀಟರ್ ಮೂಲಕ ವಿದೇಶಿ ಸಂಘ–ಸಂಸ್ಥೆಗಳೊಡನೆ ವ್ಯವಹರಿಸುತ್ತಿದ್ದರು. ಚೋಗ್ಯಾಲರ ಸಂಚುಗಳು ಗೊತ್ತಾದ ಅನಂತರ ಟ್ರಾನ್ಸ್‌ಮೀಟರನ್ನು ಕಿತ್ತುಕೊಳ್ಳಲಾಯಿತು.

ಭಾರತ ಸರ್ಕಾರ ಚೋಗ್ಯಾಲರ ಚಟುವಟಿಕೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಅನಂತರ ಸಿಕ್ಕಿಮ್ ಪ್ರಜೆಗಳ ಹಿತವನ್ನು ರಕ್ಷಿಸಲು ಮುಂದಿನ ಕ್ರಮಗಳನ್ನು ಕೈಗೊಂಡಿತು. ಮೇಲೆ ತಿಳಿಸಿದಂತೆ ಏಪ್ರಿಲ್ 10, 1975ರಂದು 32 ಸದಸ್ಯರುಳ್ಳ ಸಿಕ್ಕಿಮ್ ವಿಧಾನಸಭೆ ಸರ್ವಾನುಮತದಿಂದ ನಿರ್ಣಯವನ್ನು ಮಂಡಿಸಿ, ಚೋಗ್ಯಾಲರನ್ನು ಅಧಿಕಾರದಿಂದ ತತ್‌ಕ್ಷಣ ತೆಗೆಯಬೇಕೆಂದು ಒತ್ತಾಯಪಡಿಸಿತು. ಇದೇ ನಿರ್ಣಯ ಸಿಕ್ಕಿಮನ್ನು ಭಾರತ ಒಕ್ಕೂಟದಲ್ಲಿ ಸೇರಿಸುವಂತೆ ಶಿಫಾರಸ್ಸು ಮಾಡಿತು. ಈ ನಿರ್ಣಯಕ್ಕೆ ಸಿಕ್ಕಿಮ್ ಪ್ರಜೆಗಳ ಅಭಿಪ್ರಾಯವನ್ನು ತಿಳಿಯಲು ಏಪ್ರಿಲ್ 14, 1975 ರಂದು ಸಿಕ್ಕಿಮ್‌ನಲ್ಲಿ ಜನಾಭಿಪ್ರಾಯ ಸಂಗಹಣೆ ಮಾಡಲಾಯಿತು. ಇದರಲ್ಲಿ ಸಿಕ್ಕಿಮ್ ಪ್ರಜೆಗಳು ತಮ್ಮ ವಿಧಾನಸಭೆಯ ನಿರ್ಣಯವನ್ನು ಬಹಳ ಹರ್ಷದಿಂದ ಸ್ವಾಗತಿಸಿ, ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು. 59,637 ಮತಗಳು ಸಿಕ್ಕಿಮ್.ವಿಧಾನಸಭೆಯ ನಿರ್ಣಯವನ್ನು ಬೆಂಬಲಿಸಿದರೆ, 1,496 ಮತಗಳು ಅದನ್ನು ವಿರೋಧಿಸಿದುವು. ಅಂದರೆ, ಸಿಕ್ಕಿಮ್‌ನ ಬಹುಸಂಖ್ಯಾತ ಜನರು ಚೋಗ್ಯಾಲರ ಆಡಳಿತದಿಂದ ಬೇಸರಪಟ್ಟು, ಭಾರತದ ಒಂದು ಅಂಗರಾಜ್ಯವಾಗಲು ತಮ್ಮ ಒಪ್ಪಿಗೆಯನ್ನು ಅಂದು ನೀಡಿದರು. ಪರಿಣಾಮವಾಗಿ ಸಿಕ್ಕಿಮನ್ನು 334 ವರ್ಷಗಳ ಕಾಲ ಆಳಿದ ನಮ್‌ಗ್ಯಾಲ್ ಸಂತತಿಯ ರಾಜ್ಯಭಾರ ಕೊನೆಗೊಂಡಿತು.

ಸಿಕ್ಕಿಮ್ ಪ್ರಜೆಗಳ ಇಚ್ಛೆಗನುಗುಣವಾಗಿ, ಭಾರತ ಸರ್ಕಾರ ಸಿಕ್ಕಿಮ್‌ಗೆ ನೀಡಿದ್ದ ಸಹಸದಸ್ಯ ಸ್ಥಾನವನ್ನು ರದ್ದುಗೊಳಿಸಿ, ಅದಕ್ಕೆ ಭಾರತದಲ್ಲಿರುವ ಇತರ ರಾಜ್ಯಗಳ ಸ್ಥಾನಮಾನವನ್ನು ಕಲ್ಪಿಸಲು 38ನೆಯ ಸಂವಿಧಾನ ತಿದ್ದುಪಡಿಯನ್ನು ಸಂಸತ್ತಿನಲ್ಲಿ ಮಂಡಿಸಿತು. ಈ ಮಸೂದೆಗೆ ಲೋಕ ಸಭೆ ಏಪ್ರಿಲ್ 23ರಲ್ಲೂ, ರಾಜ್ಯ ಸಭೆ ಏಪ್ರಿಲ್ 26, 1975ರಲ್ಲೂ ತಮ್ಮ ಒಪ್ಪಿಗೆಯನ್ನು ನೀಡಿದುವು. ಅನಂತರ ಭಾರತ ಸಂವಿಧಾನದ ನಿಯಮಗಳಿಗನುಸಾರವಾಗಿ, ಭಾರತದ ಒಕ್ಕೂಟದಲ್ಲಿರುವ ಒಟ್ಟು ರಾಜ್ಯಗಳಲ್ಲಿ ಅರ್ಧದಷ್ಟು ಈ ಮೇಲ್ಕಂಡ ಮಸೂದೆಗೆ ತಮ್ಮ ಒಪ್ಪಿಗೆಗಳನ್ನು ನೀಡಿ ಅನುಮೋದಿಸಿದುವು. ಆನಂತರ ಭಾರತದ ರಾಷ್ಟ್ರಪತಿಯವರು ಈ ಮಸೂದೆಗೆ ತಮ್ಮ ಸಮ್ಮತಿಯನ್ನು ಮೇ 16, 1975ರಂದು ನೀಡಿದರು. ಪರಿಣಾಮವಾಗಿ, ಸಿಕ್ಕಿಮ್ ಭಾರತ ಒಕ್ಕೂಟದ 22ನೆಯ ರಾಜ್ಯವಾಗಿ ಉದಯಿಸಿತು.

ಭಾರತದ ಇತರ ರಾಜ್ಯಗಳ ಸ್ಥಾನಮಾನಗಳನ್ನು ಸಿಕ್ಕಿಮ್ ಪಡೆದಿರುವುದು ಇತಿಹಾಸದಲ್ಲಿ ಹೊಸದೇನಲ್ಲ. 1959ಕ್ಕೆ ಮುಂಚೆ "ಹವಾಯ್" ಅಮೆರಿಕದಲ್ಲಿ ಶಾಸಕಾಂಗಕ್ಕೆ ಒಬ್ಬ (ಮತದಾನದ ಹಕ್ಕಿಲ್ಲದ) ಸದಸ್ಯನನ್ನು ಕಳುಹಿಸುತ್ತಿತ್ತು. ಆದರೆ, ಅಲ್ಲಿನ ನಿವಾಸಿಗಳ ಇಚ್ಛೆಗನುಗುಣವಾಗಿ, ಅಮೆರಿಕದ ಶಾಸಕಾಂಗದ ಎರಡು ಸದನಗಳು ಮಸೂದೆಯನ್ನು ಅನುಮೋದಿಸಿ, ಹವಾಯನ್ನು ಅಮೆರಿಕ ಸಂಯುಕ್ತ ಸಂಸ್ಥಾನದ 50ನೆಯ ರಾಜ್ಯವಾಗಿ 1959ರಲ್ಲಿ ಮಾಡಿದುವು.

ಪ್ರಥಮವಾಗಿ ಸಿಕ್ಕಿಮ್ ರಾಜ್ಯಕ್ಕೆ ರಾಜ್ಯಪಾಲರನ್ನು ಭಾರತದ ರಾಷ್ಟ್ರಪತಿಯವರು ನೇಮಿಸಿದಾಗ, ಅವರು ಮೇ 16, 1975ರಂದು ಸಿಕ್ಕಿಮ್‌ನ ರಾಜಧಾನಿಯಾದ ಗ್ಯಾಂಗ್‌ಟಾಕ್‌ನಲ್ಲಿ ಅಧಿಕಾರವನ್ನು ವಹಿಸಿಕೊಂಡರು. ಸಿಕ್ಕಿಮ್‌ನ ಮೊದಲನೆ ರಾಜ್ಯಪಾಲರಾಗಿ ನೇಮಕಗೊಂಡಿರುವ

ಬಿ. ಬಿ. ಲಾಲ್‌ರವರು ಸಿಕ್ಕಿಮ್‌ನ ಮಾಜಿ ಮುಖ್ಯ ಕಾರ್ಯನಿರ್ವಾಹಕರಾಗಿದ್ದರು. ಹೊಸ ರಾಜಕೀಯ ಪದ್ಧತಿಯ ಪ್ರಕಾರ ಗೃಹ ಮತ್ತು ಹಣಕಾಸು ವ್ಯವಹಾರಗಳನ್ನು ಮಂತ್ರಿ ಮಂಡಲಕ್ಕೆ ವಹಿಸಲಾಗಿದೆ. ಇದಕ್ಕೆ ಮೊದಲು ಈ ಖಾತೆಗಳು ಸಿಕ್ಕಿಮ್‌ನ ದಿವಾನರ ಅಧೀನ ಕ್ಕೊಳಪಟ್ಟಿದ್ದರೂ ಅಲ್ಲಿನ ಚೋಗ್ಯಾಲರೇ ಅವುಗಳನ್ನು ನೇರವಾಗಿ ನೋಡಿಕೊಳ್ಳುತ್ತಿದ್ದರು.

ಭಾರತ–ಸಿಕ್ಕಿಮ್‌ಗಳ ನಿಕಟ ಸಂಬಂಧದ ಬಗ್ಗೆ ಅಲ್ಲಿನ ಮುಖ್ಯಮಂತ್ರಿ ಕೆ.ಎಲ್.ದೋರ್ಜಿಯವರು ಹೀಗೆ ಹೇಳಿದ್ದಾರೆ: "ಭಾರತ ಒಕ್ಕೂಟದ ಇತರ ರಾಜ್ಯಗಳಿಗೆ ದೊರೆಯುವ ಹಕ್ಕುಗಳು ಮತ್ತು ಜವಾಬ್ದಾರಿಗಳು ಸಿಕ್ಕಿಮ್‌ಗೆ ದೊರೆಯಬೇಕಾದರೆ ಅದು ಭಾರತ ಒಕ್ಕೂಟಕ್ಕೆ ಸೇರಿದಾಗ ಮಾತ್ರ. ಸಿಕ್ಕಿಮ್‌ಗೆ ಬೇರೆ ರೀತಿಯ ಸ್ಥಾನಮಾನ ಕೊಟ್ಟರೆ ಅದಕ್ಕೆ ಹೊಸತನವಿರುವುದಿಲ್ಲ; ಮತ್ತು ನಮ್ಮ ರಾಜಕೀಯ ಇಚ್ಛೆಗೆ ಹಾಗೂ ಬುನಾದಿಗಳಿಗೆ ಧಕ್ಕೆಯುಂಟಾಗುತ್ತದೆ. ನಮಗೆ ನ್ಯಾಯ ದೊರೆಯಬೇಕಾದರೆ ಸಿಕ್ಕಿಮ್ ಭಾರತ ಒಕ್ಕೂಟದ ಒಂದು ರಾಜ್ಯವಾಗಲೇಬೇಕು."

ಹೀಗೆ, ಭಾರತದ ಈಶಾನ್ಯ ಗಡಿಯಲ್ಲಿ ಒಂದು ಸಣ್ಣ ಗೋಪುರದ ಆಕಾರದಲ್ಲಿರುವ ಸಿಕ್ಕಿಮ್‌ನ ರಾಜ್ಯದ ಸ್ಥಾನಮಾನ ಬಹಳ ಮಹತ್ತ್ವದ್ದು. ಹೆದ್ದಾರಿಯಂತಿರುವ ಚುಂಬಿ ಕಣಿವೆಗೆ ಸಂಪರ್ಕ ಕಲ್ಪಿಸುವ ಈ ಸಣ್ಣ ರಾಜ್ಯ ಭಾರತದ ರಕ್ಷಣೆಯಲ್ಲಿ ಮುಖ್ಯ ಪಾತ್ರ ವಹಿಸಬಲ್ಲುದು. ಆದ್ದರಿಂದ ಭಾರತ ಸಿಕ್ಕಿಮನ್ನು ತನ್ನ ಒಕ್ಕೂಟದಲ್ಲಿ ಸೇರಿಸಿದ್ದು ರಕ್ಷಣೆಯ ದೃಷ್ಟಿಯಿಂದ ಮಹತ್ತರವಾದದ್ದು. ಇದರಿಂದ ಅಲ್ಲಿನ ಜನರ ಆಸೆಗಳನ್ನು ಈಡೇರಿಸಿದಂತಾಯಿತು.

ಡಾ. ಎ. ವಿ. ನರಸಿಂಹಮೂರ್ತಿ

# ಬೆಂಗಳೂರಿನ ಗವೀಪುರಂ ಗಂಗಾಧರೇಶ್ವರ ದೇವಾಲಯ

ಕರ್ನಾಟಕದ ರಾಜಧಾನಿಯಾದ ಬೆಂಗಳೂರು ನಗರದ ಪ್ರಾಚೀನ ಇತಿಹಾಸವನ್ನು ತಿಳಿಯಲೆತ್ನಿಸುವಾಗ ಅಲ್ಲಿನ ಗವಿಪುರಂ ಗಂಗಾಧರೇಶ್ವರ ದೇವಾಲಯದೆಡೆಗೆ ನಮ್ಮ ಗಮನ ಹರಿಸುವುದು ಅತ್ಯಾವಶ್ಯಕ. ಈ ದೇವಾಲಯ ಬಸವನಗುಡಿಯ ಪರಿಸರದಲ್ಲಿದೆ. ಪ್ರಾಚೀನ ಕಾಲದಲ್ಲಿ ಈ ಪ್ರದೇಶ ದಟ್ಟವಾದ ಕಾಡಿನಿಂದ ಪರಿವೃತವಾಗಿದ್ದಿರಬೇಕು.

ಮಧ್ಯಮ ಗಾತ್ರದ ಗುಡ್ಡ, ಅದರ ದಕ್ಷಿಣ ಪಾರ್ಶ್ವದಲ್ಲಿ ಒಂದು ಗುಹೆ, ಗುಹೆಯೊಳಗೆ ದೇವಾಲಯ. ಭಾವುಕನಿಗೆ ಇದರ ಅಧಿದೇವತೆಯಾದ ಗಂಗಾಧರನನ್ನು ಸಂದರ್ಶಿಸಿ ಅವನ ಅನುಗ್ರಹಕ್ಕೆ ಪಾತ್ರನಾಗುವ ಭಾಗ್ಯ ದೊಡ್ಡದು. ಈ ಗುಹಾಲಯ ಒಂದು ವಿಚಿತ್ರವಾದ ರಚನೆ. ಗೋಚರಕ್ಕೆ ರಮಣೀಯವಲ್ಲದ ಬಂಡೆಯೊಳಗೆ ಈ ದೇವಗೃಹ. ಇದರ ಪರಿಸರವನ್ನು ಪರಿಶೀಲಿಸಿದಾಗ ಎಲ್ಲವೂ ಅರ್ವಾಚೀನ. ಆದರೆ ಇದರ ಪ್ರಾಚೀನ ಇತಿಹಾಸ ಹಿರಿದು.

ಸ್ವಲ್ಪ ನೈಋತ್ಯಾಭಿಮುಖವಾಗಿರುವ ಈ ದೇವಾಲಯವನ್ನು ಪ್ರವೇಶಿಸುವಾಗ ಎದುರು ಕಂಡುಬರುವ ಕಲ್ಲಿನ ಮಂಟಪ ಗುಹಾಲಯಕ್ಕೆ ಪ್ರವೇಶದ್ವಾರವನ್ನು ಒದಗಿಸಿಕೊಡುತ್ತದೆ. ಈ ಮಂಟಪವನ್ನು ನಿರ್ಮಿಸಿದ ಬಗೆಗೆ ದಾಖಲೆಗಳು ದೊರಕದಿದ್ದರೂ ಇದು ಸುಮಾರು 200-300 ವರ್ಷಗಳಿಂದೀಚೆಗೆ ನಿರ್ಮಾಣವಾದುದೆಂದು ಶಿಲ್ಪಶೈಲಿಯಿಂದ ಖಚಿತವಾಗುತ್ತದೆ.

ಗುಹೆಯ ದ್ವಾರ ಸುಮಾರು 30 ಅಡಿ ಅಗಲವಾಗಿದ್ದು ಎತ್ತರದಲ್ಲಿ ಆಳು ಪ್ರಮಾಣವಾಗಿದೆ. ಹೊರಗಿನ ಮಂಟಪ ನಿರ್ಮಾಣದ ಅನಂತರ ಈ ಅಗಲ ದ್ವಾರದ ಗುಹೆಗೆ ಭಿತ್ತಿಯನ್ನು ನಿರ್ಮಿಸಲಾಯಿತು.

ಗುಹೆಯ ಶಿಲೆಯನ್ನು ಪರಿಶೀಲಿಸಿದರೆ, ಅದರ ಸಂಯೋಜನೆಯಲ್ಲಿ ಅತ್ಯಂತ ಕಾಠಿಣ್ಯವುಳ್ಳ ಅಂಶವೂ, ಮೃದು ಅಂಶವೂ ಕಂಡುಬರುತ್ತದೆ. ಮೃದು ಅಂಶ ದೊರಕಿದಂತೆ ಗುಹೆಯನ್ನು ಕೊರೆದುಕೊಂಡು ಹೋದಹಾಗೆ ಭಾಸವಾಗುತ್ತದೆ. ಹೀಗಾದುದರಿಂದ ಗುಹೆಯ ಅಂತರ್ದೃಶ್ಯ ಏಕರೂಪತೆಯನ್ನು ಹೊಂದಿಲ್ಲ.

ಗಂಗಾಧರೇಶ್ವರ ಗುಹಾಲಯದೊಳಗೆ ಎರಡು ಗರ್ಭಗೃಹಗಳಿವೆ. ಒಂದನೆಯದು ಈಶ್ವರನ ಪರವಾಗಿ ನಿರ್ಮಿಸಿದ ಗುಡಿ ; ಎರಡನೆಯದು ದುರ್ಗಾಲಯ. ಶಿವಾಲಯದ ಬಲ ಪಾರ್ಶ್ವದಲ್ಲಿ ದುರ್ಗಾಲಯವಿದೆ. ಇವೆರಡೂ ಗುಡಿಗಳು ಗಜಪೃಷ್ಠಾಕಾರದ ರಚನೆಗಳಾಗಿವೆ. ಶಿವಾಲಯಕ್ಕೆ ಸುಖನಾಸಿ ಇದೆ. ಸುಖನಾಸಿಯ ಎದುರುಗಡೆ ನಂದಿ ಇದೆ. ನಂದಿಯ ಇಬ್ಬದಿಗಳಲ್ಲಿ ಒಂದೊಂದು ಸ್ತಂಭವಿದೆ. ಈಶ್ವರ ಲಿಂಗವೂ ನಂದಿಯೂ ಪ್ರತಿಷ್ಠಾಪನೆಗೊಂಡ ಶಿಲ್ಪಗಳಾಗಿರದೆ, ಆಯಾ ಸ್ಥಳಗಳಲ್ಲಿ ಕಲ್ಲಿನಲ್ಲಿ ಕೊರೆದ ಬಿಂಬಗಳಾಗಿವೆ. ಈ ಶಿಲೆ ಅತಿ ಕಠಿಣವಾಗಿರುವುದನ್ನು ಗಮನಿಸಬಹುದು.

ದುರ್ಗಾಲಯಕ್ಕೆ ಸುಖನಾಸಿ ಇರುವುದಿಲ್ಲ. ಅದರ ಎದುರು ಭಾಗದಲ್ಲಿ ಇಕ್ಕೆಡೆಗಳಲ್ಲಿ ಎರಡೆರಡು ಕಂಬಗಳಿವೆ. ಈಶ್ವರಾಲಯಕ್ಕೂ, ದುರ್ಗಾಲಯಕ್ಕೂ ಪ್ರತ್ಯೇಕ ಪ್ರತ್ಯೇಕವಾದ ಅಗಲ ಕಿರಿದಾದ ಪ್ರದಕ್ಷಿಣ ಪಥವಿದೆ. ಎರಡೂ ಗರ್ಭಗೃಹಗಳನ್ನು ಆವರಿಸಿಕೊಂಡು ಈ ಗಜಪೃಷ್ಠಾಕಾರದಲ್ಲಿ ಪಥವಿದೆ. ಇದರ ಎತ್ತರ ಅರ್ಧಾಳು ಪ್ರಮಾಣ.

ದುರ್ಗಾಲಯದ ಬಲ ಪಾರ್ಶ್ವದಲ್ಲಿ ಚತುರಸ್ರವಾದ ಒಂದು ಗುಡಿ ಇದೆ. ಇದರಲ್ಲಿ ಯಾವ ವಿಗ್ರಹವೂ ಕಂಡುಬರುವುದಿಲ್ಲ. ಇದರ ಬಲ ಪಾರ್ಶ್ವದಲ್ಲಿ ಎರಡು ಗುಹೆಗಳಿವೆ. ಇವು ಬಹು ಅಗಲ ಕಿರಿದಾದವುಗಳು. ಒಂದು ಗುಹೆ ಇಕ್ಕವಾಗಿದ್ದು ಒಂದಂಶ ಕುಳಿತುಕೊಳ್ಳಲು ಅಥವಾ ಒರಗಲು ಅನುಕೂಲವಾಗಿದೆ. ಇನ್ನೊಂದು ಸುಮಾರು 50–60 ಅಡಿ ಒಳಭಾಗಕ್ಕೆ ಮುಂದುವರಿದಿದೆ.

ಈ ಗುಹಾಲಯದ ಛಿತ್ತಿಗಳನ್ನು ಇಟ್ಟಿಗೆಗಳಿಂದ ಕಟ್ಟಲಾಗಿದೆ. ಒಳಗಿಂದೊಳಗೆ ಪ್ರಾಕಾರ ರೂಪದಲ್ಲಿ ರೂಪ ರಚನೆಯ ಒಳಪಾರ್ಶ್ವದಲ್ಲಿ ಬಹು ದೂರಕ್ಕೆ ಕೊರೆದ ಶಿಲಾಸ್ತಂಭಗಳು ಇವೆ ಎನ್ನಲಾಗಿದೆ. ಇವುಗಳಿರುವುದು ನಿಜವಾದರೆ ಇವು ಗುಹೆಗೆ ಸಮತೋಲನ ಶಕ್ತಿಯನ್ನೀಯುವುವು ಎನ್ನಬಹುದು.

ಗವಿ ಗಂಗಾಧರೇಶ್ವರ ದೇವಾಲಯದ ಬಾಹ್ಯಾವರಣವನ್ನು ಪರಿಶೀಲಿಸಿದಾಗ ಶಿವಾಲಯದ ಗರ್ಭಗೃಹದ ಮೇಲೆ ವೃತ್ತಾಕಾರದ ವಿಮಾನವಿದೆ ; ಹಾಗೂ ದುರ್ಗಾಲಯದ ಗರ್ಭಗೃಹದ ಮೇಲೆ ಅಪ್ಸಬಾಹು ವಿಮಾನವೂ ಇದೆ. ಇವುಗಳೂ ಇಟ್ಟಿಗೆಯಿಂದಲೇ ನಿರ್ಮಿತವಾಗಿದ್ದು ಉಬ್ಬುಶಿಲ್ಪಗಳಿಂದಲೂ, ಕೀರ್ತಿ ಮುಖಗಳಿಂದಲೂ ಪಿಲಾಸ್ಟರುಗಳಿಂದಲೂ ಕೂಡಿಕೊಂಡಿರುವುದನ್ನು ಕಾಣಬಹುದು.

ದೇವಾಲಯದ ಮಂಟಪದ ಮುಂಭಾಗದಲ್ಲಿ ನಾಲ್ಕು ಸ್ತಂಭಗಳಿವೆ. ಇವು ಆಯುಧ ನಿರ್ದೇಶ ಸ್ತಂಭಗಳು. ಬಲಪಾರ್ಶ್ವದಲ್ಲಿ ತ್ರಿಶೂಲ ಮತ್ತು ಕರ್ತರಿ ಹಾಗೂ ಎಡ ಪಾರ್ಶ್ವದಲ್ಲಿ ಡಮರು ಮತ್ತು ಕರ್ತರಿ ನಿರ್ದೇಶಿತ 25 ಅಡಿ ಎತ್ತರದ ಶಿಲಾ ಸ್ತಂಭಗಳಿವೆ. ಇವುಗಳು ಶಿವಶಕ್ತಿಯ ಸಂಕೇತಗಳಾಗಿವೆ. ಎದುರು ಇರುವ ಧ್ವಜಸ್ತಂಭದ ಕೆಳಭಾಗದ ತಗಡಿನ ಮೇಲೂ ತ್ರಿಶೂಲ–ಡಮರು ನಿರ್ದೇಶವಿದೆ. ಇದು ಸಹ ಶಿವ-ಶಕ್ತಿಯ ನಿರ್ದೇಶ.

## ಗಂಗಾಧರೇಶ್ವರ ದೇವಾಲಯದ ಶಿಲ್ಪ ಸಂಪತ್ತು

ದುರ್ಗಾಲಯದಲ್ಲಿ ನಾಲ್ಕಡಿ ಎತ್ತರದ ಮನೋಹರವಾದ ಲಕ್ಷ್ಮೀ ವಿಗ್ರಹವಿದೆ. ಮೇಲಿನ ಎರಡು ಬಾಹುಗಳಲ್ಲಿ ಕುಮುದವನ್ನು ಧರಿಸಿ, ಕೆಳಗಿನ ಕೈಗಳು ಅಭಯ-ವರದ ಹಸ್ತವಾಗಿವೆ. ಈ ಶಿಲಾ ಮೂರ್ತಿ ಕ್ರಿಸ್ತಶಕ ಹದಿನಾರನೆಯ ಶತಕದಿಂದ ಇತ್ತೀಚಿಗಿನದೆಂದು ಶೈಲಿಯಿಂದ ಖಚಿತವಾಗುತ್ತದೆ. ಪ್ರಾಯಶಃ ಇದಕ್ಕಿಂತ ಹಿಂದಣ ಮೂರ್ತಿ ನಷ್ಟವಾಗಿದ್ದಿರಬೇಕು. ಕಾರಣ ಈ ಗುಡಿಯ ಮೂಲ ರಚನೆ ಕ್ರಿಸ್ತಶಕ 8ನೆಯ ಶತಮಾನದಷ್ಟಾದರೂ ಪ್ರಾಚೀನವಾಗಬಹುದು. ಎರಡೂ ಗರ್ಭಗೃಹಕ್ಕೆ ಅನ್ವಯಿಸಿ, ಗಜ ಪೃಷ್ಠಾಕಾರದ ಪಥದಲ್ಲಿ ಭೈರವ, ದಕ್ಷಿಣಾಮೂರ್ತಿ, ಸಪ್ತಮಾತೃಕಾ ಬಿಂಬಗಳೂ ಇದ್ದುವೆಂದು ತಿಳಿಯಲಾಗಿದೆ. ಇವುಗಳನ್ನು ಇದೀಗ ಸಂಕೋಚ ಮಾಡಿ ಹೊರಗಿಡಲಾಗಿದೆ. (ಜೀರ್ಣೋದ್ಧಾರದ ನಿಮಿತ್ತ) ಇವುಗಳಲ್ಲಿ ಎರಡೂವರೆ ಅಡಿ ಎತ್ತರದ ಭೈರವ ಮೂರ್ತಿ ಪಲ್ಲವ, ಚೋಳ ಶೈಲಿಯದಾಗಿದ್ದು ಉತ್ತಮ ಶಿಲ್ಪವಾಗಿವೆ. ಇದು ಬಹುಶಃ ದುರ್ಗಾಲಯದ ಬಲಭಾಗದ ಗುಡಿಯಲ್ಲಿದ್ದಿರ

ಬೇಕು. ಗಂಗಾಧರೇಶ್ವರ ದೇವಾಲಯುದಲ್ಲಿರುವ ಶಿಲ್ಪಗಳಲ್ಲಿ ಇದು ಅತ್ಯಂತ ಪ್ರಾಚೀನ ಶಿಲ್ಪ ವೆನ್ನಬಹುದು. ಇನ್ನೊಂದು ಮೂರ್ತಿ ಎರಡೂವರೆ ಅಡಿ ಎತ್ತರದ ಆದಿತ್ಯ ಶಿಲ್ಪ. ಇದು ಕ್ರಿಸ್ತಶಕ ಹನ್ನೆರಡನೆಯು ಶತಮಾನದಷ್ಟು ಹಳೆಯದು. ಇದರಲ್ಲಿ ಅರುಣ ನಿರ್ದೇಶವಿಲ್ಲ. ಸಪ್ತ ಮಾತೃಕೆಯರ ಬಿಂಬಗಳು ಸುಮಾರು ಹದಿನಾರನೆಯ ಶತಮಾನದಿಂದೀಚಿನವು.' ಪ್ರತಿಯೊಂದ ರಲ್ಲೂ ಅದರದರ ಲಾಂಛನಗಳೂ ಆಯುಧಗಳೂ ಇವೆ. ಚಾಮುಂಡೀ ವಿಗ್ರಹದಲ್ಲಿ ಸಿಂಹ ಲಾಂಛನವೂ ಮೂರು ರುಂಡಗಳ ನಿರ್ದೇಶನವೂ ಇವೆ. ಭಿನ್ನವಾದ ದಕ್ಷಿಣಾ ಮೂರ್ತಿ ಉತ್ತಮವಾದ ಶಿಲ್ಪಗಳ ಪಂಕ್ತಿಯಲ್ಲಿ ಸೇರಬಹುದು. ಇದನ್ನು ಕಗ್ಗಲ್ಲಿನಲ್ಲಿ ಕೊರೆಯ ಲಾಗಿದೆ. ಸ್ವಲ್ಪ ಭಿನ್ನವಾದ ಗಣೇಶನ ಇನ್ನೊಂದು ಮೂರ್ತಿ ಮರದಿಂದ ಮಾಡಿದ ಗಣೇಶ ವಿಗ್ರಹವನ್ನು ಶಿಲ್ಪದಲ್ಲಿ ಹೋಲುತ್ತದೆ. ಮೂರು ಅಡಿ ಎತ್ತರದ ಅಗ್ನಿಶಿಲ್ಪ ಬಹು ಆಕರ್ಷಕವೂ, ಲಾವಣ್ಯಯುತವೂ ಆಗಿದೆ. ನಷ್ಟವಾಗಿ ಹೋದ ಸ್ಕಂದ ದಕ್ಷಿಣಾ ಮೂರ್ತಿ, ಚಂಡೇಶ್ವರ, ವಾರಾಹಿ, ಇಂದ್ರಾಣಿ, ಆದಿತ್ಯ ಮೂರ್ತಿಗಳ ಬದಲಿಗೆ ಹೊಸದಾಗಿ ಕೆತ್ತಿದ ಶಿಲ್ಪಗಳನ್ನು ತರಿಸಲಾಗಿದೆ.

## ದೇವಾಲಯುದ ಪ್ರಾಚೀನತೆ ಮತ್ತು ಧರ್ಮ ವೈಶಿಷ್ಟ್ಯ

ಗವಿ ಗಂಗಾಧರೇಶ್ವರ ದೇವಾಲಯ ತೋರಿಕೆಗೆ ಸ್ವಾಭಾವಿಕ ಗುಹೆಯಂತಿದ್ದರೂ ಇದು ಸುಮಾರು ಬಾದಾಮಿ ಚಾಳುಕ್ಯರ ಕಾಲದ ಮಾನವ ನಿರ್ಮಿತ ಗುಹೆ ಎನ್ನಬಹುದು. ಇಲ್ಲಿರುವ ಗಜಪೃಷ್ಠಾಕಾರದ ಗುಹೆಗಳು ಕರ್ನಾಟಕದ ಈ ಭಾಗಕ್ಕೆ ಅಪರಿಚಿತ, ಆದುದರಿಂದ ಅಪೂರ್ವ. ಇಲ್ಲಿ ಪ್ರಾಚೀನ ಕಾಲದಲ್ಲಿ ಕಾಪಾಲಿಕ ಪಂಥವಾಗಲೀ, ಪಾಶುಪತ ಪಂಥವಾಗಲೀ ಪ್ರಬಲವಾಗಿ ದ್ದಿರಬೇಕು. ಕ್ರಿಸ್ತಶಕ 9–10ನೆಯ ಶತಮಾನದಲ್ಲಿ ನಾಥ ಪಂಥವೂ ಅಸ್ತಿತ್ವದಲ್ಲಿದ್ದಿರಬಹುದು. ತ್ರಿಶೂಲದ ನಿರ್ದೇಶ ದುರ್ಗೆಯ ಶೂಲಿನಿ ರೂಪವನ್ನೂ ಡಮರು ಶಿವನ ನೃತ್ಯ ರೂಪವನ್ನೂ ತೋರಿಸುವ ಸಂಕೇತವಿರಬೇಕು. ಪ್ರಾಯಶಃ ದುರ್ಗಾಲಯುದಲ್ಲಿ ಮೂಲತಃ ಲಕ್ಷ್ಮೀ–ಸರಸ್ವತಿಯ ವಿಗ್ರಹವಿದ್ದಿರಬೇಕು. ಇದಕ್ಕೆ ದೃಷ್ಟಾಂತವಾಗಿ ಸುಮಾರು 300 ವರ್ಷ ಪ್ರಾಚೀನ ವಾಗಬಹುದಾದ ಈ ತೆರನಾದ ಅಪೂರ್ವ ಶಿಲ್ಪವೇ ಸಂಕೇತವೆನ್ನಬಹುದು. ಈ ಬಿಂಬದ ಮೇಲ್ಗಿನ ಬಾಹುಗಳಲ್ಲಿ ಅಕ್ಷಮಾಲೆ ಮತ್ತು ಕುಮುದಗಳಿವೆ. ಕೆಳಬಾಹುಗಳು ಅಭಯ ವರದ ಹಸ್ತವಾಗಿವೆ. ಇದು ಬಹು ಮನೋಹರವಾದ ಮೂರ್ತಿ. ಕಲ್ಯಾಣಿ ಚಾಳುಕ್ಯರ ಕಾಲದ ಸ್ತಂಭಗಳು ಗುಹಾಲಯುದಲ್ಲಿವೆ. ಬಹುಶಃ ಆಧಾರವನ್ನು ಬಲಪಡಿಸುವುದಕ್ಕೋಸ್ಕರ ಇವನ್ನಿರಿಸಿ ದ್ದಿರಬೇಕು. ಈಶ್ವರನಿಗೆ ಸ್ಕಂದನ ಉತ್ಸವ ಮೂರ್ತಿ ಇದೆ. ಇದರ ವೈಶಿಷ್ಟ್ಯ ಹಿರಿದು. ಇದು ಪ್ರಾಚೀನತಮ ಸೋಮಸ್ಕಂದ ಆರಾಧನೆಯ ಪ್ರತ್ಯಕ್ಷ ದೃಷ್ಟಾಂತ. ಈ ಗುಹಾಲಯುದಲ್ಲಿ ಶತಮಾನ ಉರುಳಿದಂತೆ ಪರಿವಾರ ದೇವತೆಗಳೂ ಸಂಖ್ಯೆಯಲ್ಲಿ ವೃದ್ಧಿಯಾದುವು.

ಒಟ್ಟಿನಲ್ಲಿ ಹೇಳುವುದಾದರೆ ಶಿವ–ಶಕ್ತಿ ಸಮಾನ ಸಾನ್ನಿಧ್ಯವುಳ್ಳ ಸುಮಾರು ಕ್ರಿ. ಶ. 6–7ನೆಯ ಶತಮಾನದಿಂದ ಕ್ರಿ. ಶ. 17ನೆಯ ಶತಮಾನದ ತನಕ ಒಂದಲ್ಲ ಒಂದು ರೀತಿಯಲ್ಲಿ ರೂಪಾಂತರಗೊಂಡ ವಿಚಿತ್ರ ಗುಹಾಲಯ ಗವಿ ಗಂಗಾಧರೇಶ್ವರ ದೇವಾಲಯು. ಇದು ಜೋಡಿ ದೇವಾಲಯುದ ಮಾದರಿಯಲ್ಲಿದೆ.

## ಜೀರ್ಣೋದ್ಧಾರ

ಈ ದೇವಾಲಯು ಸದಾ ಬಲರಾಶಿ ಹಾಗೂ ಶಕ್ತಿಸಹಿತ ಗಂಗಾಧರವೆಂಬ ಹೆಸರನ್ನು ಅನ್ವರ್ಥನಾಮವಾಗಿ ಹೊಂದಿಕೊಂಡಿದೆ. ಅತ್ಯಂತ ನಿಕೃಷ್ಟ ಸ್ಥಿತಿಯ ಈ ದೇವಗೃಹವನ್ನು ಮಗಜಿ ಧೊಂಡೋಸರು ಜೀರ್ಣೋದ್ಧಾರ ಮಾಡಿ ಭಕ್ತ ವೃಂದಕ್ಕೆ ಮಹದುಪಕಾರ ಮಾಡಿದ್ದಾರೆ. ಇದೊಂದು ಸುಕೃತ. ಈ ದೇವಾಲಯುವನ್ನು ಯೋಗ್ಯ ರೀತಿಯಲ್ಲಿ ಸುವ್ಯವಸ್ಥಿತವಾಗಿ ನಡೆಸಿಕೊಂಡು ಬರುವುದು ಅಗತ್ಯದ ಕರ್ತವ್ಯ. ಈ ದೇವಾಲಯದ ಪರಿಸರವನ್ನು ಪ್ರವಾಸೀ ಕೇಂದ್ರವಾಗಿ ಪರಿವರ್ತನೆ ಗೊಳಿಸಬಹುದು. ಗವಿ ಗಂಗಾಧರೇಶ್ವರ ದೇವಾಲಯದ ರಚನೆಯಲ್ಲಿ ಒಂದು ವೈಶಿಷ್ಟ್ಯವನ್ನು ಕಂಡುಕೊಳ್ಳಬಹುದು. ಮಕರ ಸಂಕ್ರಮಣದ ದಿನ ಸಂಜೆ ತಾಸು 4 ಮತ್ತು 6ರ ನಡುವೆ ಸೂರ್ಯ ರಶ್ಮಿಯು ಶಿವಾಲಯದ ನಂದಿಯ ಮೇಲೆ ಬಿದ್ದು ಅನಂತರ ಶಿವಲಿಂಗದ ಮೇಲೆ ಕೇಂದ್ರೀಕೃತವಾಗುತ್ತದೆ. ಇದಕ್ಕೆ ಕಾರಣ ದೇವಾಲಯದ ಗರ್ಭಗೃಹ ಸ್ವಲ್ಪ ನೈಋತ್ಯಕ್ಕೆ ವಾಲಿಕೊಂಡಿರುವುದಾಗಿರಬಹುದು.

# ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

## ಮಾನವಿಕ ಕರ್ಣಾಟಕ

## ಪ್ರಬುದ್ಧ ಕರ್ಣಾಟಕ

## ವಿಜ್ಞಾನ ಕರ್ಣಾಟಕ

**ವಾರ್ಷಿಕ ಚಂದಾ**

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

| | | |
|---|---|---|
| ವಿದ್ಯಾರ್ಥಿಗಳಿಗೆ | .... | ನಾಲ್ಕು ರೂಪಾಯಿ |
| ಇತರರಿಗೆ | .... | ಆರು ರೂಪಾಯಿ |
| ಸಂಸ್ಥೆಗಳಿಗೆ | .... | ಎಂಟು ರೂಪಾಯಿ |

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)

(ಪ್ರತಿಯೊಂದಕ್ಕೂ)

ಡೈರೆಕ್ಟರ್

'ಪ್ರಸಾರಾಂಗ'

ಮಾನಸ ಗಂಗೋತ್ರಿ, ಮೈಸೂರು–೫೭೦೦೦೬